
ಜನಮನದ ದನಿ


# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ


ಜಮ್ಮು ಮತ್ತು ಕಾಶ್ಮೀರದಲ್ಲಿ ಸಿನಿಮಾ ಶೂಟಿಂಗ್‌ಗಾಗಿ ಬಾಲಿವುಡ್ ಮತ್ತೆ ಹೆಜ್ಜೆ ಹಾಕುತ್ತಿದೆ ಎಂದು ನಟ ಸುನಿಲ್ ಶೆಟ್ಟಿ ಅವರು ಭಾನುವಾರು ಹೇಳಿದ್ದಾರೆ.

10 ನವೆಂಬರ್ 2025 ಸೋಮವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 240 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629


ಜೀವನ್ಮರಣ ಸಂತೆಯಲ್ಲೊಂದು ದಿನ » 2


ರಾಜ್ಯದಲ್ಲಿ 18 ಸಾವಿರ ಶಿಕ್ಷಕರ ನೇಮಕಾತಿ » 3


ದೆಹಲಿಯ ಔತಣಕೂಟದತ್ತ ಎಲ್ಲರ ಚಿತ್ತ » 4

## ಬಾಹುಬಲಿ ಮೂರ್ತಿ ಶಾಂತಿ ಸಂದೇಶ ಸಾರುವ ಸಂಕೇತ

### ಶ್ರವಣಬೆಳಗೊಳದಲ್ಲಿ ನಾಲ್ಕನೇ ಬೆಟ್ಟ ಶಾಂತಿಗಿರಿ ಅನಾವರಣಗೊಳಿಸಿದ ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್

• ಪ್ರಜೋದಯ ವರದಿ

**ಶ್ರವಣಬೆಳಗೊಳ:** ಜೈನ ಧರ್ಮ ಇಡಿ ವಿಶ್ವಕ್ಕೆ ಸತ್ಯ, ಅಹಿಂಸೆಯ ಬೋಧನೆ ಮಾಡುತ್ತಿದೆ. ಶ್ರವಣಬೆಳಗೊಳದಲ್ಲಿರುವ ಬಾಹುಬಲಿ ಮೂರ್ತಿಯು ಜೈನ ಧರ್ಮದ ಪ್ರತೀಕ ಮಾತ್ರವಲ್ಲದೆ, ವಿಶ್ವಕ್ಕೆ ಶಾಂತಿ ಸಂದೇಶವನ್ನು ಸಾರುವ ಸಂಕೇತವೂ ಆಗಿದೆ ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಹೇಳಿದರು.



ಶಾಂತಿಸಾಗರ ಮಹಾರಾಜರ ಶ್ರವಣಬೆಳಗೊಳ ಭೇಟಿಯ ಶತಮಾನೋತ್ಸವದ ಅಂಗವಾಗಿ ಭಾನುವಾರ ಬಾಹುಬಲಿ ತಾಂತ್ರಿಕ ಮಹಾವಿದ್ಯಾಲಯದ ಆವರಣದಲ್ಲಿ ನಡೆದ ಶಾಂತಿಸಾಗರ ಮಹಾರಾಜರ 10 ಅಡಿ ಎತ್ತರದ ಪ್ರತಿಮೆ ಅನಾವರಣ, ಅವರ ಚರಿತ್ರೆಯ ಶಿಲಾಶಾಸನ, ನಾಲ್ಕನೇ ಬೆಟ್ಟ ಶಾಂತಿಗಿರಿ ಅನಾವರಣ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ವಿಶ್ವದೆಲ್ಲೆಡೆ ಸಂಘರ್ಷದ ಸನ್ನಿವೇಶಗಳು ಉಂಟಾಗಿದ್ದು, ಮನುಕುಲವೇ ಅಪಾಯಕ್ಕೆ ಸಿಲುಕಿದೆ. ಇಂತಹ ಸನ್ನಿವೇಶದಲ್ಲಿ ವಿಶ್ವ ಶಾಂತಿ ಸ್ಥಾಪಿಸಲು ಜೈನ ಮುನಿಗಳ ಮಾರ್ಗದರ್ಶನ ಅಗತ್ಯವಾಗಿದೆ ಎಂದರು.

ಶ್ರವಣಬೆಳಗೊಳ ಹಾಗೂ ಇಡಿ ಕರ್ನಾಟಕ ಅತ್ಯಂತ ಪವಿತ್ರ ಕ್ಷೇತ್ರವಾಗಿದ್ದು, ದೇಶದ ಕಲೆ ಸಂಸ್ಕೃತಿಯನ್ನು ಸಂರಕ್ಷಿಸಿ ಬೆಳೆಸುವಲ್ಲಿ ಕನ್ನಡಿಗರ ಪಾತ್ರ ಅತ್ಯಂತ ಮಹತ್ವದ್ದು. ಸರ್ಕಾರ ಜ್ಞಾನಭಾರತಿ ಮಿಷನ್ ಅಡಿಯಲ್ಲಿ ಪ್ರಾಚೀನ ಭಾಷೆಗಳ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡುತ್ತಿದೆ. ಪ್ರಾಕೃತ ಮತ್ತು ಕನ್ನಡಕ್ಕೆ ಪಾರಂಪರಿಕ ಭಾಷೆಯ ಸ್ಥಾನಮಾನ ನೀಡಲಾಗಿದ್ದು, ಸಂಶೋಧನೆ ಹಾಗೂ ಭಾಷೆಯ ಬೆಳವಣಿಗೆಗೆ ಹೆಚ್ಚಿನ ಮಹತ್ವ ನೀಡಲಾಗಿದೆ. ಜೈನ ಧರ್ಮದ ಪ್ರಾಚೀನ ಸಾಹಿತ್ಯ ಹಸ್ತಪ್ರತಿಗಳ ಸಂಶೋಧನೆ ಮತ್ತು ಅಧ್ಯಯನಕ್ಕೆ ಇದರಿಂದ ಸಹಕಾರಿಯಾಗಿದೆ ಎಂದು ಹೇಳಿದರು.

ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ಅವರು ಘನ ಉಪಸ್ಥಿತಿ ವಹಿಸಿ ಮಾತನಾಡಿದ ಅವರು, ಭಗವಾನ್ ಮಹಾವೀರರು ನಮಗೆ ಬದುಕು ಮತ್ತು ಬದುಕಲು ಬಿಡಿ ಎಂಬ ದೈವಿಕ ಸಂದೇಶವನ್ನು ನೀಡಿದರು. ನಾವು ಅವರ ದೈವಿಕ ಸಂದೇಶದಿಂದ ಸ್ಫೂರ್ತಿ ಪಡೆದು, ಅವರು ತೋರಿಸಿದ ಮಾರ್ಗವನ್ನು ಅನುಸರಿಸಿ ವಿಶ್ವ ಶಾಂತಿ ಮತ್ತು ಕಲ್ಯಾಣಕ್ಕಾಗಿ ಕೆಲಸ ಮಾಡಬೇಕೆಂದು ಹೇಳಿದರು.

ಮೋಕ್ಷವನ್ನು ಪಡೆದ ಭಗವಾನ್ ಬಾಹುಬಲಿ, ಮಾನವನ ಆಧ್ಯಾತ್ಮಿಕ ಉನ್ನತಿ ಮತ್ತು ಮಾನಸಿಕ ಶಾಂತಿಗಾಗಿ ನಾಲ್ಕು ತತ್ವಗಳನ್ನು ಪ್ರತಿಪಾದಿಸಿದರು. ಅಹಿಂಸೆಯ ಮೂಲಕ ಸಂತೋಷ, ತ್ಯಾಗದ ಮೂಲಕ ಶಾಂತಿ, ಸ್ನೇಹದ ಮೂಲಕ ಪ್ರಗತಿ ಮತ್ತು ಧ್ಯಾನದ ಮೂಲಕ ಸಾಧನೆ ಎಂಬ ಸಂದೇಶ ನೀಡಿದ್ದರು. ಈ ತತ್ವಗಳು ಇಂದಿಗೂ ಪ್ರಸ್ತುತವಾಗಿವೆ ಮತ್ತು ವಿಶ್ವ ಶಾಂತಿ ಮತ್ತು ಕಲ್ಯಾಣಕ್ಕೆ ದಾರಿ ಮಾಡಿಕೊಡುತ್ತವೆಂದು ರಾಜ್ಯಪಾಲರು ಹೇಳಿದರು.

ಜೈನ ಧರ್ಮವು ಪ್ರಾಚೀನ ಶ್ರವಣ ಸಂಪ್ರದಾಯದಿಂದ ಪಡೆದ ಧರ್ಮವಾಗಿದ್ದು, ಇದನ್ನು ಭಗವಾನ್ ಋಷಭದೇವ ಮತ್ತು ನಂತರದ ತೀರ್ಥಂಕರರು ಉತ್ತೇಜಿಸಿದರು. 24 ನೇ ತೀರ್ಥಂಕರರಾದ ಭಗವಾನ್ ಮಹಾವೀರ ಸ್ವಾಮಿಗಳು ಇದಕ್ಕೆ ವ್ಯವಸ್ಥಿತ ರೂಪ ನೀಡಿದರು. ಭಗವಾನ್ ಮಹಾವೀರ ಸ್ವಾಮಿಗಳು ಸತ್ಯ, ಅಹಿಂಸೆ, ಕಳ್ಳತನ ಮಾಡದಿರುವುದು, ಬ್ರಹ್ಮಚರ್ಯ ಮತ್ತು ಸ್ವಾಧೀನ ಮಾಡದಿರುವುದು ಮುಂತಾದ ತತ್ವಗಳ ಮೂಲಕ ಶಾಂತಿಯುತ ಸಹಬಾಳ್ವೆ ಮತ್ತು ಸಾರ್ವತ್ರಿಕ ಸಹೋದರತ್ವದ ಹಾದಿಯನ್ನು ಬೆಳಗಿಸಿದರು. ಅವರು ಅಹಿಂಸಾ ಪರಮೋ ಧರ್ಮಃ ಎಂದು ಹೇಳುತ್ತಿದ್ದರು, ಅಂದರೆ ಅಹಿಂಸೆಯೇ ಶ್ರೇಷ್ಠ ಧರ್ಮ. ದೈಹಿಕ ಹಿಂಸೆಯಲ್ಲಿ ಮಾತ್ರವಲ್ಲದೆ ನಮ್ಮ ಆಲೋಚನೆಗಳು, ಮಾತುಗಳು ಮತ್ತು ಕಾರ್ಯಗಳಲ್ಲಿಯೂ ಸಹಾನುಭೂತಿ ಇರಬೇಕೆಂದು ಅವರು ನಮಗೆ ಕಲಿಸಿದರು.

ಇಂದಿನ ಕಾಲದಲ್ಲಿ, ಸಮಾಜದಲ್ಲಿ ಉದ್ವಿಗ್ನತೆ, ಕೋಪ ಮತ್ತು ಹಿಂಸೆ ಹೆಚ್ಚುತ್ತಿರುವಾಗ, ಮಹಾವೀರ ಸ್ವಾಮಿಗಳ ಈ ಸಂದೇಶವು ನಮ್ಮನ್ನು ಶಾಂತಿ, ಸಹಬಾಳ್ವೆ ಮತ್ತು ಪ್ರೀತಿಯ ಕಡೆಗೆ ಕರೆದೊಯ್ಯುತ್ತದೆ ಎಂದು ತಿಳಿಸಿದರು.

ಆಚಾರ್ಯ ಶ್ರೀ ಶಾಂತಿಸಾಗರ್ ಮಹಾರಾಜ್ ಸಂಯಮದ ಜೀವಂತ ಸಾಕಾರವಾಗಿದ್ದರು. ಆಧ್ಯಾತ್ಮಿಕ ಜೀವನವು ಧರ್ಮಗ್ರಂಥಗಳಲ್ಲಿ ಮಾತ್ರವಲ್ಲದೆ ನಡವಳಿಕೆಯಲ್ಲೂ ಇದೆ ಎಂದು ಅವರು ಪ್ರದರ್ಶಿಸಿದರು. ಜೈನ ಧರ್ಮದ ಸಂಪ್ರದಾಯವನ್ನು ಅದ್ಭುತ ಪುನರುಜ್ಜೀವನಗೊಳಿಸಿರುವ ಅವರು ಸಂಯಮ ಮತ್ತು ಧ್ಯಾನದ ಆದರ್ಶಗಳಿಂದ ಸಮಾಜವನ್ನು ಬೆಳಗಿಸಿದ್ದಾರೆಂದು ತಿಳಿಸಿದರು.

ಒಬ್ಬ ಅನ್ವೇಷಕನು ದೃಢ ನಿಶ್ಚಯ, ಆತ್ಮವಿಶ್ವಾಸ ಮತ್ತು ಸತ್ಯದ ಹಾದಿಯಲ್ಲಿ ನಡೆದಾಗ, ಯುಗಗಳ ಹರಿವು ಕೂಡ ಅವನ ಭಕ್ತಿಯ ಮುಂದೆ ತಲೆಬಾಗುತ್ತದೆ ಎಂಬುದಕ್ಕೆ ಅವರ ಜೀವನ ಸಾಕ್ಷಿಯಾಗಿದೆ. ಅವರ ಹೆಸರಿನಲ್ಲಿರುವ ಸಾಗರ ಎಂಬ ಪದಗಳು ಅವರ ವ್ಯಕ್ತಿತ್ವದ ಸಾರವನ್ನು ಸಾಕಾರಗೊಳಿಸುತ್ತವೆ. ಶಾಂತಿಯು ಬಾಹ್ಯ ಸಂದರ್ಭಗಳಿಂದಲ್ಲ, ಆದರೆ, ಸ್ವಯಂ ನಿಯಂತ್ರಣ ಮತ್ತು ವಿವೇಕಯುತ ನಡವಳಿಕೆಯಿಂದ ಉಂಟಾಗುತ್ತದೆ ಎಂದು ತೋರಿಸಿದರು.

ಸಾಗರದಂತೆ, ಅವರ ಹೃದಯವು ವಿಶಾಲವಾಗಿತ್ತು - ತನ್ನೊಳಗಿನ ಪ್ರತಿಯೊಬ್ಬರನ್ನು ಒಳಗೊಳ್ಳುತ್ತಿತ್ತು, ಎಲ್ಲರಿಗೂ ಯೋಗಕ್ಷೇಮದ ಮನೋಭಾವದಿಂದ ತುಂಬಿತ್ತು ಎಂದು ಶ್ಲಾಘಿಸಿದರು. ಕಂದಾಯ ಮತ್ತು ಹಾಸನ ಜಿಲ್ಲಾ ಉಸ್ತುವಾರಿ ಸಚಿವರಾದ ಕೃಷ್ಣ ಬೈರೇಗೌಡ, ಯೋಜನೆ ಮತ್ತು ಸಾಂಖ್ಯಿಕ ಖಾತೆ ಸಚಿವ ಡಿ. ಸುಧಾಕರ್, ಸಂಸದ ಶ್ರೇಯಸ್ ಪಟೇಲ್, ಶಾಸಕ ಸಿ.ಎನ್.ಬಾಲಕೃಷ್ಣ, ಬೆಳಗಾವಿ ದಕ್ಷಿಣದ ಶಾಸಕ ಅಭಯ ಪಾಟೀಲ ಇತರರು ಇದ್ದರು.

## ಸೆಂಟ್ರಲ್ ಜೈಲಲ್ಲಿ ರಾಜಾತಿಥ್ಯಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕಿಡಿ

• ಪ್ರಜೋದಯ ವರದಿ

**ಬೆಂಗಳೂರು :** ಪರಪ್ಪನ ಅಗ್ರಹಾರ ಜೈಲಿನಲ್ಲಿ ಐಸಿಸ್ ಉಗ್ರ ಜುಹಾದ್ ಹಮೀದ್ ಶಕೀಲ್ ಮನ್ನಾ ಹಾಗೂ ವಿಕೃತ ಕಾಮಿ ಉಮೇಶ್ ರೆಡ್ಡಿ ಸೇರಿ ಹಲವರಿಗೆ ಮೊಬೈಲ್ ಫೋನ್, ಟಿವಿ ಸೇರಿ ರಾಜಾತಿಥ್ಯ ನೀಡಿರುವ ವಿಡಿಯೋಗಳು ಇತ್ತೀಚಿಗೆ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗುವುದರೊಂದಿಗೆ ಭಾರೀ ಚರ್ಚೆಗೆ ಕಾರಣವಾಗಿದೆ.

ಈ ಕುರಿತು ಪ್ರತಿಕ್ರಿಯಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ರಾಜಾತಿಥ್ಯ ನೀಡಿರುವ ಬಗ್ಗೆ ಗೊತ್ತಾಗಿದೆ. ತಪ್ಪು ಮಾಡಿದವರ ಮೇಲೆ ಕಠಿಣ ಕ್ರಮಕ್ಕೆ ಸೂಚನೆ ನೀಡಲಾಗಿದೆ. ಮುಂದೆ ಈ ರೀತಿ ಆಗದಂತೆ ನೋಡಿಕೊಳ್ಳುತ್ತೇವೆ. ತಪ್ಪು ಮಾಡಿದವರ ಮೇಲೆ ಕ್ರಮಕ್ಕೆ ಸೂಚನೆ ನೀಡಲಾಗಿದೆ ಎಂದು ಹೇಳಿದರು.

ಸಂಬಂಧ ಪಟ್ಟ ಅಧಿಕಾರಿ ರಜೆಯಲ್ಲಿದ್ದಾರೆ. ಗೃಹ ಸಚಿವರು ನಾಳೆ ಸಭೆ ಕರೆದಿದ್ದಾರೆ. ಮುಂದೆ ಈ ರೀತಿ ಆಗದಂತೆ ನೋಡಿಕೊಳ್ಳುತ್ತೇವೆ. ಆ ರೀತಿ ಯಾರು ಮಾಡಿದ್ದಾರೋ ಅವರಿಗೆ, ಅವಕಾಶ ಮಾಡಿಕೊಟ್ಟವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದೆಂದು ಎಚ್ಚರಿಸಿದ್ದಾರೆ.



ಐಸಿಸ್ ಉಗ್ರ ಜುಹಾದ್ ಹಮೀದ್ ಶಕೀಲ್ ಮನ್ನಾ, ವಿಕೃತ ಕಾಮಿ ಉಮೇಶ್ ರೆಡ್ಡಿ ಹಾಗೂ ಗೋಲ್ಡ್ ಸ್ಮಗ್ಲಿಂಗ್ ಕೇಸ್‌ನಲ್ಲಿ ಜೈಲು ಸೇರಿರುವ ನಟಿ ರನ್ಯಾ ರಾವ್ ಪ್ರಿಯಕರ ತರುಣ್ ರಾಜ್ ಜೈಲಿನಲ್ಲಿ ಬಿಂದಾಸ್ ಲೈಫ್ ನಡೆಸುತ್ತಿರುವ ಫೋಟೋ ಮತ್ತು ವಿಡಿಯೋಗಳು ಶನಿವಾರ ವೈರಲ್ ಆಗಿತ್ತು. ಫೋನ್‌ನಲ್ಲಿ ಮಾತನಾಡುತ್ತಾ, ಎಲ್‌ಇಡಿ ಟಿವಿ ನೋಡಿಕೊಂಡು ಮಜಾ ಮಾಡುತ್ತಿದ್ದ ದೃಶ್ಯ ವೈರಲ್ ಆಗಿತ್ತು.

ಇನ್ನೂ ಆರ್‌ಎಸ್‌ಎಸ್ ಬ್ಯಾನ್ ಕುರಿತು ಪ್ರತಿಕ್ರಿಯಿಸಿದ ಮುಖ್ಯಮಂತ್ರಿ, ಆರ್‌ಎಸ್‌ಎಸ್ ನ್ನು ಸೀಮಿತಗೊಳಿಸಿ ಸಾರ್ವಜನಿಕ ಸ್ಥಳಗಳಲ್ಲಿ ಅನುಮತಿ ಪಡೆಯುವುದನ್ನು ಕಡ್ಡಾಯ ಮಾಡಿಲ್ಲ. ಯಾವುದೇ ಸಂಘ ಸಂಸ್ಥೆಗಳು ಆಯಾ ಜಿಲ್ಲಾಧಿ ಕಾರಿಗಳ ಬಳಿ ಅನುಮತಿ ಪಡೆಯ ಬೇಕೆಂದು ಆದೇಶದಲ್ಲಿ ಹೇಳಿದೆ. ಅವರು ಹಾಗೆ ಭಾವಿಸಿ ಕೊಂಡಿದ್ದಾರೆ ಅಷ್ಟೆ. ಆರ್.ಎಸ್.ಎಸ್ ಮುಖ್ಯಸ್ಥ ರಾದ ಭಾಗವತ್ ಅವರು ಹೇಳಿದ್ದಕ್ಕೆಲ್ಲ ನಾವು ಉತ್ತರಿಸಲಾಗುವುದಿಲ್ಲ ಎಂದರು.

## ಶ್ರವಣಬೆಳಗೊಳ ಭಾರತದ ಪ್ರಾಚೀನ ನಾಗರಿಕತೆಯ ಮುಕುಟಮಣಿ : ಹೆಚ್.ಡಿ.ಕೆ.

• ಪ್ರಜೋದಯ ವರದಿ

**ಶ್ರವಣಬೆಳಗೊಳ :** ಶ್ರವಣಬೆಳಗೊಳ ಭಾರತದ ಪ್ರಾಚೀನ ನಾಗರಿಕತೆಯ ಮುಕುಟಮಣಿಯಾಗಿದೆ ಎಂದು ಕೇಂದ್ರ ಉಕ್ಕು ಮತ್ತು ಭಾರೀ ಕೈಗಾರಿಕೆಗಳ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು ಹೇಳಿದರು.



ನಗರದ ಬಾಹುಬಲಿ ತಾಂತ್ರಿಕ ಮಹಾವಿದ್ಯಾಲಯದ ಆವರಣದಲ್ಲಿ ಭಾನುವಾರ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ನಾಲ್ಕನೇ ಬೆಟ್ಟಕ್ಕೆ ಪದನಾಮ ಅನಾವರಣ ಮಾಡಿ ಮಾತನಾಡಿದ ಅವರು, ಇಲ್ಲಿನ ಚಂದ್ರಗಿರಿಯಲ್ಲಿ 2000 ವರ್ಷಗಳ ಹಿಂದೆ ಮೌರ್ಯ ವಂಶದ ಸಂಸ್ಥಾಪಕ ಚಂದ್ರಗುಪ್ತ ಮೌರ್ಯ ಸಲ್ಲೇಖನ ವ್ರತದ ಮೂಲಕ ಜಿನಪಾದ ಸೇರಿದ ಇತಿಹಾಸವಿದೆ ಇಂದು ಅನಾವರಣಗೊಂಡಿರುವ ಶಾಂತಿ ಸಾಗರ ಸ್ವಾಮೀಜಿಯವರ ಪ್ರತಿಮೆಯು ಮುಂದಿನ ಪೀಳಿಗೆಗೂ ಅವರು ಹಾಕಿ ಕೊಟ್ಟ ಸನ್ಮಾರ್ಗವನ್ನು ತೋರಿಸುವ ಸಂಕೇತವಾಗಿದೆ ಎಂದರು.

ಸ್ವಸ್ತಿಶ್ರೀ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮೀಜಿ ಅವರು ಮಾತನಾಡಿ, ಶಾಂತಿ ಸಾಗರ ಮಹಾರಾಜರ ಜೀವನ ಸಂದೇಶ ಅಜರಾಮರವಾಗಿ ಉಳಿಯಬೇಕೆಂಬ ಉದ್ದೇಶದಿಂದ ಶಿಲಾಶಾಸನ ಪ್ರತಿಷ್ಠಾಪನೆ ಮಾಡುವುದರ ಜೊತೆಗೆ ನಾಲ್ಕನೇ ಬೆಟ್ಟಕ್ಕೆ ಶಾಂತಿಸಾಗರ ಮಹಾರಾಜರ ಹೆಸರಿಡಲಾಗುತ್ತಿದೆ ಎಂದು ತಿಳಿಸಿದರು.

ದಿಗಂಬರ ಮುನಿ ಪರಂಪರೆಗೆ ಅಪಾರ ಕೊಡುಗೆ ನೀಡಿರುವ ಶಾಂತಿ ಸಾಗರ ಮಹಾರಾಜರು 1925 ರಲ್ಲಿ ಶ್ರೀ ಕ್ಷೇತ್ರ ಶ್ರವಣಬೆಳಗೊಳಕ್ಕೆ ಭೇಟಿ ಮಹಾಮಸ್ತಕಾಭಿಷೇಕದಲ್ಲಿ ಭಾಗವಹಿಸಿ ನೂರು ವರ್ಷಗಳು ಪೂರ್ಣಗೊಂಡ ಹಿನ್ನಲೆಯಲ್ಲಿ ಅದರ ಸವಿನೆನಪಿಗಾಗಿ ಅವರ ಪ್ರತಿಮೆ ಪ್ರತಿಷ್ಠಾಪನೆ ಮಾಡಲಾಗುತ್ತಿದೆ ಎಂದು ತಿಳಿಸಿದರು. ಪರಮಪೂಜ್ಯ ತಪಶ್ಚರ್ಯಾ ಚಕ್ರವರ್ತಿ ಆಚಾರ್ಯ ಶ್ರೀ 108 ಸುವಿಧಿಸಾಗರ ಮಹಾರಾಜರು, ಪರಮಪೂಜ್ಯ ಸಂಯಮ ಮೂರ್ತಿ ಆಚಾರ್ಯ ಶ್ರೀ 108 ವರ್ಧಮಾನಸಾಗರ ಮಹಾರಾಜರು (ದಕ್ಷಿಣ), ಪ.ಪೂ. ನಿರ್ಯಾಪಕ ಶ್ರಮಣ ಮುನಿಶ್ರೀ 108 ಧರ್ಮಸಾಗರ, ಪ.ಪೂ. ನಿರ್ಯಾಪಕ ಶ್ರಮಣ ಮಹಾರಾಜರು ಮುನಿಶ್ರೀ 108 ವಿದ್ಯಾಸಾಗರ ಮಹಾರಾಜರು, ಪ.ಪೂ. ನಿರ್ಯಾಪಕ ಶ್ರಮಣ ಮುನಿಶ್ರೀ 108 ಸಿದ್ಧಾಂತಸಾಗರ ಮಹಾರಾಜರು ದಿವ್ಯ ಸಾನ್ನಿಧ್ಯ ವಹಿಸಿದ್ದರು.

## ಜಿಲ್ಲಾ ಪತ್ರಕರ್ತರ ಸಂಘಕ್ಕೆ ಜೆ.ಆರ್.ಕೆಂಚೇಗೌಡ ಅಧ್ಯಕ್ಷ

### ಸಂಘಟಿತ ಹೋರಾಟಕ್ಕೆ ಒಲಿದ ಜಯ: ಶೇ.99 ರಷ್ಟು ದಾಖಲೆಯ ಮತದಾನ


• ಪ್ರಜೋದಯ ವರದಿ

**ಹಾಸನ:** ಭಾರೀ ಕುತೂಹಲ ಕೆರಳಿಸಿದ್ದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಚುನಾವಣೆಯಲ್ಲಿ ಜೆ.ಆರ್. ಕೆಂಚೇಗೌಡ ಹಾಗು ನಂಜುಂಡೇಗೌಡ ಬಣ ವಿಜಯ ಪತಾಕೆ ಹಾರಿಸಿದೆ.

ಜಿಲ್ಲಾಧಿಕಾರಿ ಕಚೇರಿ ಹಿಂಭಾಗದಲ್ಲಿರುವ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಕಚೇರಿಯಲ್ಲಿ ಮತದಾನ ನಡೆಯಿತು. ಅಧ್ಯಕ್ಷರಾಗಿ ಪತ್ರಕರ್ತ ಜೆ.ಆರ್.ಕೆಂಚೇಗೌಡ ಹಾಗು ಪ್ರಧಾನ ಕಾರ್ಯದರ್ಶಿಯಾಗಿ ಕೆ.ಜಿ.ಸುರೇಶ್ ಆಯ್ಕೆಯಾದರು.

ಜೆ.ಆರ್.ಕೆಂಚೇಗೌಡ ಅವರು 201 ಮತ ಪಡೆದು ಭರ್ಜರಿ ಗೆಲುವು ಸಾಧಿಸಿದರು. ಪ್ರತಿಸ್ಪರ್ಧಿ ಕೆ.ಹೆಚ್. ವೇಣುಕುಮಾರ್ 81 ಮತ ಪಡೆದು ಪರಾಭವಗೊಂಡರು.

ಪ್ರಧಾನ ಕಾರ್ಯದರ್ಶಿ ಸ್ಥಾನಕ್ಕೆ ಕೆ.ಜಿ.ಸುರೇಶ್, ಬಿ.ಸಿ.ಶಶಿಧರ್ ಹಾಗು ಜೋಸೆಫ್ ಅವರ ನಡುವೆ ತ್ರಿಕೋನ ಸ್ಪರ್ಧೆ ಏರ್ಪಟ್ಟಿತ್ತು. ಕೆ.ಜಿ. ಸುರೇಶ್ ಅವರು 170 ಮತಗಳನ್ನು ಪಡೆದು ವಿಜೇತರಾದರೆ, ಬಿ.ಸಿ. ಶಶಿಧರ್ 90 ಹಾಗು ಜೋಸೆಫ್ 12 ಮತಗಳನ್ನು ಪಡೆದರು.



ಮೂವರು ಉಪಾಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಪತ್ರಕರ್ತ ನಂಜುಂಡೇಗೌಡ (225 ಮತ) ಹಾಗು ಜಿ.ಪ್ರಕಾಶ್ (221 ಮತ) ಪಡೆದು ಭರ್ಜರಿ ಗೆಲುವು ಪಡೆದರೆ ಮತ್ತೊಂದು ಸ್ಥಾನಕ್ಕಾಗಿ ಹೆಚ್.ಟಿ.ಮೋಹನ್ ಹಾಗು ನಾಗರಾಜ್ ಹೆತ್ತೂರು ನಡುವೆ ತೀವ್ರ ಜಿದ್ದಾಜಿದ್ದಿನ ಸ್ಪರ್ಧೆ ಏರ್ಪಟ್ಟು ಕೊನೆಗೆ ಹೆಚ್.ಟಿ.ಮೋಹನ್ ಕೇವಲ 3 ಮತಗಳ ಅಂತರದಲ್ಲಿ ರೋಚಕ ಗೆಲುವು ಸಾಧಿಸಿದರು.



ಮೂವರ ಕಾರ್ಯದರ್ಶಿ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಖುಷ್ವಂತ್ 188, ಬಿ.ಆರ್.ಬೊಮ್ಮೇಗೌಡ 210 ಹಾಗು ಸುವರ್ಣ ಹರೀಶ್ 178 ಮತಗಳೊಂದಿಗೆ ಭರ್ಜರಿ ಗೆಲುವು ಸಾಧಿಸಿದರೆ, ಪ್ರತಿಸ್ಪರ್ಧಿಗಳಾದ ವೆಂಕಟೇಶ್ ಬ್ಯಾಕರವಳ್ಳಿ 72, ಸಿ.ಎನ್.ನಾಗರಾಜ್ 68 ಹಾಗು ಸಿ.ಬಿ. ಸಂತೋಷ್ 81 ಮತ ಪಡೆದು ಪರಾಭವಗೊಂಡರು.

ಖಜಾಂಚಿ ಸ್ಥಾನಕ್ಕೆ ಪಿ.ಎ. ಶ್ರೀನಿವಾಸ್ ಹಾಗು ಪ್ರಕಾಶ್ ನಡುವೆ ಸ್ಪರ್ಧೆ ಏರ್ಪಟ್ಟು ಪ್ರಕಾಶ್ 189 ಮತಗಳನ್ನು ಪಡೆದು ವಿಜೇತರಾದರೆ, ಶ್ರೀನಿವಾಸ್ 85 ಮತಗಳನ್ನು ಪಡೆದರು .ರಾಜ್ಯ ಕಾರ್ಯಕಾರಿ ಸಮಿತಿ ಸ್ಥಾನಕ್ಕೆ ಕೆಪಿಎಸ್ ಪ್ರಮೋದ್ ಹಾಗು ಹಿರಿಯ ಪತ್ರಕರ್ತ ಕೆ.ಆರ್. ಮಂಜುನಾಥ್ ಸ್ಪರ್ಧಿಸಿದ್ದರು. ಕೆಪಿಎಸ್ ಪ್ರಮೋದ್ 175 ಮತಗಳನ್ನು ಪಡೆದು ಗೆಲುವು ಸಾಧಿಸಿದರೆ, ಕೆ.ಆರ್. ಮಂಜುನಾಥ್ ಕೇವಲ 106 ಮತ ಪಡೆದು ಪ್ರಬಲ ಪೈಪೋಟಿ ಕೊಟ್ಟರು. 15 ಕಾರ್ಯಕಾರಿ ಸಮಿತಿ ಸದಸ್ಯ ಸ್ಥಾನಕ್ಕೆ 22 ಸ್ಪರ್ಧಿಗಳು ಕಣದಲ್ಲಿದ್ದು. ತಡರಾತ್ರಿ ವರೆಗೆ ಮತದಾನ ನಡೆಯಿತು.

**ದಾಖಲೆಯ ಮತದಾನ**

ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘಕ್ಕೆ ಭಾನುವಾರ ನಡೆದ ಚುನಾವಣೆಯಲ್ಲಿ ದಾಖಲೆಯ ಶೇ.99 ರಷ್ಟು ಮತದಾನವಾಯಿತು. ಒಟ್ಟು 289 ಮತಗಳ ಪೈಕಿ 287 ಮತಗಳು ಚಲಾವಣೆಯಾದವು. ಬೆಳಿಗ್ಗೆ 8 ಗಂಟೆಗೆ ಆರಂಭವಾದ ಮತದಾನ ಮಧ್ಯಾಹ್ನ 3 ಗಂಟೆವರೆಗೂ ನಡೆಯಿತು. ಬೆಳಿಗ್ಗೆನಿಂದಲೇ ಸರತಿ ಸಾಲಿನಲ್ಲಿ ನಿಂತು ಪತ್ರಕರ್ತರು ಮತದಾನ ಮಾಡಿದರು. ಅಹಿತಕರ ಘಟನೆಗಳು ನಡೆಯದೆ ಶಾಂತಿಯುತ ಮತದಾನ ನಡೆಯಿತು. ಮುನ್ನೆಚ್ಚರಿಕಾ ಕ್ರಮವಾಗಿ ಪೊಲೀಸ್ ಬಂದೋಬಸ್ತ್ ನಿಯೋಜಿಸಲಾಗಿತ್ತು.

» ನಾಲ್ಕನೇ ಪುಟದಲ್ಲಿ

## ಜನಪರ ಕೆಲಸ ಮಾಡಿದರೆ ಉನ್ನತ ಸ್ಥಾನಗಳು ಲಭ್ಯ : ಕೆ.ಎಂ.ಶಿವಲಿಂಗೇಗೌಡ

• ಪ್ರಜೋದಯ ವರದಿ

**ಅರಸೀಕೆರೆ :** ಚುನಾಯಿತ ಜನಪ್ರತಿನಿಧಿಗಳು ತಮಗೆ ಸಿಕ್ಕ ಅವಕಾಶವನ್ನು ಬಳಸಿಕೊಂಡು ಜನಪರ ಕೆಲಸ ಕಾರ್ಯಗಳನ್ನು ಮಾಡಿದ್ದೆಯಾದರೆ ರಾಜಕೀಯವಾಗಿ ಇನ್ನಷ್ಟು ಉನ್ನತ ಸ್ಥಾನಮಾನಗಳು ತಮ್ಮನ್ನು ಅರಸಿ ಬರುತ್ತದೆ ಶಾಸಕ ಕೆ.ಎಂ.ಶಿವಲಿಂಗೇಗೌಡ ಅವರು ಸ್ಥಳೀಯ ಸಂಸ್ಥೆಗಳ ಚುನಾಯಿತ ಜನಪ್ರತಿನಿಧಿಗಳಿಗೆ ಕಿವಿಮಾತು ಹೇಳಿದರು.



ತಾಲೂಕಿನ ಮುದುಡಿ ಗ್ರಾಮ ಪಂಚಾಯಿತಿಯ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ನಾಗೇಶ್ (ಚಂದ್ರ ಶೇಖರಯ್ಯ) ಅವರನ್ನು ಅಭಿನಂದಿಸಿ ಮಾತನಾಡಿದ ಅವರು, ಸ್ಥಳೀಯ ಸಂಸ್ಥೆಗಳ ಜನಪ್ರತಿನಿಧಿಗಳು ಜನರ ಬೇಕು, ಬೇಡಗಳನ್ನು ಹತ್ತಿರದಿಂದ ಬಲ್ಲವರಾಗಿದ್ದು, ಜನರ ನೋವು ನಲಿವಿಗೆ ಸ್ಪಂದಿಸಿ ಕೆಲಸ ಮಾಡುವ ಮನಸ್ಥಿತಿಯನ್ನು ನೀವು ಬಳಸಿ ಕೊಂಡಿದ್ದೆಯಾದರೆ ಭವಿಷ್ಯದಲ್ಲಿ ಉತ್ತಮ ಜನನಾಯಕರಾಗಿ ಹೊರಹೊಮ್ಮುವುದರಲ್ಲಿ ಸಂದೇಹವಿಲ್ಲ ಎಂದರು.

ನಗರಸಭೆ ಸೇರಿ ಗ್ರಾಮ ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯಿತಿ, ಸ್ಥಳೀಯ ಸಂಸ್ಥೆಗಳ ಚುನಾಯಿತ ಜನಪ್ರತಿನಿಧಿಗಳು ತಮ್ಮ ಕ್ಷೇತ್ರ ವ್ಯಾಪ್ತಿಯಲ್ಲಿ ಜನಪರವಾಗಿ ಮಾಡಬೇಕಿರುವ ಕೆಲಸ ಕಾರ್ಯಗಳನ್ನು ಅರಿತು ನನ್ನ ಗಮನಕ್ಕೆ ತಂದರೆ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಸಾಧ್ಯವಾಗಲಿದೆ. ಇದಕ್ಕೆ ನಮ್ಮ ಪಕ್ಷ, ಪ್ರತಿಪಕ್ಷವೆಂಬ

» ನಾಲ್ಕನೇ ಪುಟದಲ್ಲಿ

## ಇಂದು ಹಳೇಬೀಡು ಹೊಯ್ಸಳೇಶ್ವರ ರಥೋತ್ಸವ

**ಹಾಸನ :** ಹಳೇಬೀಡು ಹೊಯ್ಸಳೇಶ್ವರ ರಥೋತ್ಸವ ನ,10 ರಂದು ನಡೆಯಲಿದೆ.

ಅಂದು ಬೆಳಿಗ್ಗೆ ಗರ್ಭಗುಡಿಯ ಹೊಯ್ಸಳೇಶ್ವರ ಸ್ವಾಮಿಗೆ ವಿಶೇಷ ಪೂಜೆ, ಅಭಿಷೇಕ ನೆರವೇರಿಸಲಾಗುವುದು. ಲಿಂಗಕ್ಕೆ ನಾಗಾಭರಣ ಮುಖವಾಡ ಧರಿಸಿ, ವಿಶೇಷ ಅಲಂಕಾರ ನೆರವೇರಿಸಲಾಗುವುದು. ನಂತರ ಉತ್ಸವ ಮೂರ್ತಿಗಳನ್ನು ಪಲ್ಲಕ್ಕಿಯಲ್ಲಿ ಆರೋಹಣ ಮಾಡಿ ಪೂಜೆ ನೆರವೇರಿಸಲಾಗುವುದು.

## ಕೆರೆಯಲ್ಲಿ ಮುಳುಗಿ ಇಬ್ಬರು ವಿದ್ಯಾರ್ಥಿಗಳ ಸಾವು

• ಪ್ರಜೋದಯ ವರದಿ

**ಜಾವಗಲ್ :** ಕುರಿಗಳ ಮೈ ತೊಳೆಯಲು ಕೆರೆಗೆ ತೆರಳಿದ್ದ ಇಬ್ಬರು ಕಾಲು ಜಾರಿ ಕೆರೆಯಲ್ಲಿ ಮುಳುಗಿ ಸಾವನ್ನಪ್ಪಿರುವ ಘಟನೆ ಹೋಬಳಿಯ ಉಂಡಿಗನಾಳು ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಗಿರೀಶ್ ಅವರ ಪುತ್ರ ಸೃಜನ್ (13) ಹಾಗೂ ಶಿವಕುಮಾರ್ ಅವರ ಪುತ್ರ ವಿಜಯ್ ಕುಮಾರ್ (13) ಕೆರೆಯಲ್ಲಿ ಮುಳುಗಿ ಮೃತಪಟ್ಟಿದ್ದಾರೆ. ಇಬ್ಬರೂ ಉಂಡಿಗನಾಳು ಗ್ರಾಮದ ಸರ್ಕಾರಿ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದರು. ಶನಿವಾರ ಶಾಲೆಯಲ್ಲಿ ಆಯೋಜಿಸಿದ್ದ ಕನಕ ಜಯಂತಿ ಕಾರ್ಯಕ್ರಮ ಮುಗಿಸಿಕೊಂಡು ಮನೆಗೆ ಬಂದಿದ್ದ ಇಬ್ಬರೂ, ಕುರಿಗಳನ್ನು ಕೆರೆಯಲ್ಲಿ ಮೈತೊಳೆದುಕೊಂಡು ಬರುವುದಾಗಿ ತಿಳಿಸಿ ಗ್ರಾಮದ ಹೊಸಳ್ಳಿ ಕೆರೆಗೆ ಹೋಗಿದ್ದರು. ಈ ವೇಳೆ ಕಾಲು ಜಾರಿ ಬಿದ್ದು ಮೃತಪಟ್ಟಿದ್ದಾರೆ.

ವಿಷಯ ತಿಳಿಯುತ್ತಿದ್ದಂತೆ ಅಗ್ನಿಶಾಮಕ ದಳದ ಸಿಬ್ಬಂದಿ ಮೃತದೇಹಗಳನ್ನು ಹೊರತೆಗೆದರು. ಅರಸೀಕೆರೆ ತಹಶೀಲ್ದಾರ್ ಸಂತೋಷ್ ಕುಮಾರ್ ಸ್ಥಳಕ್ಕೆ ಭೇಟಿ ನೀಡಿದರು.

## ಇಂದು ಕೆ.ಡಿ.ಪಿ ಸಭೆ

**ಹಾಸನ :** ಬೇಲೂರು ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ನ.10 ರಂದು ಬೆ.11 ಗಂಟೆಗೆ ಶಾಸಕ ಹೆಚ್.ಕೆ.ಸುರೇಶ್ ಅವರ ಅಧ್ಯಕ್ಷತೆಯಲ್ಲಿ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ (ಕೆ.ಡಿ.ಪಿ) ದ್ವಿತೀಯ ತ್ರೈಮಾಸಿಕ ಸಭೆಯನ್ನು ಏರ್ಪಡಿಸಲಾಗಿದೆ ಎಂದು ಬೇಲೂರು ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ತಿಳಿಸಿದ್ದಾರೆ.

## ನ.17 ರಂದು ದಿಶಾ ಸಭೆ

• ಪ್ರಜೋದಯ ವರದಿ

**ಹಾಸನ :** ಸಂಸದ ಶ್ರೇಯಸ್ ಪಟೇಲ್ ಅವರ ಅಧ್ಯಕ್ಷತೆಯಲ್ಲಿ ನ.17 ರಂದು ಬೆ.11 ಗಂಟೆಗೆ ಜಿಲ್ಲಾ ಪಂಚಾಯಿತಿ ಹೊಯ್ಸಳ ಸಭಾಂಗಣದಲ್ಲಿ ಕೇಂದ್ರ ಪುರಸ್ಕೃತ ಯೋಜನೆಗಳ ಪ್ರಗತಿ ಪರಿಶೀಲನಾ (ದಿಶಾ) ಸಭೆಯನ್ನು ಏರ್ಪಡಿಸಲಾಗಿದೆ.


### ಕ್ಯಾಪ್ಟನ್ ಜೊತೆ ಭೀಕರ ಸಂಘರ್ಷ : ಪಟಾಕಿ ಇಲ್ಲದ ಪರದಾಡಿದ ಆರಣ್ಯ ಸಿಬ್ಬಂದಿ

## ಕಾಡಾನೆಗಳ ಕಾಳಗದಲ್ಲಿ ದಂತ ಮುರಿದುಕೊಂಡ ಭೀಮ

• ಪ್ರಜೋದಯ ವರದಿ

**ಬೇಲೂರು :** ಕಾಡಾನೆಗಳ ಕಾಳಗದಲ್ಲಿ ಕಾಡಾನೆ ಭೀಮನ ದಂತ ಮುರಿದಿರುವ ಘಟನೆ ತಾಲ್ಲೂಕಿನ ಜಗಬೋರನಹಳ್ಳಿಯಲ್ಲಿ ಭಾನುವಾರ ನಡೆದಿದೆ.

ಕಳೆದ ಒಂದು ವಾರದಿಂದ ಬೇಲೂರು ತಾಲ್ಲೂಕಿನ ಬಿಕ್ಕೋಡು ಹೋಬಳಿಯ ಹಲವು ಗ್ರಾಮಗಳ ಮುಖ್ಯಬೀದಿಯಲ್ಲಿ ಓಡಾಡುತ್ತಿದ್ದ ಕಾಡಾನೆ ಭೀಮ ಇತ್ತೀಚೆಗೆ ಮತ್ತೊಂದು ಕಾಡಾನೆ ಕ್ಯಾಪ್ಟನ್ ಜೊತೆ ಕಾಣಿಸಿಕೊಂಡಿತ್ತು. ಭಾನುವಾರ ಬೆಳಿಗ್ಗೆ ತಾಲ್ಲೂಕಿನ ಜಗಬೋರನ ಹಳ್ಳಿ ಗ್ರಾಮದಲ್ಲಿ ಕ್ಯಾಪ್ಟನ್ ಜೊತೆ ಕಾಳಗಕ್ಕೆ ಇಳಿದ ಭೀಮ ಕಾಳಗಕ್ಕೆ ಇಳಿದಿದ್ದು, ಜನರು ಆತಂಕಕ್ಕೆ ಒಳಗಾಗಿದ್ದಾರೆ. ರೋಷಾವೇಶದಿಂದ ಗ್ರಾಮದೊಳಗೆ ಬಂದ ಭೀಮ, ನೀರಿನ ಟ್ಯಾಂಕರ್ ಪುಡಿಗಟ್ಟಿ, ಎತ್ತಿನ ಗಾಡಿಯನ್ನು ಎತ್ತಿ ಬಿಸಾಡಿ ರೌದ್ರಾವತಾರ ಪ್ರದರ್ಶನ ಮಾಡಿದೆ.ಕಾಡಾನೆ ಗ್ರಾಮದೊಳಗೆ ಬಂದಾಗ ಅರಣ್ಯ ಇಲಾಖೆಯ ಇಟಿಎಫ್ ಸಿಬ್ಬಂದಿ ಹಿಂಬಾಲಿಸಿದರೂ ಸಹ ಪಟಾಕಿ ಇಲ್ಲದೆ ಆನೆಯನ್ನು ಓಡಿಸಲು ಪರದಾಡಬೇಕಾಯಿತು.



ಕ್ಯಾಪ್ಟನ್ ಜೊತೆಗಿನ ಕಾದಾಟದಲ್ಲಿ ಭೀಮನ ಬಲಭಾಗದ ದಂತ ಸಂಪೂರ್ಣ ಮುರಿದು ಬಿದ್ದಿದ್ದು, ಮತ್ತೊಂದು ಆನೆಗೂ ಗಾಯಗಳಾಗಿವೆ. ಸದ್ಯ ದಂತ ಮುರಿದುಕೊಂಡು ಕಾಫಿ ತೋಟದಲ್ಲಿ ಸೇರಿಕೊಂಡಿರುವ ಸಲಗ ನರಳಾಡುತ್ತಿದ್ದು, ಅರಣ್ಯ ಇಲಾಖೆ ಅಧಿಕಾರಿಗಳು ಆನೆಯನ್ನು ಬೆನ್ನಟ್ಟಿ ಜನರಿಗೆ ತೊಂದರೆ ಆಗದಂತೆ ಎಚ್ಚರ ವಹಿಸಿದ್ದಾರೆ.

ಕಳೆದ ಐದಾರು ವರ್ಷಗಳಿಂದ ಹಾಸನ ಜಿಲ್ಲೆಯ ಸಕಲೇಶಪುರ ಹಾಗೂ ಬೇಲೂರು ತಾಲ್ಲೂಕಿನ ವಿವಿಧೆಡೆ ಸಂಚಾರ ಮಾಡುತ್ತಾ, ಶಾಂತವಾಗಿ ಓಡಾಡುತ್ತಿದ್ದ ಭೀಮ ಇದೀಗ ಆತಂಕ ಸೃಷ್ಟಿಸಿತ್ತು. ಕಳೆದ ಒಂದು ವಾರದಿಂದ ಬೇಲೂರು ತಾಲ್ಲೂಕಿನ ಬಿಕ್ಕೋಡು ಹೋಬಳಿಯ ಹಲವು ಗ್ರಾಮಗಳ ಮುಖ್ಯ ಬೀದಿಯಲ್ಲೇ ನಡೆದು ಹೋಗಿದ್ದ ಭೀಮ, ಇಂದು ಮತ್ತೊಂದು ದೈತ್ಯಾಕಾರದ ಕ್ಯಾಪ್ಟನ್ ಹೆಸರಿನ ಕಾಡಾನೆ ಜೊತೆಗೆ ಓಡಾಡುತ್ತಾ ಭೀತಿ ಸೃಷ್ಟಿಸಿತ್ತು.

**ಶಾರ್ಪ್ ಶೂಟರ್ ಕೊಂದಿದ್ದ ಭೀಮ**

2023ರ ಆಗಸ್ಟ್‌ನಲ್ಲಿ ಬೆನ್ನಿನ ಕೆಳಭಾಗದಲ್ಲಿ ದೊಡ್ಡ ಗಾಯವಾಗಿ ನರಳಾಡಿದ್ದ ಭೀಮನಿಗೆ ಸೆಪ್ಟೆಂಬರ್ 25ರಂದು ಅರಣ್ಯ ಇಲಾಖೆ ಅಧಿಕಾರಿಗಳು ವನ್ಯಜೀವಿ ವೈದ್ಯರ ಮೂಲಕ ಚಿಕಿತ್ಸೆ ಕೊಡಿಸಿದ್ದರು. ಆದರೆ, ಅದು ಪರಿಣಾಮಕಾರಿಯಾಗದ್ದರಿಂದ ಆಗಸ್ಟ್ 31ರಂದು ಭೀಮನಿಗೆ ಅರವಳಿಕೆ ಮದ್ದು ನೀಡಿ ಚಿಕಿತ್ಸೆ ನೀಡಲಾಗಿತ್ತು. ಆಪರೇಷನ್ ನಡೆಸುತ್ತಿದ್ದ ವೇಳೆ ಮದವೇರಿದ್ದ ಭೀಮ ಏಕಾಏಕಿ ಅಂದಿನ ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದ ಶಾರ್ಪ್ ಶೂಟರ್ ವೆಂಕಟೇಶ್ ಮೇಲೆ ದಾಳಿ ಮಾಡಿ ಕೊಂದಿತ್ತು. ಬಳಿಕ ಗಾಯ ಗುಣಮುಖವಾಗಿ ಎಲ್ಲಿಯೂ ಕಾಣಿಸಿಕೊಳ್ಳದೆ ಓಡಾಡುತ್ತಿದ್ದ ಭೀಮ ಇದೀಗ ಮತ್ತೆ ಮದವೇರಿದ ಕಾರಣ ಊರೂರೊಳಗೆ ಅಡ್ಡಾಡುತ್ತಾ ದಾಂಧಲೆ ನಡೆಸುತ್ತಿದೆ.

## ನ.11 ರಂದು ಜನ ಸ್ಪಂದನಾ ಸಭೆ




• ಪ್ರಜೋದಯ ವರದಿ

**ಹಾಸನ :** ತಾಲ್ಲೂಕು ಮಟ್ಟದ ಜನಸ್ಪಂದನಾ, ಸಾರ್ವಜನಿಕ ಕುಂದುಕೊರತೆ ಸಭೆಯನ್ನು ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣೇಗೌಡರ ಅಧ್ಯಕ್ಷತೆಯಲ್ಲಿ ನ.11 ರಂದು ಮಧ್ಯಾಹ್ನ 1ಗಂಟೆಗೆ ಚನ್ನರಾಯಪಟ್ಟಣ ತಾಲ್ಲೂಕು ಕಚೇರಿಯಲ್ಲಿ ಆಯೋಜಿಸಲಾಗಿದೆ.

ಸಾರ್ವಜನಿಕರು ಖುದ್ದು ಹಾಜರಾಗಿ ಮನವಿಗಳನ್ನು ನೀಡಲು ತೆರೆಯಲಾದ ಕೌಂಟರ್‌ಗಳಲ್ಲಿ ಅರ್ಜಿಗಳನ್ನು ದಾಖಲಿಸಿಕೊಂಡು ಟೋಕನ್ ಸ್ವೀಕರಿಸಿ, ತಮ್ಮ ಅಹವಾಲು ಸಲ್ಲಿಸಬಹುದಾಗಿದೆ ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ಮಂಜುನಾಥ್ ಅವರು ತಿಳಿಸಿದ್ದಾರೆ.

# ಜೀವನ್ಮರಣ ಸಂತೆಯಲ್ಲೊಂದು ದಿನ



**ಸರ್** ಗುಡ್ ಮಾರ್ನಿಂಗ್, ಮೇ ಐ ಕಮೀನ್ ಸರ್ ನಿತ್ಯ ಆಫೀಸಿನ ಅವಧಿ ಪ್ರಾರಂಭ ವಾಗುತ್ತಲೇ ಹಿಂದಿನ ದಿನ ರೆಡಿ ಮಾಡಿದ ಹತ್ತಾರು ಕಾಗದ ಪತ್ರಗಳಿಗೆ ಸಹಿ ಪಡೆಯಲು, ಇಲ್ಲವೇ ಹಿಂದಿನ ದಿನದ ಎಲ್ಲಾ ಫೈಲುಗಳ ಚೆಕ್ ಮಾಡಿಸಲು, ಕೈಯಲ್ಲಿ ಫೈಲುಗಳ ಕಟ್ಟು ಹಿಡಿದು ಬಾಗಿಲ ಮರೆಯಲ್ಲಿ ನಿಂತು ಮೋಹಕ ಮುಗುಳುನಗೆಯಲ್ಲಿ ಪ್ರಶ್ನಿಸುತ್ತಿದ್ದ ಅದೇ ಎಮಿಲಿ ಇಂದು ಅದೇ ರಾಗದಲ್ಲೇ ಒಳಬರಲು ಅನುಮತಿ ಕೇಳಿದಳು. ಅಚ್ಚ ಕೆಂಪು ಬಣ್ಣದ ತುಟಿರಂಗು, ಬಾಬ್ ಮಾಡಿದ ಕೂದಲು, ಜೀನ್ಸ್ ಪ್ಯಾಂಟ್ ಟೀ ಶರ್ಟ್‌ತೊಟ್ಟು ಬರುವ ಎಮಿಲಿ ಆಗಷ್ಟೇ ಇಪ್ಪತ್ತೈದು ಇಪ್ಪತ್ತಾರರ ತರುಣಿ. ಆಫೀಸಿನ ಎಲ್ಲರ ಬಾಯಲ್ಲಿ ಅತಿ ಹೆಚ್ಚು ಓಡಾಡುವ ಹೆಸರು.. ಯಾರೊಂದಿಗೂ ಮುನಿಸು ಮಾಡಿಕೊಳ್ಳದ, ಮುನಿದರೆ ತಾನಾಗಿಯೇ ಮಾತನಾಡಿಸಿ ಹಿಂದಿನದನ್ನೆಲ್ಲಾ ಮರೆತುಬಿಡುವವಳು. ಎಮಿಲಿ ಹಾಗೇ ಬಾಗಿಲಲಿ ನಿಂತು ಕೇಳಿದಾಗಲೆಲ್ಲ ಪ್ರಣೀತ ಮೀಸೆಯಡಿಯಲ್ಲಿಯೇ ನಕ್ಕು ಆಕೆಗೆ ಕಣ್ಸನ್ನೆಯಲ್ಲಿಯೇ ಒಳಗೆ ಆಹ್ವಾನಿಸುತ್ತಿದ್ದ. ಆದರೆ ಇವತ್ತು ಆತನಿಗೆ ಆಫೀಸಿಗೆ ಬಂದರೂ, ಅದೇಕೋ ಸಮಾಧಾನವಿಲ್ಲ. ಎಮಿಲಿಯ ಕರೆಗೆ ಸ್ಪಂದಿಸುವಲ್ಲೂ ಆಸಕ್ತಿಯಿಲ್ಲ. ಹೂಂ. ಎಂದಷ್ಟೇ ಹೇಳಿ ತಲೆ ಹಿಡಿದು ಕೂತ. ಎಂ.ಡಿ.ಗೆ ಇವತ್ತು ಯಾಕೋ ಮೈ ಹುಷಾರಿಲ್ಲವಿರಬೇಕೆಂದು ಬಗೆದ ಆಕೆ ಕೂಡಾ ಹೆಚ್ಚು ಮಾತಾಡಲಿಲ್ಲ. ಫೈಲುಗಳ ಕಟ್ಟು ಇಟ್ಟು ಹೊರ ಹೋದಳು. ಸಿಡಿಯುತ್ತಿದ್ದ ತಲೆಯನ್ನು ಒತ್ತಿ ಹಿಡಿದು ಫೈಲುಗಳಲ್ಲಿ ಕಣ್ಣಾಡಿ ಸುವ ಪ್ರಯತ್ನ ಮಾಡತೊಡಗಿದ ಪ್ರಣೀತ. ಆದರೆ ಆಗುತ್ತಿಲ್ಲ. ಕೈಕಾಲುಗಳಲ್ಲಿ ಶಕ್ತಿಗುಂದಿದಂತೆ, ನರನರಗಳಲ್ಲೆಲ್ಲಾ ನೋವಿನ ಅಲೆ ಸುಳಿದಾಡಿದಂತೆ ಭಾಸವಾಗತೊಡಗಿತು. ತಲೆಯಲ್ಲಿ ಗುಂಗಿ ಹುಳು ಕೊರೆಯತೊಡಗಿತು.

ಹೌದು! ಇದು ಅದೇ ಇರಬಹುದೇ? ತಾನು ಕೆನಡಾದಿಂದ ಮರಳಿ ಬಂದು ಹದಿನೈದು ದಿನಗಳಾಯ್ತು. ಕಂಪನಿಯ ಮ್ಯಾನೇಜಮೆಂಟ್ ಸ್ಟಡಿ ಪ್ರಾಜೆಕ್ಟವೊಂದಕ್ಕೆ ಜೊತೆಯಾಗಿ ಅಸಿಸ್ಟಂಟ್ ಮ್ಯಾನೇಜರ್ ಜ್ಯಾಕೋಬ್ ಇದ್ದರು. ತಮ್ಮಿಬ್ಬರಲ್ಲಿ ಸ್ನೇಹ ಗಾಢವಾಗಿತ್ತು. ಕೈತುಂಬಾ ಕೆಲಸ ಗಳಿದ್ದರೂ, ಸುತ್ತಾಡಲೂ ಸಮಯ ಸಾಕಷ್ಟಿತ್ತು. ಹೊರ ದೇಶದಲ್ಲಿ ಯಾವ ಕೌಟುಂಬಿಕ ಜವಾಬ್ದಾರಿಗಳಿಲ್ಲದ ಕಾರಣ ಇಬ್ಬರೂ ಸಾಕಷ್ಟು ಖುಷಿ ಪಟ್ಟಿದ್ದರು. ಆಗಷ್ಟೇ ಅಲ್ಲಿ ಮುಂಜಾಗ್ರತೆಯ ಹಲವು ವಿಧಾನಗಳನ್ನು ಅನುಸರಿಸುತ್ತಿದ್ದರೂ ಅಂತಹ ಕಟ್ಟುನಿಟ್ಟಿನ ನಿಯಮಗಳೇನೂ ಇರಲಿಲ್ಲ. ಆದರೆ ಇಲ್ಲಿಗೆ ಬಂದು ವಾರವಾಗುತ್ತಲೇ ಈ ಭಯಂಕರ ಖಾಯಿಲೆ ಅದರ ವಿಕಾರಗಳು. ಅಬ್ಬಾ. ನೆನಸಿದರೆ ಭಯ ಚಳಕ್ಕೆಂದಿತು. ಮರಳಿ ಬರುವಾಗ ಫ್ಲೈಟ್‌ನಲ್ಲಿ ಪಕ್ಕದ ಸೀಟಿನ ವ್ಯಕ್ತಿಯೊಬ್ಬ ಆಗಾಗ ಕೆಮ್ಮುತ್ತಿದ್ದ. ಏರ್ ಹೋಸ್ಟೆಸ್ ಸರ್ವ ಮಾಡಿದ ತಿಂಡಿ ಕೊಳ್ಳುವಾಗ ಅಲ್ಲೇ ಕಂಪ್ಯೂಟರ ಆನ್ ಮಾಡಿ ಕೂತ ತಾನು ಒಂದೇ ಕೈಯಲ್ಲಿ ತಿಂಡಿ ಮತ್ತು ಜ್ಯೂಸ್ ಗ್ಲಾಸ್ ಹಿಡಿಯ ಲಾಗದ್ದಕ್ಕೆ, ತಾನು ಕಷ್ಟಪಡುತ್ತಿರುವಾಗ, ಮೇ ಐ ಹೆಲ್ಪಯು ಎನ್ನುತ್ತಾ ಸಹಾಯ ಮಾಡಿದ್ದ. ಆತನ ಕೈಯಲ್ಲಿ ಹಿಡಿದ ತಿಂಡಿ ಪ್ಯಾಕ್‌ನ್ನು ತಾನು ತೆಗೆದುಕೊಂಡಿದ್ದೆ. ಓ ದೇವರೇ!!

ಕೋವಿಡ್-19 ಜನಸಾಮಾನ್ಯರ ಜೀವನ ಮಾತ್ರವಲ್ಲದೇ ಸರ್ಕಾರದ ಬುಡವನ್ನೆ ಅಲ್ಲಾಡಿಸ ತೊಡಗಿದ್ದು, ನಿಯಂತ್ರಣ ಮಾಡಲಾಗದಂತೆ ದಿನದಿಂದ ದಿನಕ್ಕೆ ಹರಡುತ್ತಿದ್ದ ರೀತಿ, ಪತ್ರಿಕೆಗಳು, ನ್ಯೂಸ್ ಚಾನೆಲ್‌ಗಳ ತುಂಬೆಲ್ಲಾ ಅದೇ ಸುದ್ದಿ ಬಿತ್ತರವಾಗುತ್ತಿದ್ದರೆ, ತಾನು ಕೆನಡಾಕ್ಕೆ ಹೋಗಿ ತಪ್ಪು ಮಾಡಿದೆನೋ ಎಂದೆನ್ನಿಸುತ್ತಿದೆ. ತನ್ನಂತಹ ಅದೆಷ್ಟು ಜನ ಹೊರದೇಶಗಳಿಂದ ಬಳುವಳಿ ಯಾಗಿ ಇದನ್ನು ತಂದು ಇಲ್ಲಿ ಹಂಚಿದರೋ, ದೇವರೇ ಬಲ್ಲ!! ಈಗಂತೂ ತಮ್ಮ ಓಪನ್ ಓಯಾಸಿಸ್ ಎನ್ನುವ ಶ್ರೀಮಂತರೇ ಇರುವ ಎಕ್ಸ ಟೆನ್ಷನ್‌ನಲ್ಲಿ ಓಣಿಗೊಬ್ಬರಂತೆ ಕೊರೊನಾ ಪಾಸಿಟಿವ್ ಬರತೊಡಗಿದೆ. ವಿಚಾರ ಮಾಡಿ ಮಾಡಿ ತಲೆ ಇನ್ನಷ್ಟು ನೋಯತೊಡಗಿತು. ಮನೆಗೆ ಹೋಗಬೇಕೆಂದು ಸಿದ್ಧನಾಗತೊಡಗಿದ.

ಸರಿ ಹೊತ್ತಿಗೆ ಒಳಬಂದಳು ಎಮಿಲಿ. ಉದ್ವೇಗಗೊಂಡಿದ್ದಳು. ಒಳಗೆ ಬರಲೋ ಬೇಡವೋ ಎಂದೂ ಕೇಳಲಿಲ್ಲ. ಒಳಬಂದವಳೇ, ಸರ್ ಹೊರಗೆ ಅಸಿಸ್ಟಂಟ್ ಮ್ಯಾನೇಜರ್ ಜ್ಯಾಕೋಬ್ ಸರ್ ಯಾಕೋ ವಿಪರೀತ ಎದುಸಿರು ಬಿಡುತ್ತಿದ್ದಾರೆ. ಹಿ ಕಾಂಟ್ ಬೀದ್ ಪ್ರಾಪರ್ಲಿ, ಇಟ್ ಲುಕ್ಸ ಲೈಕ್ ಹಿ ಇಸ ಸಫರಿಂಗ್ ಅ ಲಾಟ್, ಇಟ್ ಇಸ ಬೆಟರ್‌ಟು ಹೊಸ್ಪಿಟಲೈಸ್ ಹಿಮ್. ಎಂದು ಒಂದೇ ಉಸಿರಿಗೆ ಹೇಳಿದ್ದು ಕೇಳಿ ಪ್ರಣೀತ ಕಂಗಾಲಾದ. ಓ ದೇವರೇ! ಇದೇನು? ಹೊರಗೆ ಬಂದರೆ ಅದಾಗಲೇ ಉಳಿದೆಲ್ಲ ಸ್ಟಾಫ್ ಮೆಂಬರುಗಳು ಆತನ ಸುತ್ತ ನೆರೆದಿದ್ದರು. ಒಂದಿಬ್ಬರು ಮುಖಕ್ಕೆ ವಸ್ತ್ರ ಹಿಡಿದುಕೊಂಡಿದ್ದರೆ ಉಳಿದವರೆಲ್ಲ ಹತ್ತಿರ ಬರಲೂ ಹೆದರಿ ದೂರ ನಿಂತಿದ್ದಾರೆ. ಪ್ರಣೀತ ತಕ್ಷಣ ಮೊಬೈಲ್ ಎತ್ತಿ ಕಾಲ್ ಮಾಡಿದ. ಉಹೂಂ. ರೀಸೀವ್ ಮಾಡ್ತಿಲ್ಲ! ರಿಂಗಾಗುತ್ತಿರುವ ಆ ಕಡೆಯ ಲೈನು ಕಟ್ಟಾಗುತ್ತಲೇ ಇನ್ನೊಮ್ಮೆ ಡೈಯಲ್ ಮಾಡಿದರೆ ಎಂಗೇಜ ಬರತೊಡಗಿತು. ಭಯದಲ್ಲಿಯೇ ಹೈರಾಣಾಗುವ ಸ್ಥಿತಿ ಹೇಗಿರುತ್ತೇ ಎನ್ನುವುದು ಮತ್ತೊಂದು ಬಾರಿ ತೀವ್ರ ಅನುಭವಕ್ಕೆ ಬಂತು. ಜ್ಯಾಕೋಬ್ ವಿಪರೀತ ಎದೆಯುಸಿರು ಬಿಡುತ್ತಿದ್ದ. ನಾಲ್ಕಾರು ದಿನಗಳ ಹಿಂದೆ ಅವನಿಗೆ ಜ್ವರ ಕಾಣಿಸಕೊಂಡಿತ್ತು. ರಜೆ ಹಾಕಿ ಮನೆಯಲ್ಲಿಯೇ ಇದ್ದವನು ಮರಳಿ ನಿನ್ನೆಯಷ್ಟೇ ಬಂದಿದ್ದ ಸೆಲ್ಪ ಮೇಡಿಕೇಷನ್ ಮಗಾ, ನೋಡು ಹೇಗೆ ಹುಷಾರಾದೆ ಎಂದು ಹೇಳಿದವನಿಗೆ ಇವತ್ತು ನೋಡಿದರೆ ಆಘಾತ ಉಂಟುಮಾಡುವ ರೀತಿಯಲ್ಲಿ ವಿಪರೀತ ಜ್ವರ ಮತ್ತು ಉಸಿರಾಟದ ತೊಂದರೆ ಶುರುವಾಗಿತ್ತು. ಅದೂ ಡ್ಯೂಟಿಗೆ ಬಂದು ಏಸಿ ಕೋಣೆ ಯಲ್ಲಿ ಕುಳಿತು ಒಂದೆರಡು ಗಂಟೆ ಕೆಲಸ ಮಾಡುತ್ತಲೇ ಶುರುವಾದದ್ದು.

ಅಷ್ಟೊಂದು ಕಷ್ಟಪಡುತ್ತಿರುವ ಜ್ಯಾಕೋಬ್‌ನನ್ನು ಸಮಾಧಾನಿಸಲು ಯಾರೊಬ್ಬರೂ ಮುಂದಾಗುತ್ತಿಲ್ಲ. ಈಗ ತಡೆಯಲಾಗದೇ ಪ್ರಣೀತ ಕೂಗಿ ಬಿಟ್ಟ. ಗಾಯ್ಸ, ವ್ಹಾಟ್ ಇಸ್ ದಿಸ್?. ವಿಹಿ ಆರ್ ಹ್ಯೂಮನ್ಸ್. ಆಟ್ಲೆಸ್ಟ್ ಮಸ್ಟ ಹ್ಯಾವ್ ದಿ ಕರ್ಟಸಿ ಟು ಶಿಪ್ಟ ಹಿಮ್ ಟು ದ ಹಾಸ್ಪಿಟಲ್. ಪ್ಲೀಸ್ , ಹೆಲ್ಪ ಮೀ. ಎನ್ನುತ್ತಲೇ ಆಗಷ್ಟೇ ಆಡಿಟಿಂಗ್ ಆಫೀಸರ್ ಆಗಿ ಟ್ರೈನಿಂಗ್ ಪೀರಿಯಡ್‌ನಲ್ಲಿರೋ ವಿರಾಜ್ ಮುಂದೆ ಬಂದ. ಯಸ್ ಸರ್, ಲೆಟ್ ಅಸ್ ಟೇಕ್ ಹಿಮ್ ಟು ದಿ ಹಾಸ್ಪಿಟಲ್. ಆಮ್ ವಿತ್ ಯು. ಅಂದ. ಹಾಗೋ ಹೀಗೋ ಒಂದಿಬ್ಬರು ತೋಳಿಗೆ ಕೈಹಾಕಿ ಹಿಡಿದುಕೊಂಡು ಕಾರಿನೊಳಗೆ ತಂದು ಕೂರಿಸಿದರು. ಸೀದಾ ಡ್ರೈವರ್ ಸೀಟನಲ್ಲಿ ಹೋಗಿ ಕುಳಿತ ಪ್ರಣೀತ ಕಾರು ಚಲಾಯಿಸುತ್ತಲೇ ತನ್ನ ಪಕ್ಕ ಕೂತರೂ ಕಾರಿನ ಬಾಗಿಲೆಡೆಗೆ ಒರಗಿ ಕೂತ ವಿರಾಜ್‌ನ ನೋಡಿದಾಗ ತಾನೂ ತಾಸಿನ ಹಿಂದೆ ಹೀಗೆ ಚಿಂತಿಸುತ್ತಿದ್ದುದ್ದರ ನೆನಪಾಯಿತು. ಜೀವವೆಂದರೆ ಎಲ್ಲರಿಗೂ ಎಷ್ಟು ಅಮೂಲ್ಯ. ಪ್ರೀತಿ ಪ್ರೇಮದ ಹತಾಶೆಯ ಕ್ಷಣಗಳಲ್ಲಿ ಮನುಷ್ಯ ಹೇಗೆ ವರ್ತಿಸುತ್ತಾನೆ? ಅದೇ ಸಾವು ಮುಂದಿದೆ ಎನ್ನುವಾಗ ಎಷ್ಟು ನಿಸ್ಸ ಹಾಯಕನಂತೆ !!!

ತುಟಿಯಂಚಿನಲ್ಲಿ ಮೂಡಿದ ಅಸಹಾಯಕ ನಗು ತನ್ನನ್ನೇ ಅಣುಕಿಸುತಿದೆ. ಹಿಂದಿನ ಸೀಟಿ ನಲ್ಲಿ ಸರಾಗ ಉಸಿರಾಡಲಾಗದ ಜ್ಯಾಕೋಬ್ ಕಣ್ಣುಗಳಲ್ಲಿ ಸಾವಿನ ಭಯ. ಕಣ್ಣುಗಳ ಮುಚ್ಚಿ ತೆರೆಯುತ್ತಾ, ಕೈಗಳ ಎತ್ತಿ ಎದೆಮೇಲಿಟ್ಟು ಕೊಳ್ಳುತ್ತಾ, ಆಗಾಗ ಹಾ! ಹೂ! ಎನ್ನುತ್ತ ಪರದಾಡುವ ಅವನ ನೋಡುತ್ತ ಎದೆಯೊಳಗೆ ಚಳ್ ಗುಟ್ಟಿದಂತಾಯ್ತು.

ಲಕಲಕ ಹೊಳೆಯುವ ಬೂಟು ಶೂಗಳ ತೊಟ್ಟ ಜ್ಯಾಕೋಬ್ ಆಫೀಸಿನಲ್ಲಿ ಎಲ್ಲರ ಮನ ಸೆಳೆಯುವಂತಹ ನಡೆನುಡಿಯ ಹುಡುಗ. ದಿನಕ್ಕೊಂದು ಬಟ್ಟೆ, ಶೂಗಳ ತೊಟ್ಟು ಕೈಯಲ್ಲಿ ಕಾರಿನ ಕೀ ಚೈನ್ ಹಿಡಿದು ತಿರುಗಿಸುತ್ತಾ ಕ್ರಿಕೆಟ್ ಪ್ಲೇಯರ್ ದೋನಿಯಂತೆ ಲಾಂಗ್ ಹೇರ್‌ನ್ನು ಹಿಂದೆ ಆಗಾಗ ತಳ್ಳುತ್ತಾ ಮಾತನಾಡುತ್ತಿದ್ದರೆ, ಆಫೀಸಿನ ಹೆಣ್ಣುಮಕ್ಕಳು ಅವನತ್ತಲೇ ಕಣ್ಣು ಕೀಳದಂತೆ ನೋಡುತ್ತಿದ್ದರು. ಅಪರೂಪಕ್ಕೆ ಹೊರಗಡೆ ಆಫೀಸಿನ ಸಿಬ್ಬಂದಿಗಳೆಲ್ಲ ಪಿಕ್ನಿಕ್, ವನ್‌ಡೇ ಔಟ್ ಹೋದಾಗೆಲ್ಲ ಅವ ತೆಗೆಯುವ ಸೆಲ್ಫಿಗಳು, ಅವುಗಳನ್ನು ಸ್ಟೇಟಸ್‌ಗೆ ಅಪಲೋಡ ಮಾಡುತ್ತಿದ್ದದ್ದು, ವಿಡಿಯೋ ರೆಕಾರ್ಡ್ ಮಾಡಿ ವ್ಲಾಗ್‌ಗಳಲ್ಲಿ ಹರಿಬಿಟ್ಟು ಖುಷಿಪಡುತ್ತಿದ್ದದ್ದು, ನೋಡುವಾಗ ತನಗೆ ಒಂದಿಷ್ಟು ಅಸೂಯೆ ಆಗುತ್ತಿತ್ತು. ಆಗೆಲ್ಲ ತಾನು ವನ್ಸ್ ರಿಯಲ್ ಲೈಫ್ ಇಸ್ ಸೋ ಆಫನ್ ದಿ ಲೈಫ್ ವನ್ ಡಸಂಟ್ ಲೀಡ್ ಎಂದು ಆಸ್ಕರ ಹೇಳಿದ್ದರಲ್ಲಿ ತಥ್ಯವಿಲ್ಲ ಎನಿಸುತಿತ್ತು. ಜ್ಯಾಕೋಬ ಎಷ್ಟು ತೀವ್ರವಾಗಿ ಬದುಕುತ್ತಾನೆ ಎಂದೆನ್ನಿಸುತ್ತಿತ್ತು. ಆದರೆ ಇಂದು ಅದೇ ಜ್ಯಾಕೋಬನಿಗೆ ನಿಲ್ಲಲೂ ಆಗುತ್ತಿಲ್ಲ. ಒಂದು ನಿರ್ಜೀವ ಕಣವೊಂದರ ವಿಧ್ವಂಸಕ ರೂಪ ಹೀಗೆ ಇರುವುದೇ? ಏನಿದು, ಹೀಗಾಗುತ್ತಿರುವುದಾದರೂ ಏಕೆ?

ಮನದ ನೆರಳಿನಲ್ಲಿ ಜೀವನ್ಮರಣದ ಕೂಗು. ಕಾರು ಚಲಾಯಿಸುತ್ತಿದ್ದವನಿಗೆ ದಾರಿಯಲ್ಲಿ ಕಾಣುವ ಮಾಸ್ಕ ಧರಿಸಿದ ಮುಖಗಳು ಮುಖಗಳೇ ಅಲ್ಲವೆಂಬ ಭ್ರಮೆ. ಮನುಷ್ಯರೇ ಅಲ್ಲ. ಯಾವುದೋ ಅನ್ಯ ಗ್ರಹದ ಚಿತ್ರಣದಂತೆ. ಮಾಸ್ಕ್ ಧರಿಸಿದ ಮುಖಗಳು, ಅಂಗಡಿಗಳ ಮುಂದೆ, ಮಾಲ್‌ಗಳಲ್ಲಿ ಹಿಂದೆಲ್ಲ ಬಾಗಿಲನ್ನು ತೆರೆದು ಗ್ರಾಹಕರ ಸ್ವಾಗತಿಸುತ್ತಿದ್ದ ಪೇಜ್ ಬಾಯ್ಸ ಗಳು ಈಗ ಸ್ಯಾನಿಟೈಸರ್ ಹಿಡಿದು ನಿಂತಿರುವುದು, ಸ್ಕ್ಯಾನರಗಳ ಮೂಲಕ ಟೆಂಪ ರೇಚರ್ ನೋಡುವುದು, ನಾಲ್ಕೈದು ತಿಂಗಳಲ್ಲಿ ಆದ ಬದಲಾವಣೆ. ಅಂಗಡಿ ಮುಂಗಟ್ಟುಗಳಲ್ಲಿ ಅಂತರ ಬಿಟ್ಟು ನಿಲ್ಲಲು ಹಾಕಿದ ಗೆರೆಗಳಲ್ಲಿಯೇ ಖರೀದಿಗೆ ನಿಲ್ಲುವುದು, ಕೈ, ಬಾಯಿ, ಮೂಗು ಗಳ ಕಟ್ಟಿಕೊಂಡ ಬದುಕು. ಕಣ್ಣು ಮಂಜಾಯಿತು. ಕರವಸ್ತ್ರ ತೆಗೆದು ಒರೆಸಿಕೊಳ್ಳಲೂ ಭಯ. ಇನ್ನೊಮ್ಮೆ ಹಿಂದಕ್ಕೆ ತಿರುಗಿ ಜ್ಯಾಕೋಬನ ನೋಡತೊಡಗಿದ. ಜ್ಯಾಕೋಬ ಇಲ್ಲ. ಅದು ತಾನೇ ಆಗಿ, ಛೇ!!

ಯಲಹಂಕದಲ್ಲಿಯ ಕೋರೋನಾ ಆಸ್ಪತ್ರೆ ತಲುಪುತ್ತಲೇ ರೀಲೈಫ್ ಹೆಸರು ನೋಡಿಯೇ ಅಂಜಿದ. ಕೌಂಟರ್‌ನಲ್ಲಿ ವಿಚಾರಿಸಲಾಗಿ ಬೆಡ್ ಇಲ್ಲವೆಂಬ ಉತ್ತರ. ಕಣ್ಣುಗಳು ಉರಿಯುತ್ತಿ ದ್ದವು. ವಿಪರೀತ ಬಳಲಿಕೆಯಲ್ಲಿಯೇ ಮೊಬೈಲ್ ತೆಗೆದು ಗೆಳೆಯನೊಬ್ಬನಿಗೆ ಫೋನಾಯಿಸಿದ.

ನಿಮಗೆ ಉಸಿರಾಟದ ತೊಂದರೆಯೇ? ಜ್ವರ, ಕೆಮ್ಮು, ನೆಗಡಿಯಂತಹ ಲಕ್ಷಣಗಳು ಕಂಡು ಬಂದಲ್ಲಿ ಆಪ್ತಮಿತ್ರ ಸಹಾಯವಾಣಿ 14410 ಗೆ ಕರೆಮಾಡಿ. ಕೋರೋನಾ ವೈರಸ್ ಸೋಂಕು ಹರಡುವುದನ್ನು ತಪ್ಪಿಸಬಹುದು. ಹೊರಗೆ ಹೋಗುವಾಗ ಮನೆಯಲ್ಲೇ ತಯಾರಿಸಿದ ಫೇಸ್ ಮಾಸ್ಕ ಬಳಸಿ, ಇತರರಿಂದ ಕನಿಷ್ಟ ಎರಡು ಮೀಟರ್ ಅಂತರವನ್ನು ಕಾಪಾಡಿಕೊಳ್ಳಿ, ಆಗಾಗ ಸೋಪಿನಿಂದ ನಿಮ್ಮ ಕೈಗಳನ್ನು ತೊಳೆಯಿರಿ. ಭಾರತ ಸರ್ಕಾರದ ಆರೋಗ್ಯ ಮತ್ತು ಜನಹಿತಕ್ಕಾಗಿ ಜಾರಿ ನುಡಿಯುತ್ತಿದ್ದ ಕಂಪ್ಯೂಟರ ಧ್ವನಿಗೆ ಕೆರಳುವಂತಾಯ್ತು. ಯಾವ ಸಹಾಯವಾಣಿಯೂ ಆಪತ್ತಿಗಿಲ್ಲದ ವಾಣಿಗಳಾಗಿ ಕಂಡವು. ಕಷ್ಟಕ್ಕೊದಗುವವನ ಮಾತಿಗಾಗಿ ಕಾಯುವಾಗ ಈ ಸಲಹೆ ಗಳೆಲ್ಲ ಎಷ್ಟು ಕಿರಿಕಿರಿ ಅನಿಸಿತವನಿಗೆ. ಮನಸ್ಸು ವಿಕ್ಷೀಪ್ತವಾಗತೊಡಗಿತು. ಎರಡನೇ ಡೈಯಲ್ಲಿಗೆ ಫೋನ ಎತ್ತಿದ ಸಿದ್ರಾಮ. ಪ್ರಣೀತ ಸಹಾಯಕ್ಕಾಗಿ ಅಂಗಲಾಚಿದ. ಆತ ತನ್ನ ಕಾಲೇಜು ಗೆಳೆಯ. ಓದಲ್ಲಿ ಹಿಂದೆ ಇದ್ದ ಆತ ಈಗ ಕಾರ್ಪೋರೇಟ್ ಮೆಂಬರ್. ತನ್ನ ನೋಟ್ಸ್‌ಗಳ ಕಾಪಿ ಮಾಡಿ ಓದುತ್ತಿದ್ದ. ಆತನ ಮನೆಯಲ್ಲೂ ಅಷ್ಟಕಷ್ಟೇ ಇದ್ದ ದಿನಗಳಲ್ಲಿ ತಾನು ಮಾಡಿದ ಸಹಾಯ ಮರೆತಿರಲಿಲ್ಲ ಆತ. ಎಂತಹ ಗಡಿಬಿಡಿಯಲ್ಲೂ ಪ್ರತಿಕ್ರಿಯಿಸುತ್ತಿದ್ದ. ಈಗಲೂ ಇಲ್ಲವೆನ್ನಲಿಲ್ಲ. ಆದರೂ ಇಪ್ಪತ್ತು ನಿಮಿಷಗಳು ಕಳೆದು ಹೋದವು. ಜ್ಯಾಕೋಬ್ ಉಸಿರಾಡಲು ಸಾಧ್ಯವಾಗದೇ ಇನ್ನೇನು ಮರುಕ್ಷಣದಲ್ಲೇ ಇಲ್ಲೇ ಏನಾದರೂ! ಓಹ್ ದೇವರೇ! ಹೊಟ್ಟೆಯಲ್ಲಿ ತಿರುಗಿಸಿದಂತಾಗುತ್ತಿತ್ತು. ನಿಂತಲ್ಲಿಯೇ ಚಡಪಡಿಕೆ. ಮನಸ್ಸಿನ ತುಂಬಾ ಗೋಳವೊಂದು ಹಾಗೇ ಸುತ್ತಿ ಕಣ್ಣೆದುರಿಗೆ ಬಂದು ನಿಂತಂತೆ. ಆ ಗೋಳದ ತುದಿಯಲ್ಲಿ ತಾನು ಇಂಬ್ಯಾಲನ್ಸ ಆಗಿ ಹಿಂದಕ್ಕೆ ಮತ್ತೂ ಹಿಂದಕ್ಕೆ ವಾಲಿದಂತೆ, ಒಮ್ಮೆಗೆ ದಡಕ್ಕನೇ ತನ್ನ ಯಾರೋ ಮುಂದಕ್ಕೆ ತಳ್ಳಿದಂತೆ.


ಕೊನೆಗೂ ಬೆಡ್ ದೊರಕಿತ್ತು. ಐಸಿಯುಗೆ ಶಿಪ್ಟ ಕೂಡಾ ಮಾಡಲಾಯಿತು. ಮನೆಗೆ ಹೋಗಬೇಕೆಂದು ಸಿದ್ದನಾಗಿದ್ದ ತನಗೆ ಮತ್ತು ವಿರಾಜ್‌ಗೆ ಹೀಗೆ ಇಲ್ಲಿಂದಲೇ ಕ್ವಾರಂಟೈನ್ ಸೆಲ್‌ಗೆ ಕಳುಹಿಸಲಾಗುತ್ತೆಂದು ಗೊತ್ತಾದ ಕೂಡಲೇ ಪ್ರಣೀತ ಕೊಂಚ ವಿಚಲಿತನಾದ. ಸೆಲ್‌ನ ಒಳ ಬಂದವನಿಗೆ ಬೆಡ್ ನೀಡಲಾಯಿತು. ತಿರುಗಿ ನೋಡಿದರೆ ವಿರಾಜ್ ಹಿಂದಿರಲಿಲ್ಲ. ಬಹುಶಃ ಬೇರೆ ಸೆಲ್‌ಗೆ ಹಾಕಿರಬಹುದು. ಹಾಸಿಗೆ ಮೇಲೆ ಮಲಗಿದ. ಹಳೆಯ ನೆನಪುಗಳು ಒಮ್ಮೇಲೆ ಉಕ್ಕಳಿಸಿ ಬಂದವು.

ಆಗಾಗ ಬರುವ ಈ ನೆನೆಪುಗಳು ಎಷ್ಟು ಯಾತನೆಯ ನೀಡುತ್ತವೆ. ಅಚವೆಯ ಆ ಹುಲ್ಲು ಗುಡಿಸಲ ಮನೆಯಲ್ಲಿ ತಾನು ಬೆಳೆದದ್ದು. ಕಾಡಿನ ಹಾಡಿನಲ್ಲಿ ಕಳೆದ ಬಾಲ್ಯ. ಆ ನೇರಳೆ ಮರ. ಗೀಜುಗನ ಗೂಡು ಕಟ್ಟಿದ ತೆಂಗಿನ ಗರಿಯ ಓಲಾಟಕ್ಕೆ ಆ ಗೂಡು ಹೇಗೆ ಹೊಯ್ದಾಡುತ್ತಿತ್ತು. ಅದನ್ನೆ ನೋಡುತ್ತಾ ಸಂಜೆಗಣ್ಣಲ್ಲಿ ಕನಸಿನ ಮಾಲೆ ಕಟ್ಟುತ್ತಿದ್ದ ತಾನು ಆಕಸ್ಮಿಕವಾಗಿ ಅಲ್ಲಿಂದಲೂ ಗಂಟು ಮೂಟೆ ಕಟ್ಟಿದ್ದು ನೆನಪಾಯಿತು.

ಆ ದಿನವೂ ಹಾಗೇ ಅಜ್ಜಿ ತುಳಸಿ ಕಟ್ಟೆಯ ಮೆಟ್ಟಿಲ ಮೇಲೆ ಕೂತು ಬಕುಲದ ಹೂ ಕಟ್ಟುತ್ತಿದ್ದರು. ಕಾಡಿನ ನಡುವೆ ಧೂಳೆಬ್ಬಿಸುವ ಮಣ್ಣಿನ ರಸ್ತೆಯ ಉದ್ದಕ್ಕೂ ಕೈಲೊಂದು ಕೋಲು ಹಿಡಿದು ಸೈಕಲ್ಲ ಟೈರರನ್ನು ಓಡಿಸುತ್ತಿದ್ದ. ಆಗಲೇ ತಟ್ಟನೇ ಅಮ್ಮ ಚಿಟಾರನೇ ಚೀರಿದಳು. ಮನೆ ವಠಾರದಲ್ಲಿ ಅಡಿಕೆ ಸೋಗೆ ಆರಿಸಲು ಹೋದ ಅಮ್ಮ ಮಂಗವೊಂದು ಸತ್ತು ಬಿದ್ದಿದ್ದ ಕಂಡು ನೋಡಿ ಭಯಗೊಂಡಳು. ಅಜ್ಜಿ ಅದನ್ನು ಎತ್ತೊಯ್ದು ಸಣ್ಣ ಗುಂಡಿ ತೋಡಿ ಹೂಳಿದ್ದರು. ಅಜ್ಜಿಯ ಕೈಯಲ್ಲಿ ಗುದ್ದಲಿ ನೋಡಿ ಪ್ರಣೀತ ಭಯಗೊಂಡ. ಆದರೆ ಐದನೇ ದಿನಕ್ಕೆ ಜ್ವರ ಬಂದು ಮಲಗಿದವಳು ಮತ್ತೆ ಎದ್ದಿರಲಿಲ್ಲ. ಮಂಗನ ಕಾಯಿಲೆ ಸಾಂಕ್ರಾಮಿಕ, ಸಾಂಸರ್ಗಿಕ ಹೀಗೆ ಜನ ಆಡುಕೊಳ್ಳುತ್ತಿದ್ದರು. ಶವದ ಹತ್ತಿರವೂ ಕೆಲವರು ಬರಲಿಲ್ಲ. ಅಮ್ಮ ಅದೆಷ್ಟು ಭೀತ ಳಾಗಿದ್ದಳು. ಅಪ್ಪ ಬಿಟ್ಟ ಮೇಲೆ ತಾವು ಅಜ್ಜಿಯ ಮನೆಯಲ್ಲಿಯೇ ಇದ್ದದ್ದು, ಅವರು ಅಮ್ಮನ ಚಿಕ್ಕಮ್ಮ. ಆಕೆ ಚಿಕ್ಕಂದಿನಲ್ಲೇ ಗಂಡನ ಕಳೆದುಕೊಂಡಾಕೆ. ಆದರೆ ತನಗೆ ಪ್ರೀತಿ ತೋರಿಸುತ್ತಿದ್ದ ಜೀವ ಇನ್ನು ಬರುವುದಿಲ್ಲ ಎಂಬ ಸತ್ಯ. ಅಜ್ಜಿಯ ಮೈ ನೆರಿಗೆಗಳೊಂದಿಗೆ ಆಟವಾಡುತ್ತಿದ್ದ ನೆನಪು. ಮಳ್ಳ ಕೂಸೆ, ಅದೇನ ಮಾಡುದು ನೀನು ಎಂದು ಗದರಿಸುತ್ತಿದ್ದರೆ, ಅಜ್ಜಿ, ನಿನ್ನ ಮೈ ಇಟ್ಟಲ್ಲಾ ಮೆತ್ತಗೆ!! ಮಿದು ಮಿದು !! ಎಂದು ಆ ತೋಳಿನ ಚರ್ಮ ಹಿಡಿದು ಅಲ್ಲಾಡಿಸುತ್ತಾ ಕೂತಿರುತ್ತಿದ್ದ. ಅಜ್ಜಿಯ ಚಿತೆಗೆ ಬೆಂಕಿ ಇಡಲು ಹಿರಿಯರು ಹೇಳಿದಾಗ ನಡುಗುತ್ತಲೇ ದೊಡ್ಡ ವರು ಹೇಳಿದಂತೆ ಮಾಡಿ ಮುಗಿಸಿದ. ಕಂಡುಕೊಳ್ಳಲಾಗದ ವಯಸ್ಸಿನಲ್ಲಿ ಅವನಿಗೆ ಕಳೆದು ಕೊಳ್ಳುವುದು ಹೇಗಿರುತ್ತದೆ ಎಂಬುದು ಮೊದಲ ಬಾರಿ ಅರಿವಾದಂತೆ ಮನೆಗೆ ಬಂದವನೇ ಕಾಡೊಳು ನಡೆದು ಮುಳ್ಳಪೊದೆಯೊಳಗೆ ಹೋಗಿ ಅಡಗಿ ಕೂತ. ಅಲ್ಲಿಯ ಮುಳ್ಳುಗಳು ಚುಚ್ಚು ತ್ತಿದ್ದರೂ ಮನಸ್ಸಿಗೆ ಸಮಾಧಾನವಾಗತೊಡಗಿತು. ಕತ್ತಲಾಗುತ್ತಿದ್ದಂತೆ ಸೂತಕದ ಮನೆಯಿಂದ ಎದ್ದು ನಡೆದ ಜನರ ಹಿಂದೆ ಅಮ್ಮ ಇವನ ಹುಡುಕಿ ಬಂದಿದ್ದಳು. ಸೂತಕ ಕಳೆದ ಮರುದಿನ ಅವರು ಆ ಊರನ್ನು ತೊರೆದು ಪಟ್ಟಣ ಸೇರಿದ್ದು. ಹಾಸ್ಟೆಲಿನಲ್ಲಿ ಕಲಿತು ದೊಡ್ಡವನಾಗಿದ್ದು, ಅಲ್ಲಿಯೇ ಸಿದ್ರಾಮ ಗೆಳೆಯನಾಗಿದ್ದು, ತನ್ನ ನೌಕರಿ ಕನಸು ಕಾಣು ತ್ತಿದ್ದ ಅಮ್ಮ ಒಮ್ಮೇಲೆ ಹೊರಟು ಹೋಗಿದ್ದಳು. ಪರೀಕ್ಷೆಗಳಲ್ಲಿ ಒಳ್ಳೆಯ ಅಂಕಗಳನ್ನೆ ಪಡೆಯುತ್ತಿದ್ದ ತಾನು ಎಂದೂ ವಿದ್ಯೆಯ ವಿಚಾರದಲ್ಲಿ ಹಿಂದೆ ಬಿದ್ದಿರಲಿಲ್ಲ. ಆನಂತರ ತಾನು ಉನ್ನತ ಅಧಿಕಾರಿಯಾಗಿ ಕೆಲಸಕ್ಕೆ ಸೇರಿದ್ದೆ.

ಈಗ ಸುತ್ತಲೂ ನೋಡಿದ. ಹಾಸಿಗೆಯ ಮೇಲೆ ಬಿದ್ದುಕೊಂಡು ಸೂರು ನೋಡುತ್ತಿದ್ದ ಹತ್ತಾರು ಜನರನ್ನು ಕಂಡು ತಾನ್ಯಾವುದೋ ಪ್ರಯೋಗಾಲಯದ ಸ್ಪೆಸಿಮನ್ ಅನಿಸತೊಡಗಿತು. ಅವರೆಲ್ಲರ ಮುಖದಲ್ಲಿ ಗೆರೆಗಳು, ಕೈಬಾಯಿ, ಮೂಗುಗಳು ಮಾಸ್ಕ್, ಫೇಸ್ ಮಾಸ್ಕ್, ಗ್ಲೌಸ್‌ಗಳಲ್ಲಿ ಮುಚ್ಚಿದ್ದವು. ಪ್ರಣೀತನಿಗೆ ಜೊಂಪು ಹತ್ತಿತು. ಕೋಣೆಯ ಮೂಲೆ ಮೂಲೆಗೆ ಬಿಳಿ ರೆಕ್ಕೆಗಳ ತೊಟ್ಟ ಮೇಣದ ಬತ್ತಿ ಹಿಡಿದ ಶಾಂತಿ ದೂತೆಯರು ಎದ್ದುಬರತೊಡಗಿದರು. ಬಿಳಿಬಿಳಿಯಾಗಿ ಎಲ್ಲವೂ ಕಾಣತೊಡಗಿದವು. ಕೂಗಬೇಕೆಂದು ಕೊಂಡ. ತನ್ನ ಬಾಯಿಗೆ ಒತ್ತಾಯದಿಂದ ಮಾಸ್ಕನ್ನು ತೊಡಿಸುತ್ತಿದ್ದಾರೆ, ಕೈಗಳಿಗೆ ಗ್ಲೌಸ್, ಈಗ ದೇಹವನ್ನೂ ಪಾಲಿಥೀನ್ ಚೀಲವೊಂದಕ್ಕೆ ತುರುಕುತಿದ್ದಾರೆ. ಬಿಳಿ ಬಿಳಿ ಪಿಪಿಟಿ ಕಿಟ್ ಧರಿಸಿದ ದೂತರು. ಕಣ್ಣು ಮುಚ್ಚಿದ. ಆ ದೃಷ್ಟಿಯಲ್ಲಿ ಅಚವೆಯ ಆ ನೇರಳೆ ಮರ. ಗೀಜುಗನ ಗೂಡು ಕಟ್ಟಿದ ತೆಂಗಿನ ಗರಿಯ ಓಲಾಟ ಕಣ್ಣಲ್ಲಿ ಮೂಡತೊಡಗಿತು. ಗಾಳಿ ಎಷ್ಟು ರಭಸವಾಗಿದೆ. ಗೂಡು ಇನ್ನೇನು ಹರಿದು ಬೀಳುವಂತೆ ಬೀಸತೊಡಗಿದೆ. ಹಾಗಾಗದಿರಲಿ,,, ಅರೇ!! ಅರೇ!! ಓ ದೇವರೇ! ಗೂಡು ಕುಸಿದು ಬಿದ್ದೇ ಹೋಯಿತು.

## ಮೈಸೂರಿನ ಚಿಟ್ಟೆ ಪಾರ್ಕ್



**ಮೈ**ಸೂರಿನ ಶ್ರೀ ಚಾಮರಾಜೇಂದ್ರ ಮೃಗಾಲಯ ವ್ಯಾಪ್ತಿಗೆ ಬರುವ ಕಾರಂಜಿ ಕೆರೆಯ ಪ್ರಕೃತಿ ಉದ್ಯಾನದಲ್ಲಿರುವ ಚಿಟ್ಟೆ ಉದ್ಯಾನಕ್ಕೆ (ಬಟರ್ ಫ್ಲೈ ಪಾರ್ಕ್) ನೀವು ಭೇಟಿ ನೀಡಿದಾಗ ಈ ರೀತಿ ಮನದಲ್ಲಿಯೇ ಗುನುಗದಿದ್ದರೆ ಕೇಳಿ. ಮೈಸೂರಿಗೆ ಬರುವ ಪ್ರತಿಯೊಬ್ಬ ಪರಿಸರ ಪ್ರೇಮಿಯೂ ಕೂಡ ಇಲ್ಲಿಗೆ ಭೇಟಿ ನೀಡಿಯೇ ನೀಡುತ್ತಾರೆ. ಅಷ್ಟರಮಟ್ಟಿಗೆ ಈ ಉದ್ಯಾನ ಆಕ ರ್ಷಣೀಯ. ಪ್ರಕೃತಿ ಸೌಂದರ್ಯವನ್ನು ಸವಿಯುತ್ತಾ ಚಿತ್ತಾಕರ್ಷಕ ಚಿಟ್ಟೆಗಳನ್ನು ನೋಡು ವುದೇ ಕಣ್ಣಿಗೆ ಹಬ್ಬ.

ಪ್ಲೇನ್ ಟೈಗರ್, ಡಾರ್ಗ್ ಬ್ಲ್ಲು ಟೈಗರ್, ಕಾಮನ್ ಜೆಜೆಬೆಲ್, ಕ್ರಿಮಸನ್ ರೋಸ್, ಗ್ರಾಸ್ ಎಲ್ಲೋ, ರೆಡ್ ಪೈರೆಟ್, ಪ್ಯಾನ್ಸಿಸ್, ಕಾಮನ್ ಸೆರುಲೀನ್, ಬ್ಲೂ ಟೈಗರ್, ಬ್ಲೂ ಮರ್ಮಾನ್, ಕಾಮನ್ ಕ್ರೋ, ಕಾಮನ್ ವಾಂಡರರ್, ಎಮಿಗ್ರೆಂಟ್, ಲೈಮ್ ಬಟರ್‌ಫ್ಲೈ ಮೊದಲಾದವು ಗಮನ ಸೆಳೆಯುವ ಚಿಟ್ಟೆಗಳಾಗಿವೆ. 60 ಬಗೆಯ ಚಿಟ್ಟೆಗಳು ಇಲ್ಲಿರುವುದು ವಿಶೇಷ. ವರ್ಷವಿಡೀ ಎಲ್ಲಾ ಬಗೆಯ ಚಿಟ್ಟೆಗಳನ್ನು ನೋಡಲು ಸಾಧ್ಯವಿಲ್ಲ. ಸೆಪ್ಟೆಂಬರ್-ಅಕ್ಟೋಬರ್ ಚಿಟ್ಟೆಗಳ ಸೀಸನ್.

ಕೆಲವೊಂದು ಚಿಟ್ಟೆಗಳು ಸಾಮೂಹಿಕವಾಗಿ ವಲಸೆ ಬರುತ್ತವೆ. ಬ್ಲೂ ಟೈಗರ್, ಕಾಮನ್ ಕ್ರೋ, ಡಾರ್ಗ್ ಬ್ಲೂ ಟೈಗರ್ ಹೆಚ್ಚು ವಲಸಿಗಳು. ಮೈಸೂರಿನಲ್ಲಿ ಏಪ್ರಿಲ್ ಮೊದಲ ವಾರ ಹಾಗೂ ನವೆಂಬರ್ ಮೊದಲ ವಾರ ಹೆಚ್ಚಾಗಿ ಇದು ಕಂಡು ಬರುತ್ತದೆ. ಕಾರಂಜಿ ಕೆರೆ ಉತ್ತರ ಭಾಗದಲ್ಲಿ ಸುಮಾರು ಎರಡು ಎಕರೆ ಪ್ರದೇಶದಲ್ಲಿ ನಿರ್ಮಾಣವಾಗಿರುವ ದ್ವೀಪ ಪ್ರದೇಶವೇ ಚಿಟ್ಟೆ ಪಾರ್ಕ್.

ಸುಮಾರು 96 ಎಕರೆ ವಿಸ್ತೀರ್ಣವಿರುವ ಕಾರಂಜಿ ಕೆರೆಯನ್ನು 1976ರಲ್ಲಿ ಮೈಸೂರು ಮೃಗಾಲಯ ತನ್ನ ವಶಕ್ಕೆ ತೆಗೆದುಕೊಂಡಿತು. 1999ರಲ್ಲಿ ಚಿಟ್ಟೆ ಪಾರ್ಕ್ ಆರಂಭಿಸಲಾಯಿತು. 2004ರಲ್ಲಿ ಏಷ್ಯನ್ ಅಭಿವೃದ್ಧಿ ಬ್ಯಾಂಕಿನ ನೆರವಿನಿಂದ ಸಂಪೂರ್ಣವಾಗಿ ಅಭಿವೃದ್ಧಿಪಡಿಸಲಾಗಿದೆ. ಬಣ್ಣ ಬಣ್ಣದ ಚಿಟ್ಟೆಗಳಿಗೆ ನೈಸರ್ಗಿಕ ವಾತಾವರಣವನ್ನು ಸೃಷ್ಟಿಸುವ ಪ್ರಯತ್ನ ನಡೆಸಲಾಯಿತು. ಚಿಟ್ಟೆಗಳು ಕೂರಲು ಹಾಗೂ ತಿನ್ನಲು ಬೇಕಾದ ಸಸ್ಯಗಳನ್ನು ಬೆಳೆಸಲಾಯಿತು. ಅಂದಿನಿಂದಲೂ ಈ ದ್ವೀಪ ಚಿಟ್ಟೆಗಳಿಗೆ ನೆಚ್ಚಿನ ತಾಣವಾಗಿದೆ. ಇಲ್ಲಿ ವಾತಾವರಣ ಕೂಡ ಚಿಟ್ಟೆಗಳಿಗೆ ಹೇಳಿ ಮಾಡಿಸಿದಂತಿದೆ.

ಈ ಕೀಟಗಳಲ್ಲಿ ಚಿಟ್ಟೆಗಳಿಗೆ ವಿಶೇಷ ಸ್ಥಾನ. ಕಿರೀಟಕ್ಕೆ ಮುಕಟಮಣಿ ಇದ್ದಂತೆ. ಕವಿಗಳಿಗೆ ಕಾವ್ಯ ರಚನೆಗೆ, ಛಾಯಾಗ್ರಾಹಕರಿಗೆ ಸುಂದರವಾದ ದೃಶ್ಯಕ್ಕೆ ಹಾಗೂ ವಿಜ್ಞಾನಿಗಳಿಗೆ ಸಂಶೋಧನೆಗೆ ಸ್ಫೂರ್ತಿ ನೀಡುತ್ತವೆ. ಪರಿಸರದಲ್ಲಿ ಸಸ್ಯಗಳ ಪರಾಗಸ್ಪರ್ಶಕ್ಕೂ ಚಿಟ್ಟೆಗಳ ಸಹಾಯ ಬೇಕೇಬೇಕು. ಚಿಟ್ಟೆಗಳು ಆಹಾರ ಸರಪಳಿಗೂ ಅತ್ಯುತ್ತಮ ನಿದರ್ಶನವಾಗಿವೆ. ವಿಕಲಚೇತನರು ಹಾಗೂ ವಿಶೇಷ ಮಕ್ಕಳಿಗೆ ಉಚಿತ ಪ್ರವೇಶ, ಗಾಲಿ ಚಕ್ರಗಳ ಸೌಲಭ್ಯ ಇದೆ. ದೋಣಿ ವಿಹಾರ, ವಾಹನ ನಿಲುಗಡೆ, ವಿಶ್ರಾಂತಿ ತಾಣ, ಕುಡಿಯುವ ನೀರು, ಶೌಚಾಲಯ, ಮಕ್ಕಳ ಆಟ ತಾಣ ಗಳು, ವೀಕ್ಷಕರಿಗೆ ಕೊಡೆ ಸೌಲಭ್ಯ, ಮಳೆ ಹಾಗೂ ಬೇಸಿಗೆ ಕಾಲದಲ್ಲಿ ಅನನುಕೂಲ ತಪ್ಪಿಸಲು ಶೆಲ್ಟರ್ ಮೊದಲಾದ ಸೌಲಭ್ಯಗಳಿವೆ.


ಕಾರಂಜಿ ಕೆರೆಯಲ್ಲಿ ಚಲನಚಿತ್ರಗಳ ಚಿತ್ರೀಕರಣ, ಧ್ವನಿವರ್ಧಕ ಹಾಕಿಕೊಂಡು ಸಮಾರಂಭ ನಡೆಸುವುದು, ವಾಯು ವಿಹಾರಕ್ಕೆ ಬಂದವರು ಚಪ್ಪಾಳೆ ತಟ್ಟುವುದು, ಶಬ್ದ ಮಾಡುವುದು, ಪ್ರಕೃತಿ ಉದ್ಯಾನದೊಳಗೆ ವಾಹನಗಳಲ್ಲಿ ಬರುವುದು, ಅಡುಗೆ ಮಾಡುವುದು, ಮದ್ಯಪಾನ ಮಾಡುವುದನ್ನು ನಿಷೇಧಿಸಲಾಗಿದೆ. ಪ್ರತಿ ಮಂಗಳವಾರ ವಾರದ ರಜೆ ಇರುತ್ತದೆ. ಇತರೆ ದಿನಗಳಲ್ಲಿ ಬೆಳಗಿನ 8.30ರಿಂದ ಸಂಜೆ 5.30ರವರೆಗೆ ಪ್ರವೇಶ ಉಂಟು.

ಮೈಸೂರಿನ ಈ ಚಿಟ್ಟೆ ಪಾರ್ಕ್-ಕಾರಂಜಿ ಕೆರೆಯೊಂದಿಗೆ ಉದ್ಯಾನವನವು ಅತ್ಯಂತ ರಮಣೀಯವಾಗಿ ಕಾಣಿಸುವುದು. ವಿವಿಧ ಚಿಟ್ಟೆಗಳ ಚಿತ್ತಾರ ಜೊತೆಗೆ ಪಕ್ಷಿಗಳ ಹಾರಾಟದೊಂದಿಗೆ ನೀರಿನ ಮೇಲಾಟ ನೋಡುವುದೆ ಚಂದ ಬನ್ನಿ ಒಮ್ಮೆ ಮೈಸೂರಿಗೆ....

**-ರಮೇಶನಾಯ್ಕ, ಉಪ್ಪುಂದ, ಬೈಂದೂರು**

## ಸಮುದ್ರ

**ಅ**ಪ್ಪನ ಬಳಿ ತುಂಬಾ
ಸಲ ಕೇಳಿಕೊಂಡಿದೆ ನನಗೆ
ಸಮುದ್ರ ನೋಡಬೇಕು.
ಆ ನೀರಿನಲ್ಲಿ ಆಟವಾಡಬೇಕು ಹೀಗೆ ಪ್ರತಿ ಸಲಾ ಅದನ್ನು
ಕೇಳಿಯೂ ಅಪ್ಪ ಸುಮ್ಮನಾಗಿ ಬಿಡುತ್ತಿದ್ದರು ಆದರೆ ನಿನ್ನೆ
ಸಂಜೆಯಾಗುವಾಗ ಅಪ್ಪನಿಗೆ ಏನು ಅನ್ನಿಸ್ತೋ ಗೊತ್ತಿಲ್ಲ.
ನಾನು ಶಾಲೆಯಲ್ಲಿ ಕೊಟ್ಟ ಕೆಲಸ ಇದೆ ಅಂತಂದರೂ ಕೂಡ
ಅದನ್ನು ಕೇಳದೆ ಬಾ ನಿನಗೆ ಸಮುದ್ರ ತೋರುಸ್ತೇನೆ ಅಂತ
ಕರೆದು ಕೊಂಡು ಹೋದರು ಹಾಗೆ ಸಮುದ್ರವನ್ನು ನಾನು
ಆಸ್ವಾದಿಸ್ತಾ ಅಪ್ಪನ ಕೈ ಬಿಟ್ಟು ಓಡಬೇಕು ಅನ್ನುವಷ್ಟರಲ್ಲಿ
ಅಪ್ಪ ಬಿಗಿಯಾಗಿ ನನ್ನ ಹಿಡಿದುಕೊಂಡಿದ್ದರು ನಾನೆಷ್ಟೇ
ಕೋಸರಾಡಿದರೂ ಅವರು ನನ್ನನ್ನ ಬಿಡುವುದಕ್ಕೆ
ತಯಾರಿಲ್ಲ. ನೋಡು ಮಗು ನಮಗೆ ಬದುಕೇನು ಅಂತ
ಇಲ್ಲಿಯ ವರೆಗೆ ಅರ್ಥವಾಗಿದೆ ತಂದೆ ಇಲ್ಲದೆ ನೀನು
ಒಬ್ಬಂಟಿಯಾಗಿ ಬದುಕೋದು ನಿನಗೆ ತುಂಬಾ
ಕಷ್ಟವಾಗುತ್ತದೆ. ಈ ಸಮಾಜದ ನಡುವೆ ನೀ ತಲೆಯೆತ್ತಿ
ಬದುಕುವುದಕ್ಕಾಗುವುದಿಲ್ಲ ಹಾಗಾಗಿ ನಾವಿಬ್ಬರೂ
ಜೊತೆಯಾಗಿ ಮಲಗೋಣ ಅಂತಂದು ಸಮುದ್ರದ
ಅಲೆಗಳ ಜೊತೆಗೆ ನನ್ನನ್ನ ನಡೆ ಸುವುದಕ್ಕೆ ಆರಂಭಿಸಿದರು.
ಹಾಗೆ ಹೆಜ್ಜೆಗಳು ಸಮುದ್ರ ತೀರವನ್ನು ತೊರೆದು
ಸಮುದ್ರದೊಳಕ್ಕೆ ನಡೆಯುವುದಕ್ಕೆ ಪ್ರಾರಂಭವಾದವು.
ನನಗೆ ಬೇಡ ಭಯವಾಗ್ತಿದೆ ಎದುರು ಕೇಳಲೇ ಇಲ್ಲ
ಸಮುದ್ರದ ನೀರು ಹೆಚ್ಚಾಗ್ತಾ ಇತ್ತು ನನಗೆ ಉಸಿರು



ಕಟ್ಟಿದಂತಾಗುತ್ತಿತ್ತು. ಆದರೆ ಅಪ್ಪನ ಮುಖ ದಲ್ಲಿ
ಯಾವುದೇ ಬದಲಾವಣೆ ಇಲ್ಲ. ಆ ತಕ್ಷಣಕ್ಕೆ ಯಾರೋ
ದೂರದಲ್ಲಿದ್ದ ನಾಲ್ಕು ಜನ ಓಡಿ ಬಂದು ನಮ್ಮನಲ್ಲಿಂದ
ಎಳೆದುಕೊಂಡು ಬದಿಗೆ ಕರೆದುಕೊಂಡು ಹೋಗಿ ನಮ್ಮ
ಪ್ರಾಣ ಉಳಿಸಿ ಬಿಟ್ರು. ಅಪ್ಪನೇ ಜೊತೆಗೆ ನನ್ನನ್ನು
ಸಾಯಿಸುವ ಯೋಚನೆ ಮಾಡಿದ್ದಾದರೂ ಯಾಕೆ? ನಾನು
ಅವರಿಗೆ ಬೇಡವಾಗಿದ್ದೇನು? ಅಥವಾ ಅವರ ಬದುಕು
ಅವರಿಗೆ ಕಷ್ಟವಾಗಿದ್ಯೋ? ನನ್ನಿಂದ ಏನಾದರೂ ಸಮಸ್ಯೆ
ಆಗ್ತಾ ಇದೆಯಾ? ಅಪ್ಪಾ ಇನ್ನು ನಿನ್ನ ಬಳಿ ನಾನೇನೂ
ಕೇಳುವುದಿಲ್ಲ.

– ಧೀರಜ್ ಬೆಳ್ಳಾರೆ

## ಪ್ರದೋಷ ವ್ರತ



**ಜ**ಗದ ತಂದೆ ಮಹಾಶಿವ ಮತ್ತು ತಾಯಿ ಪಾರ್ವತಿ ದೇವಿಗೆ ಸಂಬಂಧಿಸಿದ ವ್ರತವಿದು. ತಂದೆ-ತಾಯಿಯರ ಆರಾಧನೆಯಿಂದ ಲೋಕಕ್ಷೇಮ ಎನುವ ನಂಬಿಕೆ. ತ್ರಯೋದಶಿ ವ್ರತ ಅಂತಲೂ ಹೇಳುವ ವಾಡಿಕೆಯಿದೆ. ಸಕಲ ದು:ಖಗಳ ನಿವಾರಣೆಯನ್ನು, ಈ ವ್ರತಾಚರಣೆ ಯಿಂದ ಕಡಿಮೆ ಮಾಡಿಕೊಳ್ಳಬಹುದು. ಉತ್ತಮ ಆರೋಗ್ಯ, ದೀರ್ಘಾಯುಷ್ಯ, ಕಷ್ಟಗಳ ಪರಿಹಾರವಾಗುವುದೆಂದು ಪ್ರತೀತಿ. ಈ ವ್ರತದ ಬಗ್ಗೆ ಮಾತೆ ಪಾರ್ವತಿ ದೇವಿಗೆ ಪರಶಿವನು ತಿಳಿಸಿದನೆಂಬ ಉಲ್ಲೇಖ ಶಿವಪುರಾಣದಲ್ಲಿದೆ. ಅಧರ್ಮ ಎಲ್ಲೆಲ್ಲಿ ತಲೆಯೆತ್ತುವುದೋ ಅಲ್ಲೆಲ್ಲ ಭಗವಂತನ ಕೃಪಾಕಟಾಕ್ಷದಿಂದ ಧರ್ಮದ ನೆಲೆಯಾಗುವಲ್ಲಿ ಈ ವ್ರತವು ಪುಷ್ಠಿದಾಯಕವೆನ್ನು ವರು. ಒಂದು ತಿಂಗಳಲ್ಲಿ ಎರಡು ಸಲ ಆಚರಿಸಬಹುದು. ಪ್ರದೋಷ ಕಾಲವೆಂದರೆ ಸೂರ್ಯನ ಅಸ್ತದ ಅನಂತರ ರಾತ್ರಿಯಾಗುವ ಮುನ್ನದ ಸಮಯ (ಮುಸ್ಸಂಜೆ, ಗೋ ಧೂಳಿ ಸಮಯ).ಶಿವನ ಪೂಜೆಗೆ ಮಹತ್ವವಿಲ್ಲಿ. ಶಿವನ ನೃತ್ಯದ ಸಮಯವಂತೆ ಇದು.ಭಗವಾನ್ ಶಿವನನ್ನು ಪ್ರಸನ್ನೀಕರಿಸಲು ಪ್ರದೋಷ ವ್ರತಾಚರಣೆ ಮಾಡುವರು. ಶಿವನು ಮೆಚ್ಚಿ ಹರಸುವನಂತೆ. ಇಲ್ಲಿ ಮುಖ್ಯವಾಗಿ ಉಪವಾಸವಿರಬೇಕು. ನೇಮನಿಷ್ಠೆಯಿರಬೇಕು. ಸೂರ್ಯನ ಅನುಗ್ರಹ ಸಹ ಲಭಿಸುವುದೆನ್ನುವರು. ಮನುಷ್ಯರ ಜನ್ಮ ಸಮಯದಂತೆ ಕುಜದೋಷವಿದ್ದರೆ ಮಂಗಳವಾರ ದಂದು ಆಚರಿಸುವ ವ್ರತದಲ್ಲಿ ನಿವಾರಣೆಯಾಗುವುದಂತೆ. ದಾಂಪತ್ಯ ಜೀವನದ ಸುಗಮಹಾದಿ, ಇಷ್ಟಾರ್ಥಗಳ ಈಡೇರಿಕೆ, ಶತ್ರು ಬಾಧೆ ದೂರವಾಗುವಿಕೆ, ಅದೃಷ್ಟವೃದ್ಧಿಯಾಗುವುದೆಂದು ನಂಬಲಾಗಿದೆ. ಶನಿ ಪ್ರದೋಷ ಆಚರಣೆಯಿಂದ ಶನೀಶ್ವರನ ಸಂಬಂಧಿಸಿದ ತೊಂದರೆಗಳ ನಿವಾರಣೆಯಾಗುವುದೆನ್ನುವರು. ಓಂ ನಮ: ಶಿವಾಯ ಜಪಿಸುವುದರಿಂದ ಶಿವಕಾರುಣ್ಯ ಒದಗಿ ಬರುವುದು. ಸಕಲರಿಗೂ ಸನ್ಮಂಗಲವುಂಟಾಗಲಿ, ಶಿವ ಪಾರ್ವತಿಯರ ಅಭಯಹಸ್ತ ಸಿಗಲೆಂಬ ಪ್ರಾರ್ಥನೆ. **-ರತ್ನಾ ಕೆ.ಭಟ್ ತಲಂಜೇರಿ, ಪುತ್ತೂರು**

# ಬ್ಯಾಂಕ್‌ಗಳಲ್ಲಿ ಸ್ಥಳೀಯ ಭಾಷಿಕರ ನೇಮಕ ಸೂತ್ರ ಜಾರಿಯಾಗಲಿ


**ಬ್ಯಾಂ**ಕ್‌ಗಳಲ್ಲಿ ಸ್ಥಳೀಯರು ಮತ್ತು ಸ್ಥಳೀಯ ಭಾಷೆ ಗೊತ್ತಿಲ್ಲದ ಅನ್ಯ ರಾಜ್ಯಗಳ ಸಿಬ್ಬಂದಿ ನಡುವೆ ಸಂವಹನದ ಭಾಷೆಯ ವಿಷಯಕ್ಕೆ ಇತ್ತೀಚಿನ ವರ್ಷಗಳಲ್ಲಿ ಹಲವು ರಾಜ್ಯಗಳಲ್ಲಿ ಸಂಘ ರ್ಷಗಳು ನಡೆದಿತ್ತು. ಸ್ಥಳೀಯ ಭಾಷೆಯೇ ಗೊತ್ತಿಲ್ಲದ ಸಿಬ್ಬಂದಿಗಳನ್ನು ಹೀಗೆ ನೇಮಕ ಮಾಡುವುದು, ಅನಕ್ಷರಸ್ಥ ಅಥವಾ ಅಕ್ಷರಸ್ಥರಾಗಿದ್ದರೂ ಅನ್ಯ ಭಾಷೆ ಬರದ ಜನಸಾಮಾನ್ಯರಿಗೆ ಬ್ಯಾಂಕಿಂಗ್ ಸವಲತ್ತುಗಳನ್ನು ಸುಲಭವಾಗಿ ಪಡೆಯಲು ಅಡ್ಡಿಯಾಗಿತ್ತು. ಸಾರ್ವಜನಿಕ ವಲಯದ ಬ್ಯಾಂಕ್‌ಗಳ ಇಂಥಹ ವರ್ತನೆ ವಿರುದ್ಧ ಕರ್ನಾಟಕ ಸೇರಿ ಹಲವು ರಾಜ್ಯಗಳಲ್ಲಿ ತೀವ್ರ ಆಕ್ರೋಶ ವ್ಯಕ್ತವಾಗಿತ್ತು. ಈ ಬಗ್ಗೆ ಸ್ವತಃ ರಾಜ್ಯ ಸರ್ಕಾರವೇ ಬ್ಯಾಂಕ್‌ನ ಹಿರಿಯ ಅಧಿಕಾರಿಗಳು ಮತ್ತು ಕೇಂದ್ರ ಹಣಕಾಸು ಸಚಿವರ ಗಮನ ಸೆಳೆಯಬೇಕಾದ ಅನಿವಾರ್ಯತೆ ಎದುರಾಗಿತ್ತು.



ಸ್ಥಳೀಯ ನೇಮಕಕ್ಕೆ ಆದ್ಯತೆ ಕುರಿತ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ನೀಡಿರುವ ಸೂಚನೆ ಸ್ವಾಗತಾರ್ಹ. ಈ ನಡುವೆ ಸ್ವಾಗತಾರ್ಹ ಬೆಳವಣಿಗೆಯೊಂದರಲ್ಲಿ, ಬ್ಯಾಂಕ್‌ಗಳು ಸ್ಥಳೀಯ ಭಾಷೆ ಬಲ್ಲವರನ್ನೇ ನೇಮಕ ಮಾಡಿಕೊಳ್ಳಬೇಕು ಮತ್ತು ಅವರ ಸ್ಥಳೀಯ ಭಾಷಾ ಜ್ಞಾನದ ಆಧಾರದಲ್ಲೇ ಅವರ ಕಾರ್ಯಕ್ಷಮತೆ ಅಳೆಯುವ ಕೆಲಸ ಆಗಬೇಕೆಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಬ್ಯಾಂಕ್‌ಗಳಿಗೆ ಸೂಚಿಸಿದ್ದಾರೆ. ಪ್ರತಿ ಯೊಂದು ಶಾಖೆಯ ನೇಮಿಸಲಾಗುವ ಎಲ್ಲಾ ಸಿಬ್ಬಂದಿಗೆ ಸ್ಥಳೀಯ ಜನತೆ ಮತ್ತು ಅವರು ಆಡುವ ಭಾಷೆಯನ್ನು ಅರ್ಥೈಸಿಕೊಳ್ಳುವ ಸಾಮರ್ಥ್ಯ ಇರಬೇಕು. ಬ್ಯಾಂಕಿನ ಹಿರಿಯ ಅಧಿಕಾರಿ ಗಳಿಗೆ ಸ್ಥಳೀಯ ಭಾಷೆ ಬರದಿದ್ದರೂ, ಶಾಖೆಯ ಮಟ್ಟದಲ್ಲಿ ಉನ್ನತ ಹುದ್ದೆಯಲ್ಲಿರುವವರು ಆ ರಾಜ್ಯದ ಭಾಷೆಯನ್ನು ಅರಿತಿರುವುದು ಕಡ್ಡಾಯ. ಇದೇ ಆಧಾರದಲ್ಲಿ ನೇಮಕಾತಿ ಮಾಡಿಕೊಳ್ಳ ಬೇಕೆಂದು ಸೂಚಿಸಿರುವುದು ಉತ್ತಮ ಬೆಳವಣಿಗೆ. ಜನ ಸಾಮಾನ್ಯರೊಂದಿಗೆ ಅಧಿಕಾರಿಗಳು ಸೂಕ್ತ ಸಂವಹನ ನಡೆಸುವುದು ಸಾಧ್ಯವಾಗದೇ ಹೋದಲ್ಲಿ, ಬ್ಯಾಂಕಿಂಗ್ ಸೇವೆಗಳು ಜನರಿಗೆ ಸೂಕ್ತ ರೀತಿಯಲ್ಲಿ ದೊರಕುವುದು ಕಷ್ಟಕರ. ಹಿಂದೆಲ್ಲಾ ಅಧಿಕಾರಿಗಳಿಗೆ ಗ್ರಾಹಕರು ಮತ್ತು ಅವರ ಸಾಲ ಪಡೆದ ಅರ್ಹತೆಗಳ ಅರಿವಿರುತ್ತಿತ್ತು. ಆದರಿಂದು ಶಾಖೆಗಳಿಗೆ ತಮ್ಮ ಗ್ರಾಹಕರ ಪರಿಚಯವೇ ಇಲ್ಲದಂತಾಗಿದೆ. ಗ್ರಾಹಕರ ಮಾಹಿತಿಗಾಗಿ ಬ್ಯಾಂಕುಗಳಿಗೆ ಬಾಹ್ಯ ಕ್ರೆಡಿಟ್ ಮಾಹಿತಿ ಕಂಪನಿಗಳನ್ನು ಅವಲಂಬಿಸಿವೆ. ಅದರಿಂದಾಗಿ ಸಾಲಗಳು ತಿರಸ್ಕೃತಗೊಳ್ಳುವ ಸಾಧ್ಯತೆಯಿದೆ ಎನ್ನುವ ಮೂಲಕ ಸಚಿವೆ ನಿರ್ಮಲಾ ಬ್ಯಾಂಕ್‌ಗಳ ಸದ್ಯದ ಪರಿಸ್ಥಿತಿ ಬಗ್ಗೆ ಬೆಳಕು ಚೆಲ್ಲಿದ್ದಾರೆ. ಹೀಗಾಗಿ ಇನ್ನಾದರೂ ಬ್ಯಾಂಕ್‌ಗಳು ಎಚ್ಚೆತ್ತುಕೊಂಡು ಸ್ಥಳೀಯರನ್ನೇ ಹೆಚ್ಚು ಹೆಚ್ಚು ನೇಮಕ ಮಾಡಬೇಕು ಮತ್ತು ಅನ್ಯ ರಾಜ್ಯಗಳಿಂದ ಬರುವವರಿಗೆ ತರಬೇತಿ ಮೂಲಕ ಸ್ಥಳೀಯ ಭಾಷೆಯ ಅರಿವು ಮೂಡಿಸುವ, ಸ್ಥಳೀಯರೊಂದಿಗೆ ಸೌಹಾರ್ದಯುತವಾಗಿ ಮಾತುಕತೆ ನಡೆಸುವ ಕುರಿತು ಸೂಚನೆ ನೀಡಬೇಕು.

## ಮತ್ತೊಮ್ಮೆ ಹುಟ್ಟುವೆ ಕನ್ನಡಮ್ಮನ ಗರ್ಭದಲಿ

**ಕವನ**



ಕಟ್ಟಬೇಕಿಲ್ಲಿ ನಾವ್ ಕರುನಾಡ ಮಣ್ಣಿನಲಿ
ಮೆಟ್ಟಿ ಎದೆಯೊಡ್ಡಿ ನಾವ್ ನಿಲ್ಲಬೇಕಿಲ್ಲಿ
ಎಡರು ತೊಡರುಗಳ ಹಾದಿಯಲಿ
ಮೋಹ ಕೊಂಕುಗಳ ಬದಿಗಿರಿಸಿಯಿಲ್ಲಿ

ಒಂದೇ ತೋಟದಿ ಅರಳಿದ ಪುಷ್ಪಗಳಿಹುದಿಲ್ಲಿ
ಜಾತಿ ಭೇದಗಳ ಕಿತ್ತೊಗೆವೆವಿಲ್ಲಿ
ತುಂಗೆ ಭದ್ರೆ ಗೋದಾವರಿ ಕೃಷ್ಣೆ
ನೇತ್ರಾವತಿ ಕಾವೇರಿ ಪಾವನ ನದಿಗಳಿಲ್ಲಿ

ರಾಜ ವಂಶಸ್ಥರು ಆಳಿ ಮೆರೆದಿಹರಿಲ್ಲಿ
ವೀರ ಧೀರ ಸ್ತ್ರೀರತ್ನಗಳು ಸೆಣಸಿಹರಿಲಿ
ನಾಡು ನುಡಿಯ ಅಕ್ಕರೆಯ ಸವಿಯಿಹುದಿಲ್ಲಿ
ಹೆಮ್ಮೆಯ ರಕುತ ಹರಿಯುತಿದೆ ಧಮನಿಯಲಿ

ಅನ್ನದಾತರು ಬೆಳೆವರು ಹೊನ್ನನಿಲ್ಲಿ
ಸಕಲ ವೃತ್ತಿಯವರು ಒಮ್ಮತದಿ ಬಾಳುವರಿಲ್ಲಿ
ಸಕ್ಕರೆಯ ಸವಿಜೇನು ತುಂಬಿಹುದಿಲ್ಲಿ
ರಾಗ ದ್ವೇಷ ಭೋಗಗಳ ತ್ಯಜಿಸೋಣವಿಲ್ಲಿ

ಕನ್ನಡದ ಹೆಸರು ಬೆರೆತಿರಲಿ ತನುವಲಿ
ಹೊನ್ನುಡಿಯ ಬರವಣಿಗೆ ಸದಾ ನಲಿದಾಡುತಿರಲಿ
ಸಂಗೀತ ನೃತ್ಯ ನಾಟಕ ಯಕ್ಷಗಾನದಲಿ
ಹೊಮ್ಮಲಿ ಸವಿನುಡಿಯು ಹೆಜ್ಜೆ ಹೆಜ್ಜೆಯಲಿ

ಕನ್ನಡದ ಹಸಿರ ಸಿರಿ ಕಂಗೊಳಿಸಲಿ
ಮುನ್ನಡೆಯ ಸಾಧನೆಯ ಪಥವು ಸಾಗಲಿ
ಮನದಾಸೆ ಮಹದಾಸೆ ಗುರಿಯೊಂದೇ ನನಗೆ
ಮತ್ತೊಮ್ಮೆ ಹುಟ್ಟುವೆ ಕನ್ನಡಮ್ಮನ ಗರ್ಭದಲಿ

–ರತ್ನಾ ಕೆ.ಭಟ್ ತಲಂಜೇರಿ, ಪುತ್ತೂರು

## ಭೂ ಕಬಳಿಕೆ ಆರೋಪ ರಾಜಕೀಯ ಪಿತೂರಿ: ಅಜಿತ್ ಪವಾರ್

• ಪ್ರಜೋದಯ ವರದಿ



**ಮುಂಬೈ:** ಚುನಾವಣೆ ಬಂದಾಗಲೆಲ್ಲ ನನ್ನ ಮೇಲೆ ಆರೋಪಗಳು ಬರುತ್ತವೆ. ಇದು ರಾಜಕೀಯ ಪಿತೂರಿ ಎಂದು ಮಹಾರಾಷ್ಟ್ರದ ಉಪ ಮುಖ್ಯಮಂತ್ರಿ ಅಜಿತ್ ಪವಾರ್ ಅವರು ಹೇಳಿದ್ದಾರೆ.

ಪುಣೆಯ ಮುಂಧ್ವಾ ಪ್ರದೇಶದಲ್ಲಿರುವ ಸುಮಾರು 1,800 ಕೋಟಿ ಮೌಲ್ಯದ 40 ಎಕರೆ ಜಮೀನನ್ನು ಅಜಿತ್‌ಪವಾರ್ ಅವರ ಪುತ್ರ, ಪಾರ್ಥ್ ಪವಾರ್ ಒಡೆತನದ ಕಂಪನಿಯು, ಮುದ್ರಾಂಕ ಶುಲ್ಕವನ್ನು ವಂಚಿಸಿ, ಕೇವಲ 300 ಕೋಟಿಗೆ ಅಕ್ರಮವಾಗಿ ಖರೀದಿಸಿದೆ ಎಂದು ವಿರೋಧ ಪಕ್ಷಗಳು ಆರೋಪಿಸಿದ್ದು, ಮಹಾ ವಿಕಾಸ್ ಅಘಾಡಿ ಮೈತ್ರಿ ಕೂಟವು ಪವಾರ್ ರಾಜೀನಾಮೆಗೆ ಒತ್ತಾಯಿಸಿದೆ.

ಈ ಹಿಂದೆಯೂ 70 ಸಾವಿರ ಕೋಟಿ ಮೊತ್ತದ ನೀರಾವರಿ ಯೋಜನೆಯ ಅಕ್ರಮದಲ್ಲಿ ನನ್ನ ಹೆಸರನ್ನು ಎಳೆದು ತರಲಾಗಿತ್ತು. ಇದೀಗ ಸ್ಥಳೀಯ ಸಂಸ್ಥೆಗಳ ಚುನಾವಣೆ ಬೆನ್ನಲ್ಲೇ, ಈ ಆರೋಪ ಹೊರಿಸಲಾಗಿದೆ. ನಾವು ಪಾರದರ್ಶಕವಾಗಿ ಕೆಲಸ ಮಾಡುತ್ತಿದ್ದೇವೆಂದು ಪವಾರ್ ಹೇಳಿದ್ದಾರೆ.

# ರಾಜ್ಯದಲ್ಲಿ 18 ಸಾವಿರ ಶಿಕ್ಷಕರ ನೇಮಕಾತಿ

## 900 ಕರ್ನಾಟಕ ಪಬ್ಲಿಕ್ ಸ್ಕೂಲ್‌ಗಳು ಪ್ರಾರಂಭ | ಶಿಕ್ಷಣ ಸಚಿವ ಮಧು ಬಂಗಾರಪ್ಪ

• ಪ್ರಜೋದಯ ವರದಿ

**ಮಡಿಕೇರಿ:** ರಾಜ್ಯದಲ್ಲಿ 900 ಕರ್ನಾಟಕ ಪಬ್ಲಿಕ್ ಸ್ಕೂಲ್‌ಗಳನ್ನು ಪ್ರಾರಂಭಿಸಲಾಗುವುದು. ಈ ನಿಟ್ಟಿನಲ್ಲಿ 18 ಸಾವಿರ ಶಿಕ್ಷಕರ ಆಯ್ಕೆ ಪ್ರಕ್ರಿಯೆ ನಡೆಸಲು ಸರ್ಕಾರ ತೀರ್ಮಾನಿಸಿದೆ ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರು ಹೇಳಿದರು.

ಸೋಮವಾರಪೇಟೆ ತಾಲ್ಲೂಕಿನ ಬೇಳೂರು ಸರ್ಕಾರಿ ಹಿರಿಯ ಪ್ರಾಥ ಮಿಕ ಶಾಲೆಯ ಶತಮಾನೋತ್ಸವ ಸಮಾರೋಪ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು ಪ್ರತಿಯೊಬ್ಬರೂ ಶಿಕ್ಷಣ ಪಡೆಯಬೇಕು. ಶಿಕ್ಷಣ ದಿಂದ ಮಾತ್ರ ದೇಶದ ಅಭಿವೃದ್ಧಿ ಸಾಧಿಸಬಹುದು ಎಂಬುದು ಕಟು ಸತ್ಯವಾಗಿದ್ದು, ರಾಜ್ಯದಲ್ಲಿ ಎಲ್‌ಕೆಜಿ ಯಿಂದ ಪಿಯುಸಿಯ ವರೆಗೆ 1.16 ಕೋಟಿ ಮಕ್ಕಳು ವ್ಯಾಸಂಗ ಮಾಡುತ್ತಿದ್ದಾರೆ. ಸರ್ಕಾರ ಎಲ್ಲಾ ರೀತಿಯ ಸೌಲಭ್ಯ ಒದಗಿಸುತ್ತಿದೆ ಎಂದರು.

ಈಗಾಗಲೇ 51 ಸಾವಿರ ಅತಿಥಿ ಶಿಕ್ಷಕರು ಕೆಲಸ ಮಾಡುತ್ತಿದ್ದು, ಯಾವುದೇ ಕೊರತೆ ಎದುರಾಗದಂತೆ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡಲಾಗುತ್ತಿದೆ. ಸರ್ಕಾರ ರಾಜ್ಯದ 46 ಸಾವಿರ ಸರ್ಕಾರಿ ಶಾಲೆಗಳಲ್ಲಿ ಉಚಿತ ವಿದ್ಯುತ್ ಸೌಲಭ್ಯ ನೀಡಲಾಗಿದ್ದು, ಶಿಕ್ಷಕರು ಸಂಜೆ ವೇಳೆ ಹೆಚ್ಚುವರಿ ತರಗತಿಗಳನ್ನು ನಡೆಸಲು ಹಾಗೂ ಮಕ್ಕಳಿಗೆ






ಕಂಪ್ಯೂಟರ್ ಕಲಿಕೆಯ ಶಿಕ್ಷಣವನ್ನು ಒದಗಿಸುವ ದೃಷ್ಟಿಯಿಂದ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಹೇಳಿದರು.

ಎಲ್ಲಾ ಸೌಲಭ್ಯಗಳು ವಿದ್ಯಾರ್ಥಿ ಗಳಿಗೆ ದೊರಕಿದಾಗ ವಿದ್ಯಾರ್ಥಿಗಳು ಅನುತ್ತೀರ್ಣರಾಗುವುದಿಲ್ಲ. ನಮ್ಮ ವ್ಯವಸ್ಥೆಗಳು ವಿದ್ಯಾರ್ಥಿಗಳನ್ನು ಅನು ತ್ತೀರ್ಣಗೊಳಿಸುತ್ತಿದೆ ಎಂಬ ಆತಂಕವೂ ಇದೆ. ಸರ್ಕಾರಿ ಶಾಲೆಗಳಲ್ಲಿ ಅವಕಾಶಗಳ ಕೊರತೆಯಿದ್ದು, ಅದನ್ನು ಹಂತಹಂತವಾಗಿ ಪರಿಹರಿಸುವ ಯೋಜನೆ ಇಲಾಖೆಯ ಮುಂದಿದೆ ಎಂದು ತಿಳಿಸಿದರು.

**ವಿದ್ಯಾಭ್ಯಾಸ ಮೊಟಕುಗೊಳಿಸ ಬಾರದೆಂಬ ಮೂರು ಬಾರಿ ಪರೀಕ್ಷೆ**

ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ವಿದ್ಯಾರ್ಥಿಗಳು ಅನುತ್ತೀರ್ಣ ಗೊಂಡು ವಿದ್ಯಾಭ್ಯಾಸ ಮೊಟಕು ಗೊಳಿಸಬಾರದೆಂಬ ಸದುದ್ದೇಶದಿಂದ ಒಟ್ಟು ಮೂರು ಬಾರಿ ಪರೀಕ್ಷೆ ಬರೆಯುವ ಅವಕಾಶ ನೀಡಿದ ಹಿನ್ನೆಲೆ ಯಲ್ಲಿ ಪ್ರಸಕ್ತ ಸಾಲಿನಲ್ಲಿ ಶೇ.79.89 ತಮ್ಮ ಸ್ವಂತ ಪರಿಶ್ರಮದ ಮೇಲೆ ಉತ್ತೀರ್ಣರಾಗಿದ್ದಾರೆ. ಈ ಹಿಂದಿನ ವರ್ಷಗಳಲ್ಲಿ ರಾಜ್ಯದಲ್ಲಿ ಶೇ.20ರಷ್ಟು ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ನಕಲು ಮಾಡುತ್ತಿದ್ದರು ಎಂಬ ವರದಿಯಿದ್ದು, ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿ ಸಿಸಿ ಕ್ಯಾಮೆರಾ ಅಳವಡಿಸಲಾಗಿದೆ. ಅದ ರಿಂದ ವಿದ್ಯಾರ್ಥಿಗಳು ತಮ್ಮ ಪರಿ ಶ್ರಮದಿಂದ ಪರೀಕ್ಷೆಯನ್ನು ಬರೆಯುವಂತಾಗಿದೆಂದು ಹೇಳಿದರು.

ಶಾಸಕ ಡಾ.ಮಂತರ್‌ಗೌಡ ಮಾತ ನಾಡಿ, ಸರ್ಕಾರದ ಹಲವು ಯೋಜನೆ ಗಳಿಂದ ಸರ್ಕಾರಿ ಶಾಲೆಗಳಲ್ಲಿಗುಣ ಮಟ್ಟದ ಶಿಕ್ಷಣ ಸಿಗುತ್ತಿದೆ. ಇಂದಿನ ದಿನಗಳಲ್ಲಿಗುಣಮಟ್ಟದ ಶಿಕ್ಷಣವು ಕೇವಲ ವ್ಯಕ್ತಿತ್ವ ನಿರ್ಮಾಣದ ಪಯಣವಾಗಬೇಕು. ಗ್ರಾಮೀಣ ಭಾಗದ ಸರ್ಕಾರಿ ಶಾಲೆಗಳು ಮಕ್ಕಳ ಭವಿಷ್ಯ ಕಟ್ಟುವ ನಿಜವಾದ ಅಡಿಪಾಯಗಳಾಗಿವೆ. ಬೇಳೂರು ಶಾಲೆಯು ಶತಮಾನ ದಿಂದಲೂ ಈ ದಿಸೆಯಲ್ಲಿಮಾಡಿದ ಸೇವೆ ಶ್ಲಾಘನೀಯ. ಬೇಳೂರು ಶಾಲೆಯಂತಹ ಹಳೆಯ ಸಂಸ್ಥೆಗಳು ಹೊಸ ಪೀಳಿಗೆಗೆ ಮಾದರಿಯಾಗಬೇಕೆಂದು ತಿಳಿಸಿದರು.

## 15 ಲಕ್ಷ ಟನ್ ಸಕ್ಕರೆ ರಫ್ತಿಗೆ ಕೇಂದ್ರ ಅನುಮತಿ

• ಪ್ರಜೋದಯ ವರದಿ

**ನವದೆಹಲಿ:** ಅಕ್ಟೋಬರ್‌ನಿಂದ ಆರಂಭವಾಗಿರುವ ಪ್ರಸ್ತಕ ವರ್ಷದ ಸಕ್ಕರೆ ಮಾರುಕಟ್ಟೆ ವರ್ಷದಲ್ಲಿ 15 ಲಕ್ಷ ಟನ್ ಸಕ್ಕರೆ ರಫ್ತಿಗೆ ಕೇಂದ್ರ ಸರ್ಕಾರ ಅನುಮತಿ ನೀಡಿದೆ ಎಂದು ಕೇಂದ್ರ ಆಹಾರ ಸಚಿವ ಪ್ರಲ್ಹಾದ ಜೋಶಿ ಅವರು ಹೇಳಿದ್ದಾರೆ.

ಕಾಕಂಬಿ (ಮೊಲಾಸಿಸ್) ರಫ್ತು ಮೇಲಿನ ಶೇ.50ರಷ್ಟು ಸುಂಕವನ್ನು ತೆಗೆಯಲು ಕೇಂದ್ರ ನಿರ್ಧರಿಸಿದೆ ಎಂದು ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ನ.7ರಂದು ಬರೆದ ಪತ್ರದಲ್ಲಿ ಜೋಶಿ ತಿಳಿಸಿದ್ದಾರೆ.

ದೇಶದಲ್ಲಿನ ಕಬ್ಬು ಬೆಳೆಗಾರರ ಹಿತಾಸಕ್ತಿ ಕಾಪಾಡಲು ಕೇಂದ್ರ ಸರ್ಕಾರ ತೆಗೆದು ಕೊಂಡಿರುವ ಕ್ರಮದ ಬಗ್ಗೆ ಪತ್ರದಲ್ಲಿ ವಿವರಿಸಿದ್ದಾರೆ.

2024-25ರ ಸಕ್ಕರೆ ಮಾರುಕಟ್ಟೆ ವರ್ಷದಲ್ಲಿ (ಅಕ್ಟೋಬರ್‌ನಿಂದ ಸೆಪ್ಟೆಂಬರ್) 10 ಲಕ್ಷ ಟನ್ ಸಕ್ಕರೆ ರಫ್ತಿಗೆ ಕೇಂದ್ರ ಅನುಮತಿ ನೀಡಿತ್ತು. ಈ ಪೈಕಿ 8 ಲಕ್ಷ ಟನ್ ಸಕ್ಕರೆ ಮಾತ್ರ ರಫ್ತಾಗಿತ್ತು. ಈ ಬಾರಿ ಉದ್ಯಮವು 20 ಲಕ್ಷ ಟನ್ ಸಕ್ಕರೆ ರಫ್ತಿಗೆ ಬೇಡಿಕೆ ಇಟ್ಟಿತ್ತು. ಆದರೆ, 15 ಲಕ್ಷ ಟನ್ ರಫ್ತಿಗೆ ಅನುಮತಿ ನೀಡಿದೆ.

ಸಕ್ಕರೆ ದಾಸ್ತಾನು ಹೆಚ್ಚಳದಿಂದಾಗಿ



ಸಕ್ಕರೆ ರಫ್ತಿಗೆ ಅನುಮತಿ ನೀಡಲು ಕೇಂದ್ರ ಚಿಂತನೆ ನಡೆಸುತ್ತಿದೆ ಎಂದು ಇತ್ತೀಚೆಗೆ ಕೇಂದ್ರ ಆಹಾರ ಕಾರ್ಯದರ್ಶಿ ಸಂಜೀವ್ ಚೋಪ್ರಾ ಅವರು ಹೇಳಿದ್ದರು.

ಕಳೆದ ಸಕ್ಕರೆ ಮಾರುಕಟ್ಟೆ ವರ್ಷದಲ್ಲಿ 34 ಲಕ್ಷ ಟನ್ ಸಕ್ಕರೆಯನ್ನು ಎಥೆನಾಲ್ ತಯಾರಿಕೆಗೆ ಕೈಗಾರಿಕೆಗಳು ಬಳಕೆ ಮಾಡಿವೆ. ಇದು ಅಂದಾಜು ಮಾಡಿದ್ದ 45 ಲಕ್ಷ ಟನ್‌ಗಿಂತ ಕಡಿಮೆ. ಅದರ ಪರಿಣಾಮವಾಗಿ ಹೆಚ್ಚಿನ ದಾಸ್ತಾನು ಇದೆ ಎಂದು ಚೋಪ್ರಾ ತಿಳಿಸಿದ್ದರು.

ಪ್ರಸಕ್ತ ಋತುವಿನಲ್ಲಿ 3.4 ಕೋಟಿ ಟನ್ ಸಕ್ಕರೆ ಉತ್ಪಾದನೆ ಆಗಲಿದೆ. ಈ ಪೈಕಿ 2.85 ಕೋಟಿ ಟನ್ ಸಕ್ಕರೆಗೆ ದೇಶದ ಮಾರುಕಟ್ಟೆಯಲ್ಲಿ ಬೇಡಿಕೆ ಇದೆ ಎಂದು ಹೇಳಿದ್ದರು.

## ದೆಹಲಿಯಲ್ಲಿ ಅತಿ ಕಳಪೆ ಮಟ್ಟಕ್ಕೆ ಕುಸಿದ ಗಾಳಿಯ ಗುಣಮಟ್ಟ




• ಪ್ರಜೋದಯ ವರದಿ

**ನವದೆಹಲಿ:** ದೆಹಲಿಯಲ್ಲಿ ಗಾಳಿಯ ಗುಣಮಟ್ಟ ಅತಿ ಕಳಪೆ ಮಟ್ಟಕ್ಕೆ ಕುಸಿದಿದೆ. ಭಾನುವಾರ ಎಕ್ಯೂಐ ಸೂಚ್ಯಂಕ 391 ತಲುಪಿದೆ. ತಾಪಮಾನ 11.7 ಡಿಗ್ರಿ ಸೆಲ್ಸಿಯಸ್‌ಗೆ ಇಳಿದಿದ್ದು, ದಟ್ಟ ಹೊಗೆ ತುಂಬಿದ ವಾತಾವರಣ ಕಂಡುಬಂದಿದೆ.

ಭಾನುವಾರ ಸಂಜೆ 4 ಗಂಟೆಯ ಹೊತ್ತಿಗೆ ಎಕ್ಯೂಐ ಸೂಚ್ಯಂಕ 370ಕ್ಕೆ ತಲುಪಿದ್ದು, ನಗರವನ್ನು ರೆಡ್ ಝೋನ್‌ನಲ್ಲಿ ಇರಿಸಲಾಗಿದೆ. ಮುಂದಿನ ಕೆಲವು ದಿನಗಳವರೆಗೆ ದೆಹಲಿ ಯಾದ್ಯಂತ ಗಾಳಿಯ ಗುಣಮಟ್ಟ ಕಳಪೆಯಾಗಿಯೇ ಇರಲಿದೆ ಎಂದು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ ಹೇಳಿದೆ.

ದೆಹಲಿಯಲ್ಲಿ ಗಾಳಿಯ ಗುಣ ಮಟ್ಟ ಕುಸಿಯಲು ಕೃಷಿ ತ್ಯಾಜ್ಯಗಳನ್ನು ಸುಡುವುದು ಶೇ.5ರಷ್ಟು ಕಾರಣವಾದರೆ, ಅತಿಯಾದ ವಾಹನ ಸಂಚಾರ ಶೇ.20ರಷ್ಟು ಕಾರಣವಾಗಿದೆ. ಸ್ಯಾಟಲೈಟ್ ಅಂಕಿ-ಅಂಶಗಳ ಪ್ರಕಾರ, ಈವರೆಗೆ ಪಂಜಾಬ್‌ನಲ್ಲಿ 238 ಕೃಷಿ ತ್ಯಾಜ್ಯಕ್ಕೆ ಬೆಂಕಿ ಹಾಕಿದ ಪ್ರಕರಣ, ಹರಿಯಾಣದಲ್ಲಿ 42 ಮತ್ತು ಉತ್ತರ ಪ್ರದೇಶದಲ್ಲಿ 158 ಪ್ರಕರಣ ವರದಿಯಾಗಿದೆ.

## ಲೋಕಾಯುಕ್ತ ಆಸ್ತಿ: ಕಾಯ್ದೆ ತಿದ್ದುಪಡಿ ಅವಶ್ಯ

• ಪ್ರಜೋದಯ ವರದಿ

**ಬೆಂಗಳೂರು:** ಲೋಕಾಯುಕ್ತ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುವ ನ್ಯಾಯಮೂರ್ತಿಗಳು ಮತ್ತು ಸರ್ಕಾರಿ ನೌಕರರು ತಮ್ಮ ಆಸ್ತಿಯ ವಿವರಗಳನ್ನು ಬಹಿರಂಗ ಗೊಳಿಸುವು ದಕ್ಕೆ ಅವಕಾಶ ಕಲ್ಪಿಸಲು ಲೋಕಾ ಯುಕ್ತ ಕಾಯ್ದೆ ತಿದ್ದುಪಡಿಗೆ ಮುಂಬ ರುವ ವಿಧಾನಮಂಡಲ ಅಧಿವೇಶನ ದಲ್ಲಿ ಮಸೂದೆ ಮಂಡಿಸಬೇಕೆಂದು ವಿಧಾನ ಪರಿಷತ್ ಸದಸ್ಯರೂ ಆಗಿ ರುವ ಕೆಪಿಸಿಸಿ ಮಾಧ್ಯಮ ವಿಭಾಗದ ಅಧ್ಯಕ್ಷ ರಮೇಶ್ ಬಾಬು ಅವರು ಆಗ್ರಹಿಸಿದ್ದಾರೆ.

ಈ ಬಗ್ಗೆ ಕಾನೂನು ಸಚಿವ ಎಚ್.ಕೆ.ಪಾಟೀಲ ಅವರಿಗೆ ಪತ್ರ ಬರೆದಿರುವ ಅವರು, ಪಾರದರ್ಶಕ ಆಡಳಿತ ಉದ್ದೇಶದಿಂದ ಪ್ರತಿ ವರ್ಷ ಲೋಕಾ ಯುಕ್ತರು, ಉಪ ಲೋಕಾ ಯುಕ್ತರು ಮತ್ತು ನೌಕರರು ತಮ್ಮ ಆಸ್ತಿಗಳನ್ನು ಬಹಿರಂಗಗೊಳಿಸಲು ಕಾಯ್ದೆಗೆ ತಿದ್ದುಪಡಿ ತರಬೇಕೆಂದು ಮನವಿ ಮಾಡಿದ್ದಾರೆ.

ಲೋಕಾಯುಕ್ತ ಕಾಯ್ದೆಯ ಅನ್ವಯ ವಿಧಾನ ಮಂಡಲದ ಸದಸ್ಯರು ಪ್ರತಿವರ್ಷ ತಮ್ಮ ಆಸ್ತಿಯ ವಿವರಗಳನ್ನು ಲೋಕಾಯುಕ್ತಕ್ಕೆ ಸಲ್ಲಿಸಬೇಕಿದೆ. ಆಸ್ತಿ ವಿವರಗಳನ್ನು ಜೂನ್ 30ರೊಳಗೆ ಸಲ್ಲಿಸದ ಶಾಸಕರ ಪಟ್ಟಿಯನ್ನು ಲೋಕಾಯುಕ್ತ ಕಾಯ್ದೆ ಅನ್ವಯ ಬಿಡುಗಡೆ ಮಾಡಲಾಗುತ್ತದೆ. ಸಾರ್ವಜನಿಕ ಹಿತದೃಷ್ಟಿಯಿಂದ ಇದು ಅವಶ್ಯ. ಲೋಕಾಯುಕ್ತ ಸಂಸ್ಥೆಯಲ್ಲಿ ಇರುವವವರೂ ತಮ್ಮ ಆಸ್ತಿ ಪಟ್ಟಿಯನ್ನು ಪ್ರಕಟಿಸುವುದು ಸಾರ್ವಜನಿಕ ಹಿತದೃಷ್ಟಿಯಿಂದ ಅವಶ್ಯ ಎಂದು ಅವರು ಪ್ರತಿಪಾದಿಸಿದ್ದಾರೆ.

ಲೋಕಾಯುಕ್ತರು ಮತ್ತು ಉಪ ಲೋಕಾಯುಕ್ತರು ತಮ್ಮ ಆಸ್ತಿ ಬಹಿರಂಗಪಡಿಸಲು ಲೋಕಾಯುಕ್ತ ಕಾಯ್ದೆ ತಿದ್ದುಪಡಿ ಮಾಡಬೇಕೆಂದು 2021ರಲ್ಲಿ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದೆ. ನನ್ನ ಪತ್ರಕ್ಕೆ ಅಭಿಪ್ರಾಯ ನೀಡುವಂತೆ ಲೋಕಾಯುಕ್ತ ನಿಬಂಧ ಕರಿಗೆ ಸರ್ಕಾರ ಪತ್ರ ಬರೆದಿದ್ದರೂ, ಲೋಕಾಯುಕ್ತದಿಂದ ಯಾವುದೇ ಮಾಹಿತಿ ನೀಡಿಲ್ಲ. ಲೋಕಾಯುಕ್ತ ಸಂಸ್ಥೆಯು 2017-18ರಿಂದ 2021-22ವರೆಗಿನ ವಾರ್ಷಿಕ ವರದಿ ಗಳನ್ನು ವಿಧಾನಮಂಡಲದಲ್ಲಿ ಮಂಡಿಸದಿರು ವುದು ವಿಧಾನಪರಿಷತ್ತಿನ ವರದಿ ಯಿಂದ ಗೊತ್ತಾಗುತ್ತದೆ. ಲೋಕಾಯುಕ್ತವು ವಾರ್ಷಿಕ ವರದಿಯನ್ನು ಅನುಮೋದನೆಗಾಗಿ ನಿಯಮಾನುಸಾರ ವಿಧಾನಮಂಡಲದಲ್ಲಿ ಮಂಡಿಸಲು ಕ್ರಮ ಕೈಗೊಳ್ಳಬೇಕು ಎಂದೂ ಅವರು ಕೋರಿದ್ದಾರೆ.




## ಭಾರತ-ಅಂಗೋಲ ಸಹಕಾರ ಹೆಚ್ಚಿಸಲು ಒಪ್ಪಂದ

• ಪ್ರಜೋದಯ ವರದಿ

**ಲುವಂಡ (ಅಂಗೋಲ):** ರಾಷ್ಟ್ರಪತಿ ದ್ರೌಪದಿ ಮುರ್ಮು ಅಂಗೋಲದಲ್ಲಿ ಅಧಿಕೃತ ಪ್ರವಾಸದಲ್ಲಿದ್ದಾರೆ. ಭೇಟಿಯ ಮೊದಲ ದಿನ ಅಂಗೋಲ ಮತ್ತು ಭಾರತ ದೇಶಗಳು ಮೀನುಗಾರಿಕೆ, ಜಲಚರ ಸಾಕಣೆ ಮತ್ತು ಸಮುದ್ರ ಸಂಪನ್ಮೂಲಕ್ಕೆ ಸಂಬಂಧಿಸಿದಂತೆ ದ್ವಿಪಕ್ಷೀಯ ಒಪ್ಪಂದ ಮಾಡಿಕೊಂಡಿವೆ.

ನವೆಂಬರ್ 8ರಿಂದ 11ರವರೆಗೆ ನಾಲ್ಕು ದಿನ ಮುರ್ಮು ಅವರು ಅಂಗೋಲ ಪ್ರವಾಸದಲ್ಲಿರಲಿದ್ದಾರೆ. ಇದು ಭಾರತದ ರಾಷ್ಟ್ರಪತಿಯೊಬ್ಬರು ಅಂಗೋಲಕ್ಕೆ ನೀಡುತ್ತಿರುವ ಮೊದಲ ಭೇಟಿಯಾಗಿದೆ. ಮುರ್ಮು ಅವರನ್ನು ಅಂಗೋಲದ ಅಧ್ಯಕ್ಷ ಜೊವಾವೊ ಮ್ಯಾನುಯೆಲ್ ಗೊನ್ಸಾಲ್ವೆಸ್ ಲೌರೆನ್ಕೊ ಅವರು ಸ್ವಾಗತಿಸಿ ದರು. ನಂತರ ಇಬ್ಬರು ನಾಯಕರು ನಿಯೋಗ ಮಟ್ಟದ ಮಾತುಕತೆ ನಡೆಸಿ ಒಪ್ಪಂದಕ್ಕೆ ಸಹಿ ಹಾಕಿದರು.

## ಐರನ್‌ಮ್ಯಾನ್ ಆದ ಮಾಜಿ ಐಪಿಎಸ್, ಬಿಜೆಪಿ ನಾಯಕ ಅಣ್ಣಾಮಲೈ

• ಪ್ರಜೋದಯ ವರದಿ




**ಬೆಂಗಳೂರು:** ಗೋವಾದಲ್ಲಿ ನಡೆದ ಐರನ್‌ಮ್ಯಾನ್ 70.3 ಓಟದಲ್ಲಿ ಸಂಸದ ತೇಜಸ್ವಿ ಸೂರ್ಯ ಅವರು ಎರಡನೇ ಬಾರಿ ಭಾಗಿಯಾಗಿ ಸ್ಪರ್ಧೆ ಪೂರ್ಣಗೊಳಿಸಿದ್ದಾರೆ.

ತಮಿಳುನಾಡು ಬಿಜೆಪಿ ರಾಜ್ಯಾಧ್ಯಕ್ಷ ಕೆ.ಅಣ್ಣಾಮಲೈ ಕೂಡ ಈ ಐರನ್ ಮ್ಯಾನ್70.3ನಲ್ಲಿ ಭಾಗಿಯಾಗಿ ಸ್ಪರ್ಧೆ ಪೂರ್ಣಗೊಳಿಸಿದ್ದಾರೆ.

ಸ್ಪರ್ಧೆಯು, 1.9 ಕಿ.ಮೀ ಈಜು, 90 ಕಿ.ಮೀ ಸೈಕ್ಲಿಂಗ್ ಮತ್ತು 21.1 ಕಿ.ಮೀ ಓಟ ಒಳಗೊಂಡಿತ್ತು. ಇದನ್ನು ತೇಜಸ್ವಿ ಸೂರ್ಯ ಅವರು 7 ಗಂಟೆ 49 ನಿಮಿಷಗಳಲ್ಲಿ ಪೂರ್ಣಗೊಳಿಸಿದ್ದಾರೆ.

ಮೊದಲ ಬಾರಿ ಸ್ಪರ್ಧೆಯಲ್ಲಿ ಭಾಗಿಯಾಗಿದ್ದ ಅಣ್ಣಾಮಲೈ ಅವರು 8 ಗಂಟೆ 13 ನಿಮಿಷಗಳಲ್ಲಿ ಸ್ಪರ್ಧೆಯ ಎಲ್ಲಾ ಹಂತಗಳನ್ನು ಪೂರ್ಣಗೊಳಿಸಿದ್ದಾರೆ.

ಈ ಕುರಿತು ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಬರೆದುಕೊಂಡಿರುವ ತೇಜಸ್ವಿ ಸೂರ್ಯ ಅವರು ಅಣ್ಣಾಮಲೈ ಜೊತೆಗಿನ ಫೋಟೋಗಳನ್ನೂ ಹಂಚಿಕೊಂಡಿದ್ದಾರೆ. ಅಣ್ಣಾಮಲೈ ಅವರೊಂದಿಗೆ ಭಾಗವಹಿಸಿದ್ದರಿಂದ ನನ್ನ ಎರಡನೇ ಐರನ್‌ಮ್ಯಾನ್ 70.3 ಗೆ ಒಂದು ಬಲವಾದ ಮುಕ್ತಾಯ ಸಿಕ್ಕಿದೆ. ಸಾವಿರಾರು ಜನರು ಉತ್ಸಾಹದಿಂದ ಭಾಗವಹಿಸಿದ್ದು, ಪ್ರಧಾನಿ ನರೇಂದ್ರ ಮೋದಿ ಅವರ ಕರೆ ಯುವಕರಲ್ಲಿ ಆರೋಗ್ಯ, ಶಿಸ್ತು ಮತ್ತು ದೃಢ ಸಂಕಲ್ಪದ ಅಲೆಯನ್ನು ಪ್ರೇರೇಪಿಸುತ್ತಿದೆ ಎಂದಿದ್ದಾರೆ.

### 74 ಕೆರೆ ತುಂಬಿಸುವ ಯೋಜನೆಗೆ ಸಿ.ಎಂ. ಸಿದ್ದರಾಮಯ್ಯ ಚಾಲನೆ

# ಕಬ್ಬು ಬೆಳೆಗಾರರಿಗೆ ದ್ರೋಹ ಬಗೆದದ್ದು ಪ್ರಲ್ಹಾದ್ ಜೋಶಿ

• ಪ್ರಜೋದಯ ವರದಿ

**ಕೂಡ್ಲಿಗಿ (ವಿಜಯನಗರ ಜಿಲ್ಲೆ):** ಕಬ್ಬಿಗೆ ಎಫ್‌ಆರ್‌ಪಿ ಮತ್ತು ಎಂಎಸ್‌ಪಿ ಎರಡನ್ನೂ ನಿಗದಿ ಮಾಡುವುದು ಕೇಂದ್ರದ ಬಿಜೆಪಿ ಸರ್ಕಾರ. ಕಬ್ಬು ಬೆಳೆಗಾರರಿಗೆ ದ್ರೋಹ ಬಗೆದದ್ದು ಪ್ರಲ್ಹಾದ್ ಜೋಶಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆರೋಪಿಸಿದರು.

ಭಾನುವಾರ ಇಲ್ಲಿ 74 ಕೆರೆ ತುಂಬಿಸುವ ಯೋಜನೆಗೆ ಚಾಲನೆ ಹಾಗೂ 1,250 ಕೋಟಿ ಗೂ ಅಧಿಕ ವೆಚ್ಚದ ವಿವಿಧ ಯೋಜನೆಗಳ ಉದ್ಘಾಟನೆ/ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಅವರು, ವಿಜಯೇಂದ್ರ ತಮ್ಮದೇ ಕೇಂದ್ರ ಸರ್ಕಾರ ಕಬ್ಬು ಬೆಳೆಗಾರರಿಗೆ ಮಾಡಿದ ದ್ರೋಹವನ್ನು ಮರೆಮಾಚಿ ಬೆಳಗಾವಿಗೆ ಹೋಗಿ ಪ್ರತಿಭಟನೆಯ ನಾಟಕ ಮಾಡಿದರು. ಅವರು ಕಬ್ಬು ಬೆಳೆದ ರೈತರ ಜೊತೆಗಲ್ಲ, ಪ್ರಧಾನಿ, ಗೃಹ ಸಚಿವ, ಪ್ರಲ್ಹಾದ ಜೋಷಿ ಮನೆಯಲ್ಲಿ ಮಲಗಬೇಕಿತ್ತು. ಕೇಂದ್ರ ಸರ್ಕಾರ ಕಬ್ಬು ಬೆಳೆಗಾರರಿಗೆ ದ್ರೋಹ ಬಗೆದರೂ



ರಾಜ್ಯ ಸರ್ಕಾರ ಹೆಚ್ಚುವರಿ ಹಣ ನೀಡಿ ನಮ್ಮ ಕಬ್ಬು ಬೆಳೆಗಾರರನ್ನು ಕಾಪಾಡಿ ಕೆಲಸ ಮಾಡಿದೆ ಎಂದು ತಿಳಿಸಿದರು.

**ಶಾಸಕರಿಗೆ ಶ್ಲಾಘನೆ**

1.70 ಲಕ್ಷ ಜನರಿಗೆ ಕುಡಿಯುವ ನೀರು ಒದಗಿಸುವ ಜೊತೆಗೆ ಕೂಡ್ಲಿಗಿಯ ಅಂತರ್ಜಲ ವೃದ್ಧಿಗೆ ಶ್ರಮಿಸಿ ಯಶಸ್ವಿಯಾದ ಶಾಸಕ ಶ್ರೀನಿವಾಸ್ ಅವರನ್ನು ಪಡೆದ ಕೂಡ್ಲಿಗಿ ಜನತೆ ಅತ್ಯಂತ ಅದೃಷ್ಟವಂತರು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಬರಡು ನೆಲ ಕೂಡ್ಲಿಗಿಯನ್ನು ಹಸಿರಿನ ನೆಲವನ್ನಾಗಿ ಮಾಡಲು ಪಣತೊಟ್ಟು ಕೆಲಸ ಮಾಡುತ್ತಿ ರುವ ಶಾಸಕ ಶ್ರೀನಿವಾಸ್ ಅವರು ಅತ್ಯಂತ ಕ್ರಿಯಾಶೀಲರು. ಅವರಿಂದ ಕ್ಷೇತ್ರದ ಅಭಿವೃದ್ಧಿ ಅತ್ಯಂತ ವೇಗ ಪಡೆದುಕೊಂಡಿದೆ ಎಂದರು.

ನಮ್ಮದು ಅಭಿವೃದ್ಧಿ ಪರವಾದ ನುಡಿದಂತೆ ನಡೆಯುತ್ತಿರುವ ಸರ್ಕಾರ. ಕಳೆದ ಎರಡು ವರ್ಷಗಳಲ್ಲಿ ಕೂಡ್ಲಿಗಿ ಕ್ಷೇತ್ರಕ್ಕೆ 1,750 ಕೋಟಿಗೂ ಅಧಿಕ ಮೊತ್ತದ ಹಣದಲ್ಲಿ ಬೇರೆ ಬೇರೆ ಅಭಿವೃದ್ಧಿ ಕಾರ್ಯಗಳು ನಡೆದಿವೆ. ಜೊತೆಗೆ ಚುನಾವಣೆ ವೇಳೆ ಐದು ಗ್ಯಾರಂಟಿಗಳನ್ನು ಘೋಷಿಸಿ, ಐದಕ್ಕೆ ಐದನ್ನೂ ಜಾರಿ ಮಾಡಿದ್ದೇವೆ. ರಾಜ್ಯದ ಜನರ ಮನೆ ಬಾಗಿಲಿಗೆ ಪ್ರತಿ ತಿಂಗಳು ಸರ್ಕಾರದ ಗ್ಯಾರಂಟಿಗಳು ತಲುಪುತ್ತಿವೆ. 1.20 ಕೋಟಿ ಕುಟುಂಬಗಳ ಮನೆ ಯಜ ಮಾನಿಯರಿಗೆ ಗೃಹಲಕ್ಷ್ಮಿ ಹಣ ಮತ್ತು ಗೃಹ ಜ್ಯೋತಿಯ ಸವಲತ್ತು ತಲುಪುತ್ತಿದೆ ಎಂದರು.

ಎರಡು ವರ್ಷದಲ್ಲಿ ನಮ್ಮ ಸರ್ಕಾರ 1 ಲಕ್ಷ ಕೋಟಿಯನ್ನು ನೇರವಾಗಿ ರಾಜ್ಯದ ಜನರ ಜೇಬಿಗೆ ಹಾಕಿದೆ ಎಂದು ಲೆಕ್ಕ ಮುಂದಿಟ್ಟರು. ನಾವು ನುಡಿದಂತೆ ನಡೆದು ಜನರ ಜೇಬಿಗೆ ಹಣ ಹಂಚುತ್ತಿದ್ದರೆ, ಸುಳ್ಳನ್ನೇ ಮನೆ ದೇವರು ಮಾಡಿಕೊಂಡಿರುವ ಬಿಜೆಪಿಯವರು ಮಾನ ಮರ್ಯಾದೆ ಬಿಟ್ಟು ರಾಜ್ಯದ ಜನರಿಗೆ ಸುಳ್ಳುಗಳನ್ನು ಹಂಚುತ್ತಿದ್ದಾರೆ ಎಂದು ಕುಟುಕಿದರು. ಸುಳ್ಳಿನ ಸರದಾರ ಬಿಜೆಪಿಯವರು ಈಗ ಸಾರ್ವಜನಿಕವಾಗಿ ಹರಾಜಾಗಿದ್ದಾರೆ. ಇವರು ಲಜ್ಜೆಗೆಟ್ಟು ಮತಗಳ್ಳತನಕ್ಕೆ ಇಳಿದು ಸಿಕ್ಕಿ ಬಿದ್ದಿದ್ದಾರೆ ಎಂದರು.

## ಸ್ಕಾಲರ್ಸ್ ಶಾಲೆಯಲ್ಲಿ ಕನಕದಾಸ ಜಯಂತಿ

• ಪ್ರಜೋದಯ ವರದಿ

**ಹಾಸನ:** ನಗರದ ಸ್ಕಾಲರ್ಸ್ ಶಾಲೆಯಲ್ಲಿ ದಾಸ ಶ್ರೇಷ್ಠ ಕನಕದಾಸರ 538ನೇ ಜಯಂತಿ ಆಚರಿಸಲಾಯಿತು.

ಶಾಲೆಯ ಆಡಳಿತಾಧಿಕಾರಿ ಡಾ. ಹೆಚ್.ಎನ್.ಚಂದ್ರಶೇಖರ್ ಮಾತನಾಡಿ, ಕನಕದಾಸರ ಜೀವನ ಬೋಧನೆ, ಕೀರ್ತನೆಗಳು ಇಂದಿಗೂ ಲಕ್ಷಾಂತರ ಜನರಿಗೆ ಮಾರ್ಗದರ್ಶನ ಹಾಗೂ ಸ್ಫೂರ್ತಿಯಾಗಿದೆ. ದಾಸ ಶ್ರೇಷ್ಠರೆಂದೇ ಕರೆಯಲಾಗುವ ಕನಕದಾಸರು ಮಹಾನ್ ಹರಿದಾಸ ಹಾಗೂ ಕೀರ್ತನಕಾರ. ಕರ್ನಾಟಕದಲ್ಲಿ ಭಕ್ತಿ ಚಳವಳಿಯ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರು ಎಂದರು.

ಮಕ್ಕಳು ಹಾಗೂ ಶಿಕ್ಷಕರು ಕನಕದಾಸರ ಕೀರ್ತನೆಗಳನ್ನು ಹಾಡುವುದರ ಮೂಲಕ ಅವರಿಗೆ ಗೀತ ನಮನವನ್ನು ಸಲ್ಲಿಸಿದರು. ಅಜ್ಞಾನಿಗಳೊಡನೆ ಅಧಿಕ ಸ್ನೇಹಕ್ಕಿಂತ ವಿಜ್ಞಾನಿಗಳೊಡನೆ ಜಗಳವಾಡುವುದು ಲೇಸೆಂದು ಕನಕದಾಸರು



ತಮ್ಮ ಕೀರ್ತನೆಗಳಲ್ಲಿ ತಿಳಿಸಿದ್ದಾರೆ. ಅಂತೆಯೇ ಮಕ್ಕಳು ಸಜ್ಜನರ ಸಂಗವನ್ನು ಮಾಡಬೇಕೆಂದು ತಿಳಿಸಿದರು.


ಶಾಲೆಯ ಕಾರ್ಯದರ್ಶಿ ಮಮತಾ ಚಂದ್ರಶೇಖರ್ ಹಾಗೂ ಇತರರಿದ್ದರು.

## ಕಾಂಗ್ರೆಸ್ ಎಂದರೆ ಮುಸ್ಲಿಮರು ಎಂಬ ರೆಡ್ಡಿ ಹೇಳಿಕೆ: ರಾಜನಾಥ್ ಸಿಂಗ್ ವಿರೋಧ

• ಪ್ರಜೋದಯ ವರದಿ

**ಔರಂಗಾಬಾದ್:** ಕಾಂಗ್ರೆಸ್ ಎಂದರೆ ಮುಸ್ಲಿಮರು ಎಂದಿದ್ದ ತೆಲಂಗಾಣ ಮುಖ್ಯಮಂತ್ರಿ ರೇವಂತ್ ರೆಡ್ಡಿ ಅವರನ್ನು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಭಾನುವಾರ ಟೀಕಿಸಿದ್ದು, ಇದು ರಾಜಕೀಯ ಅಧಃಪತನದ ಧೋರಣೆಯ ಮಾತಾಗಿದೆ ಎಂದು ಹೇಳಿದ್ದಾರೆ.

ಬಿಹಾರದ ಔರಂಗಾಬಾದ್ ಜಿಲ್ಲೆಯಲ್ಲಿ ನಡೆದ ಚುನಾವಣಾ ರ‍್ಯಾಲಿಯನ್ನು ಉದ್ದೇಶಿಸಿ ಮಾತನಾಡಿದ ರಾಜನಾಥ್ ಸಿಂಗ್, ಬಿಜೆಪಿ ನೇತೃತ್ವದ



ಎನ್‌ಡಿಎ ಧರ್ಮ, ಜಾತಿ ಮತ್ತು ಪಂಥ ಗಳ ಹೆಸರಿನಲ್ಲಿ ಜನರನ್ನು ಒಡೆಯುವುದಿಲ್ಲ ಎಂದು ಹೇಳಿದ್ದಾರೆ.

ಕಾಂಗ್ರೆಸ್ ಮತ್ತು ಆರ್‌ಜೆಡಿ ಧರ್ಮ, ಜಾತಿ ಮತ್ತು ಪಥಗಳ ಆಧಾರದಲ್ಲಿ ಸಮಾಜವನ್ನು ಒಡೆಯಲು ಯತ್ನಿಸುತ್ತಿದೆ. ಈ ಚುನಾವಣೆಯು ಉತ್ತಮ ಆಡಳಿತ ಮತ್ತು ಜಂಗಲ್ ರಾಜ್ ನಡುವಿನ ಹೋರಾಟವಾಗಿದೆ. ಬಿಹಾರವನ್ನು ಜಾತಿ ಸಂಘರ್ಷಕ್ಕೆ ತಳ್ಳಿದ ಮತ್ತು ಹತ್ಯಾಕಾಂಡ ನಡೆಸಿದ ಅದೇ ಜನರು ಈಗ ಮತ ಕೇಳುತ್ತಿದ್ದಾರೆ. ಅಂತಹ ಶಕ್ತಿಗಳ ಬಗ್ಗೆ ಜನರು ಎಚ್ಚರದಿಂದ ಇರಬೇಕು ಎಂದಿದ್ದಾರೆ.

ಮಾಜಿ ಕ್ರಿಕೆಟಿಗ ಮೊಹಮ್ಮದ್ ಅಜರುದ್ದೀನ್ ಅವರನ್ನು ತೆಲಂಗಾಣ ಸಂಪುಟಕ್ಕೆ ಸೇರಿಸಿದ್ದನ್ನು ಕೇಂದ್ರ ಸಚಿವ ಜಿ.ಕಿಶನ್ ರೆಡ್ಡಿ ಅವರು ವಿರೋಧಿಸಿದ್ದರು. ಅದನ್ನು ಉಲ್ಲೇಖಿಸಿ ಜುಬಿಲಿ ಹಿಲ್ಸ್ ವಿಧಾನಸಭಾ ಕ್ಷೇತ್ರದ ಉಪ ಚುನಾವಣಾ ಪ್ರಚಾರದಲ್ಲಿ ಮಾತನಾಡಿದ್ದ ಮುಖ್ಯಮಂತ್ರಿ ರೇವಂತ್ ರೆಡ್ಡಿ, ಕಾಂಗ್ರೆಸ್ ಮಾತ್ರವೆ ಅಲ್ಪಸಂಖ್ಯಾತ ಸಮುದಾಯಕ್ಕೆ ದೊಡ್ಡ ಹುದ್ದೆಗಳನ್ನು ನೀಡುತ್ತದೆ. ಕಾಂಗ್ರೆಸ್ ಎಂದರೆ ಮುಸ್ಲಿಮರು ಮತ್ತು ಮುಸ್ಲಿಮರು ಎಂದರೆ ಕಾಂಗ್ರೆಸ್ ಎಂದು ಹೇಳಿದ್ದರು.

## ವಾಷಿಂಗ್ಟನ್ ಸುಂದರ್‌ಗೆ ಇಂಪ್ಯಾಕ್ಟ್ ಪ್ಲೇಯರ್ ಪದಕ



• ಪ್ರಜೋದಯ ವರದಿ

**ಬ್ರಿಸ್ಬೇನ್:** ಆಸ್ಟ್ರೇಲಿಯಾ ವಿರುದ್ಧದ ಟಿ-20 ಸರಣಿಯಲ್ಲಿ ಭಾರತ ಗೆಲುವಿಗೆ ಗಮನಾರ್ಹ ಕಾಣಿಕೆ ನೀಡಿದ ವಾಷಿಂಗ್ಟನ್ ಸುಂದರ್ ಅವರು ಇಂಪ್ಯಾಕ್ಟ್ ಪ್ಲೇಯರ್ ಆಫ್ ದಿ ಸೀರಿಸ್ ಪದಕ ಸ್ವೀಕರಿಸಿದ್ದಾರೆ. ತನ್ಮೂಲಕ ಅವರು ಭಾರತದ ಪ್ರಭಾವಿ ಆಲ್‌ರೌಂಡರ್‌ಗಳಲ್ಲಿ ತಮ್ಮ ವರ್ಚಸ್ಸನ್ನು ಹೆಚ್ಚಿಸಿದ್ದಾರೆ.

ತಂಡದ ಮ್ಯಾನೇಜರ್ ರಾಹಿಲ್ ಖಾಜಾ ಅವರಿಂದ ಪದಕ ಸ್ವೀಕರಿಸುವಾಗ ಸುಂದರ್ ಅವರು ಖುಷಿಯಿಂದ ಮುಗುಳುನಗೆ ಬೀರುತ್ತಿರುವ ವಿಡಿಯೋವನ್ನು ಡ್ರೆಸಿಂಗ್ ರೂಮ್ ಬಿಟಿಎಸ್ ಶೀರ್ಷಿಕೆಯಲ್ಲಿ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಭಾನುವಾರ ಹಂಚಿಕೊಂಡಿದೆ.

ಆಸ್ಟ್ರೇಲಿಯಾಕ್ಕೆ ಬಂದು ತಂಡಕ್ಕೆ ಆಡುತ್ತಿರುವ ಅವಕಾಶ ದೊರಕಿದ್ದು ಅದ್ಭುತ. ತಂಡದ ವಿಜಯಕ್ಕೆ ಕಾಣಿಕೆ ನೀಡಿರುವುದರಿಂದ ಅತೀವ ಸಂಸತವಾಗಿದೆ ಎಂದು 26 ವರ್ಷ ವಯಸ್ಸಿನ ಆಲ್‌ರೌಂಡರ್ ಅವರು ಪದಕ ಸ್ವೀಕರಿಸಿದ ನಂತರ ತಿಳಿಸಿದ್ದಾರೆ.

ಹೋಬಾರ್ಟ್‌ನಲ್ಲಿ ನಡೆದ ಮೂರನೇ ಟಿ-20 ಪಂದ್ಯದಲ್ಲಿ ಮೇಲಿನ ಕ್ರಮಾಂಕದಲ್ಲಿ ಆಡಿದ ಅವರು 23 ಎಸೆತಗಳಲ್ಲಿ 49 ರನ್ ಬಾರಿಸಿ ತಂಡದ ಪರ ಅತ್ಯಧಿಕ ಮೊತ್ತದ ಕಾಣಿಕೆ ನೀಡಿದ್ದರು. ನಾಲ್ಕನೇ ಟಿ-20 ಪಂದ್ಯದ ಕೊನೆಯ ಗಳಿಗೆಯಲ್ಲಿ ಬೌಲಿಂಗ್ ಮಾಡಿ ಲಗುಬಗನೇ ಮೂರು ವಿಕೆಟ್ ಪಡೆದು ಆಸ್ಟ್ರೇಲಿಯಾ ಪತನ ತ್ವರಿತಗೊಳಿಸಿದ್ದರು.

## ಆರ್‌ಎಸ್‌ಎಸ್‌ಗೆ ದೇಣಿಗೆ ಕೊಡುವ ಸ್ವಯಂಸೇವಕರು ಯಾರು



**ಬೆಂಗಳೂರು:** ಆರ್‌ಎಸ್‌ಎಸ್‌ಗೆ ದೇಣಿಗೆ ಕೊಡುವ ಸ್ವಯಂ ಸೇವಕರು ಯಾರು, ಅವರನ್ನು ಹೇಗೆ ಗುರುತಿಸಲಾಗುತ್ತದೆಂದು ಸಚಿವ ಪ್ರಿಯಾಂಕ್ ಖರ್ಗೆ ಅವರು ಪ್ರಶ್ನಿಸಿದ್ದಾರೆ.

ತನ್ನ ಸ್ವಯಂಸೇವಕರು ನೀಡುವ ದೇಣಿಗೆಗಳ ಮೂಲಕ ಆರ್‌ಎಸ್‌ಎಸ್ ಕಾರ್ಯನಿರ್ವಹಿಸುತ್ತದೆಂಬ ಆರ್‌ಎಸ್‌ಎಸ್ ಸರ ಸಂಘ ಚಾಲಕ ಮೋಹನ್ ಭಾಗವತ್ ಅವರ ಹೇಳಿಕೆಯನ್ನು ಪ್ರಸ್ತಾಪಿಸಿ ತಮ್ಮ ಎಕ್ಸ್ ಖಾತೆಯಲ್ಲಿ ಪ್ರತಿಕ್ರಿಯಿಸಿರುವ ಪ್ರಿಯಾಂಕ್, ಈ ಹೇಳಿಕೆಗೆ ಸಂಬಂಧಿಸಿ ದಂತೆ ಹಲವಾರು ಕಾನೂನುಬದ್ಧ ಪ್ರಶ್ನೆಗಳು ಉದ್ಭವಿಸುತ್ತವೆ ಎಂದಿದ್ದಾರೆ.

ರಾಷ್ಟ್ರೀಯ ಮಟ್ಟದಲ್ಲಿ ವ್ಯಾಪಕವಾದ ಪ್ರಭಾವ ಮತ್ತು ಉಪಸ್ಥಿತಿಯ ಹೊರತಾಗಿಯೂ ಆರ್‌ಎಸ್‌ಎಸ್ ನೋಂದಣಿಯಾಗದೆ ಏಕೆ ಮುಂದುವರೆದಿದೆ, ಭಾರತದಲ್ಲಿರುವ ಪ್ರತಿಯೊಂದು ಧಾರ್ಮಿಕ ಅಥವಾ ದತ್ತಿ ಸಂಸ್ಥೆಯು ಆರ್ಥಿಕ ಪಾರದರ್ಶಕತೆಯನ್ನು ಕಾಯ್ದುಕೊಳ್ಳಬೇಕಾದಾಗ, ಆರ್‌ಎಸ್‌ಎಸ್‌ಗೆ ಇದೇ ರೀತಿಯ ಹೊಣೆಗಾರಿಕೆ ಕಾರ್ಯವಿಧಾನಗಳ ಅನುಪಸ್ಥಿತಿಯನ್ನು ಸಮ ರ್ಥಿಸುವುದು ಏನು ಎಂದೂ ಅವರು ಪ್ರಶ್ನಿಸಿದ್ದಾರೆ.

ನೀಡಲಾದ ದೇಣಿಗೆಗಳ ಪ್ರಮಾಣ ಮತ್ತು ಸ್ವರೂಪ ಏನು? ಈ ಕೊಡುಗೆಗಳನ್ನು ಹೇಗೆಲ್ಲ ಸ್ವೀಕರಿಸಲಾಗುತ್ತದೆ? ಆರ್‌ಎಸ್‌ಎಸ್ ಪಾರದರ್ಶಕವಾಗಿ ಕಾರ್ಯನಿರ್ವಹಿಸುತ್ತಿದ್ದರೆ, ತನ್ನದೇ ಆದ ನೋಂದಾಯಿತ ಗುರುತಿನಡಿಯಲ್ಲಿ ಸಂಸ್ಥೆಗೆ ನೇರವಾಗಿ ದೇಣಿಗೆಗಳನ್ನು ಏಕೆ ನೀಡಲಾಗು ವುದಿಲ್ಲ? ನೋಂದಾಯಿತ ಘಟಕವಾಗದೆ ಆರ್‌ಎಸ್‌ಎಸ್ ತನ್ನ ಹಣಕಾಸು ಮತ್ತು ಸಾಂಸ್ಥಿಕ ರಚನೆಯನ್ನು ಹೇಗೆ ಉಳಿಸಿಕೊಳ್ಳುತ್ತದೆ? ಪೂರ್ಣ ಸಮಯದ ಪ್ರಚಾರಕರಿಗೆ ಯಾರು ವೇತನ ನೀಡುತ್ತಾರೆ ಮತ್ತು ಸಂಸ್ಥೆಯ ದಿನನಿತ್ಯದ ಕಾರ್ಯಾಚರಣೆಯ ವೆಚ್ಚಗಳನ್ನು ಪೂರೈಸುತ್ತಾರೆ ಎಂದೂ ಪ್ರಿಯಾಂಕ್ ಕೇಳಿದ್ದಾರೆ.

## ಮ್ಯಾರಥಾನ್: ನಜೀಮ್, ಶ್ರೇಯಾ ಚಾಂಪಿಯನ್

• ಪ್ರಜೋದಯ ವರದಿ

**ಮಂಗಳೂರು:** ತಮಿಳುನಾಡಿನ ನಜೀಮ್ ಮತ್ತು ದಕ್ಷಿಣ ಕನ್ನಡ ಜಿಲ್ಲೆ ಸುಳ್ಯದ ಶ್ರೇಯಾ ಎಂ ಅವರು ನಗರದಲ್ಲಿ ಭಾನುವಾರ ನಡೆದ ಮಂಗಳೂರು ಮ್ಯಾರಥಾನ್‌ನಲ್ಲಿ ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ವಿಭಾಗದ ಚಾಂಪಿಯನ್ ಆದರು.

ಮಂಗಳೂರು ರನ್ನರ್ಸ್ ಕ್ಲಬ್ ಆಯೋಜಿಸಿದ್ದ ಸ್ಪರ್ಧೆಯ ಫುಲ್ ಮ್ಯಾರಥಾನ್‌ನಲ್ಲಿ ನಜೀಮ್ 2 ಗಂಟೆ 42 ನಿಮಿಷ 15 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು. ಮಹಿಳೆಯರ ವಿಭಾಗದಲ್ಲಿ ಗುರಿ ತಲುಪಲು ಶ್ರೇಯಾ 3 ಗಂಟೆ 22:08 ನಿಮಿಷ ತೆಗೆದು ಕೊಂಡರು. ಶ್ರೇಯಾ, ನಗರದ ಶ್ರೀದೇವಿ ಇಂಜಿನೀಯರಿಂಗ್ ಕಾಲೇಜಿನ ಅಂತಿಮ ವರ್ಷದ ವಿದ್ಯಾರ್ಥಿನಿ.

**ಫಲಿತಾಂಶಗಳು: ಪುರುಷರು:** ಫುಲ್ ಮ್ಯಾರಥಾನ್: ನಜೀಮ್ 1. ಕಾಲ: 2:42:15, ಮನೋಜ್ ರಾಣೆ2, ಪಂಡ್ರ ರಾಮವೆಟ್ಟಿ3, ಹಾಫ್ ಮ್ಯಾರಥಾನ್: ಸಿದ್ದೇಶ್ ಪಾಂಡುರಂಗ 1. ಕಾಲ: 1:08:44, ಗುರ್ಮೇಸಾ ನಿಗೂಸೆ2, ಶಿವಾನಂದ ಚಿಗರಿ3; 32 ಕಿ.ಮೀ: ಕಾರ್ತಿಕ್ ಕರ್ಕೇರ1. ಕಾಲ: 1:45:46, ಸಚಿನ್ ಪೂಜಾರಿ2, ಪ್ರಥಮೇಶ್ 3, 10ಕೆ: ಶ್ರೀಧರ 1. ಕಾಲ: 32 ನಿಮಿಷ 22ಸೆಕೆಂಡು, ರಂಗಣ್ಣ2, ರಮೇಶ್ ತಲಕೇರಿ3.

**ಮಹಿಳೆಯರು:** ಫುಲ್ ಮ್ಯಾರಥಾನ್: ಶ್ರೇಯಾ ಎಂ1. ಕಾಲ: 3:22:08, ಫಾಲೇಶ್ವರಿ ರಾಜ್ವಾ2, ಬಿಜೋಯ್ ಬರ್ಮನ್3. ಹಾಫ್ ಮ್ಯಾರಥಾನ್: ಲೆಸಾರ್ಗೆ ಕೆನಯ್ಟ್1. ಕಾಲ: 1:28:30, ನಂದಿನಿ ಜಿ2, ಸಾಕ್ಷಿ3; 32 ಕಿಮೀ: ಕವಿತಾ ರೆಡ್ಡಿ1. ಕಾಲ: 2:52:31, ವಾಣಿ2, ಗೀತಾಂಜಲಿ ಗುಬ್ಬೇವಾಡ3; 10ಕೆ: ಸೌಮ್ಯಾ1. ಕಾಲ: 43ನಿ 23ಸೆ, ರಸೀನಾ2, ಪ್ರಜ್ಞಾ ಪ್ರಸಾದ್3.




## ಶಾಂಘೈ-ದೆಹಲಿ ನಡುವೆ ವಿಮಾನಯಾನ ಪುನರಾರಂಭ



• ಪ್ರಜೋದಯ ವರದಿ

**ಬೀಜಿಂಗ್:** ಚೀನಾ ಈಸ್ಟರ್ನ್ ಏರ್‌ಲೈನ್ಸ್ ಶಾಂಘೈ-ದೆಹಲಿ ನಡುವಿನ ಸಂಚಾರ ಸೇವೆಯನ್ನು ಭಾನುವಾರದಿಂದ ಪುನರಾರಂಭಿಸಿದ್ದು, ಶೇ. 95ಕ್ಕಿಂತ ಹೆಚ್ಚು ಆಸನಗಳು ಭರ್ತಿಯಾಗಿದ್ದವು. ಐದು ವರ್ಷಗಳ ಬಳಿಕ ಭಾರತದ ಜೊತೆ ನೇರ ವಿಮಾನಯಾನ ಸೇವೆ ಪುನರಾರಂಭಿಸಿದ ಚೀನಾದ ಮೊದಲ ವಿಮಾನಯಾನ ಸಂಸ್ಥೆ ಇದಾಗಿದೆ.

248 ಪ್ರಯಾಣಿಕರನ್ನು ಹೊತ್ತ ಎಂಯು 563 ವಿಮಾನವು ಶಾಂಘೈನ ಪುಡಾಂಗ್ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಿಂದ ದೆಹಲಿಗೆ ಹೊರಟಿತು ಎಂದು ಸರ್ಕಾರಿ ಸ್ವಾಮ್ಯದ ಗ್ಲೋಬಲ್ ಟೈಮ್ಸ್ ವರದಿ ಮಾಡಿದೆ.

ಭಾರತೀಯ ವಿಮಾನಯಾನ ಸಂಸ್ಥೆ ಇಂಡಿಗೊ ನ.10ರಿಂದ ದೆಹಲಿ ಗ್ವಾಂಗ್‌ಝೌ ನಡುವಿನ ಸಂಚಾರ ಸೇವೆಯನ್ನು ಆರಂಭಿಸಲಿದೆ.

2020ರ ಕೋವಿಡ್ ಸಾಂಕ್ರಾಮಿಕದ ಸಂದರ್ಭದಲ್ಲಿ ಎರಡೂ ದೇಶಗಳ ನಡುವಿನ ನೇರ ವಿಮಾನಯಾನ ಸಂಪರ್ಕ ಕಡಿತಗೊಂಡಿತ್ತು. ಭಾರತ ಚೀನಾ ಗಡಿಯಲ್ಲಿ ಉದ್ವಿಗ್ನತೆ ಉಂಟಾದ್ದರಿಂದ ವಿಮಾನ ಸಂಚಾರ ಮತ್ತೆ ಆರಂಭವಾಗಿರಲಿಲ್ಲ. ಉಭಯ ದೇಶಗಳ ನಡುವೆ ಹಲವು ಸುತ್ತಿನ ಮಾತುಕತೆಗಳ ಬಳಿಕ ಕೆಲ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಅದರ ಪರಿಣಾಮವಾಗಿ ಕಳೆದ ಅ.26ರಂದು ಇಂಡಿಗೊ ವಿಮಾನವು ಕೋಲ್ಕತ್ತದಿಂದ ಚೀನಾದ ಗ್ವಾಂಗ್‌ಝೌನಲ್ಲಿ ಇಳಿಯಿತು. ಈ ಮೂಲಕ ಎರಡೂ ದೇಶಗಳ ನಡುವಿನ ವಿಮಾನ ಸಂಚಾರ ಪುನರಾರಂಭಕ್ಕೆ ಚಾಲನೆ ದೊರೆಯಿತು.

## ಜಿಲ್ಲಾ ಪತ್ರಕರ್ತರ ಸಂಘಕ್ಕೆ ಜೆ.ಆರ್.ಕೆಂಚೇಗೌಡ ಅಧ್ಯಕ್ಷ



» ಮೊದಲನೇ ಪುಟದಲ್ಲಿ

ಜಿಲ್ಲಾ ಚುನಾವಣಾಧಿಕಾರಿಯಾಗಿ ಪತ್ರಕರ್ತ ರಾಜೇಶ್ ಹಾಗು ಸಹಾಯಕ ಚುನಾವಣಾಧಿಕಾರಿಯಾಗಿ ಮೋಹನ್ ಕಣತೂರು ಕಾರ್ಯ ನಿರ್ವಹಿಸಿದರು.

ಜಿಲ್ಲೆಯ ಹಿರಿಯ ಸಮಾನ ಮನಸ್ಕರೆಲ್ಲ ಒಟ್ಟಾಗಿ ನಡೆಸಿದ ಹೋರಾಟದ ಫಲವಾಗಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಚುನಾವಣೆಯಲ್ಲಿ ಜೆ.ಆರ್. ಕೆಂಚೇಗೌಡ ಅವರ ನೇತೃತ್ವದ ತಂಡ ಗೆಲುವು ಪಡೆದಿದೆ.

ಪತ್ರಕರ್ತರಾದ ಹೆಚ್.ಬಿ. ಮದನಗೌಡ, ರವಿನಾಕಲ ಗೂಡು, ಬಾಳ್ಳುಗೋಪಾಲ್, ಬಿ.ಆರ್. ಉದಯಕುಮಾರ್, ಸಿ.ಆರ್. ಜಗದೀಶ್ ಅವರ ಮಾರ್ಗದರ್ಶನದಲ್ಲಿ ಜೆ.ಆರ್.ಕೆಂಚೇಗೌಡ ಹಾಗೂ ನಂಜುಂಡೇಗೌಡ ಅವರು ಸಮರ್ಪಿತ ತಂಡವಾಗಿ ತಮ್ಮ ತಂಡವನ್ನು ಗೆಲ್ಲಿಸಿಕೊಳ್ಳುವಲ್ಲಿ ಸಫಲರಾಗಿದ್ದಾರೆ.

# ದೆಹಲಿಯ ಔತಣಕೂಟದತ್ತ ಎಲ್ಲರ ಚಿತ್ತ

• ಪ್ರಜೋದಯ ವರದಿ

**ಬೆಂಗಳೂರು :** ದೆಹಲಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಪ್ತರಿಗೆ ಆಯೋಜಿಸಲಾಗಿರುವ ಔತಣಕೂಟ ಭಾರೀ ಕುತೂಹಲ ಕೆರಳಿಸಿದ್ದು, ನವೆಂಬರ್ ಕ್ರಾಂತಿಗೆ ಮತ್ತಷ್ಟು ಪುಷ್ಠಿ ನೀಡಿದಂತಾಗಿದೆ.

ನ.14 ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ದೆಹಲಿಗೆ ತೆರಳುತ್ತಿದ್ದು, ಆ ಸಂದರ್ಭದಲ್ಲಿ ಕೊಪ್ಪಳ ಕ್ಷೇತ್ರದ ಸಂಸದ ರಾಜಶೇಖರ್ ಯತ್ನಾಳ್ ಕಾಂಗ್ರೆಸ್‌ನ ಸಂಸದರಿಗೆ ಹಾಗೂ ಪ್ರಮುಖರಿಗೆ ಔತಣಕೂಟ ಆಯೋಜಿಸಿದ್ದಾರೆ. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕೂಡ ಅದರಲ್ಲಿ ಭಾಗವಹಿಸುವ ಸಾಧ್ಯತೆ ಇದೆ.

ರಾಜ್ಯದ ಅಭಿವೃದ್ಧಿ ಯೋಜನೆಗಳ ಬಗ್ಗೆ ಈ ಸಂದರ್ಭದಲ್ಲಿ ಧ್ವನಿ ಎತ್ತಲು ಮತ್ತು ಕೇಂದ್ರ ಸರ್ಕಾರದ ಮಟ್ಟದಲ್ಲಿ ಬಾಕಿ ಯೋಜನೆಗಳ ಅನುಮೋದನೆಗೆ ಒತ್ತಡ ಹೆಚ್ಚಿಸಲು ಸಂಸದರಿಗೆ ಮನವರಿಕೆ ಮಾಡಿಕೊಡಲು ಈ ಸಭೆ ಆಯೋಜಿಸಲಾಗಿದೆ ಎಂದು ಹೇಳಲಾಗುತ್ತಿದೆ.



ಆದರೆ, ಈ ಹಂತದಲ್ಲೂ ರಾಜ್ಯ ರಾಜಕಾರಣವೇ ಹೆಚ್ಚು ಸದ್ದು ಮಾಡುತ್ತಿದೆ. ನವೆಂಬರ್‌ನಲ್ಲಿ ಸಚಿವ ಸಂಪುಟ ಪುನರ್ ರಚನೆಯಾಗಲಿದೆ, ನಾಯಕತ್ವ ಬದಲಾವಣೆಯಾಗಲಿದೆ ಎಂಬ ಕಾರಣಕ್ಕೆ ಅಲ್ಲಲ್ಲಿ ಪ್ರತ್ಯೇಕ ಸಭೆಗಳು ಗಮನ ಸೆಳೆದಿದ್ದವು. ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಯಾವ ನವೆಂಬರ್ ಕ್ರಾಂತಿಯೂ ಇಲ್ಲ. ಸಚಿವ ಸಂಪುಟ ಕೂಡ ಪುನರ್ ರಚನೆಯಾಗುವುದಿಲ್ಲ. ನಾಯಕತ್ವ ಬದಲಾವಣೆ ಚರ್ಚೆಗಳಿಲ್ಲ ಎಂದು ಕಡ್ಡಿ ಮುರಿದಂತೆ ಮಾತನಾಡಿ ಎಲ್ಲಾ ಗೊಂದಲಗಳಿಗೆ ತೆರೆ ಎಳೆಯುವ ಪ್ರಯತ್ನ ಮಾಡಿದರು.

ಅದರ ನಡುವೆಯೂ ಚರ್ಚೆಗಳು, ಗೊಂದಲಗಳು ಮುಂದುವರಿದೇ ಇವೆ. ರಾಜ್ಯದಲ್ಲಿ ಸಚಿವರಾದ ಸತೀಶ್ ಜಾರಕಿಹೊಳಿ, ಹೆಚ್.ಸಿ. ಮಹದೇವಪ್ಪ, ಜಿ.ಪರಮೇಶ್ವರ್ ಅವರು ಹಲವು ಪ್ರತ್ಯೇಕ ಸಭೆಗಳ ಮೂಲಕ ಗಮನ ಸೆಳೆದಿದ್ದರು. ಹೈಕಮಾಂಡ್ ಕಟ್ಟಪ್ಪಣೆಯ ಮೂಲಕ ಪ್ರತ್ಯೇಕ ಸಭೆಗೆ ಕಡಿವಾಣ ಬಿದ್ದಿದೆ. ಆದರೆ, ರಾಜ್ಯ ರಾಜಕೀಯ ಚರ್ಚೆಗಳು ಈಗ ದೆಹಲಿಗೆ ವರ್ಗಾವಣೆಗೊಂಡಂತಾಗಿದೆ. ನವೆಂಬರ್ 14 ರಂದು ಬಿಹಾರ ವಿಧಾನಸಭೆ ಚುನಾವಣೆಯ ಫಲಿತಾಂಶ ಪ್ರಕಟಗೊಳ್ಳಲಿದೆ. ಅದೇ ವೇಳೆ ದೆಹಲಿಯಲ್ಲಿರುವ ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿಯವರು ಸಚಿವ ಸಂಪುಟ ಪುನರ್ ರಚನೆ ಹಾಗೂ ಇತರ ವಿಚಾರಗಳ ಕುರಿತು ವರಿಷ್ಠ ನಾಯಕರ ಜೊತೆ ಚರ್ಚೆ ನಡೆಸಲಿದ್ದಾರೆಂಬ ನಿರೀಕ್ಷೆಗಳಿವೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಔತಣ ಕೂಟದಲ್ಲಿ ಭಾಗವಹಿಸುತ್ತಿರುವುದರಿಂದಾಗಿ ಹೆಚ್ಚಿನ ದೆಹಲಿ ಭೇಟಿ ಕುತೂಹಲ ಕೆರಳಿಸಿದೆ.

### ಭೋಜನ ಕೂಟದಲ್ಲಿ ಭಾಗವಹಿಸುವುದಿಲ್ಲ : ಜಿ.ಪರಮೇಶ್ವರ್



**ಬೆಂಗಳೂರು :** ದೆಹಲಿಯಲ್ಲಿ ಸಂಸದ ರಾಜಶೇಖರ ಯತ್ನಾಳ್ ಕರೆದಿರುವ ಭೋಜನ ಕೂಟದಲ್ಲಿ ತಾವು ಭಾಗವಹಿಸುವುದಿಲ್ಲ. ನನಗೆ ಆಹ್ವಾನವೂ ಇಲ್ಲ ವೆಂದು ಗೃಹ ಸಚಿವ ಡಾ. ಜಿ. ಪರಮೇಶ್ವರ್ ಅವರು ಸ್ಪಷ್ಟ ಪಡಿಸಿದ್ದಾರೆ.

ಔತಣಕೂಟದ ಬಗ್ಗೆ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, ನವೆಂಬರ್ ಕ್ರಾಂತಿಯ ಬಗ್ಗೆ ಒಬ್ಬೊಬ್ಬರು ಒಂದೊಂ ದು ರೀತಿಯ ಹೇಳಿಕೆ ನೀಡಿದ್ದರೆ, ಅದಕ್ಕೆಲ್ಲಾ ಪ್ರತಿಕ್ರಿಯಿಸುವುದು ಹೇಗೆ, ಈ ಮೊದಲು ಕಾಂಗ್ರೆಸ್ಸ್‌ನಲ್ಲೇ ಇದ್ದ ರಾಜ್ಯಸಭಾ ಸದಸ್ಯ ಕಪಿಲ್ ಸಿಬಾಲ್ ಅವರ ಪುಸ್ತಕ ಬಿಡುಗಡೆ ದೆಹಲಿಯಲ್ಲಿ ನಡೆಯಲಿದೆ. ಅದರಲ್ಲಿ ಭಾಗವಹಿಸಲು ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ, ದೆಹಲಿಗೆ ತೆರಳುತ್ತಿದ್ದಾರೆ. ಆ ಸಂದರ್ಭದಲ್ಲಿ ಭೋಜನ ಕೂಟ ನಡೆಯಬಹುದು. ಆದರೆ, ನನಗೆ ಮಾಹಿತಿ ಇಲ್ಲ. ದಲಿತ ಮುಖ್ಯಮಂತ್ರಿಯ ಬಗ್ಗೆ ನಾನಾ ರೀತಿಯ ಚರ್ಚೆಗಳು ನಡೆಯಬಹುದು. ಅದಕ್ಕೆ ಯಾವುದೇ ರೀತಿಯ ಉತ್ತರ ನೀಡುವುದಿಲ್ಲ ಎಂದಿದ್ದಾರೆ.

## ನುಸುಳು ಕೋರರಿಗೆ ಇಂಡಿಯಾ ಬಣ ನೆರವು : ಅಮಿತ್ ಶಾ

• ಪ್ರಜೋದಯ ವರದಿ



**ಬಿಹಾರ :** ಪ್ರಧಾನಿ ನರೇಂದ್ರ ಮೋದಿ ಅವರು ದೇಶದಲ್ಲಿ ಕೈಗಾರಿಕಾ ಕಾರಿಡಾರ್ ನಿರ್ಮಿಸಲು ಬಯಸುತ್ತಿದ್ದರೆ ಇಂಡಿಯಾ ಬಣದವರು ನುಸುಳುಕೋರರ ಕಾರಿಡಾರ್ ನಿರ್ಮಿಸಲು ಪ್ರಯತ್ನಿಸುತ್ತಿದ್ದಾರೆಂದು ಗೃಹ ಸಚಿವ ಅಮಿತ್ ಶಾ ಭಾನುವಾರ ಆರೋಪಿಸಿದರು.

ಬಿಹಾರ ವಿಧಾನಸಭಾ ಚುನಾವಣೆಯ ಎರಡನೇ ಮತ್ತು ಅಂತಿಮ ಹಂತದ ಚುನಾವಣಾ ಪ್ರಚಾರದ ಕೊನೆಯ ದಿನ ಅವರು ಸಸಾರಾಂ ಪಟ್ಟಣದಲ್ಲಿ ರ‍್ಯಾಲಿ ಉದ್ದೇಶಿಸಿ ಮಾತನಾಡಿದ ಅವರು, ಇತ್ತೀಚೆಗೆ ರಾಹುಲ್ ಗಾಂಧಿ ಹಾಗೂ ಲಾಲೂ ಪುತ್ರ ತೇಜಸ್ವಿ ಯಾದವ್ ಮತದಾರರ ಅಧಿಕಾರ ಯಾತ್ರೆ ನಡೆಸಿದ್ದರು. ಅದು ಬಿಹಾರದ ಬಡ, ದಲಿತ ಮತ್ತು ಅತ್ಯಂತ ಹಿಂದುಳಿದ ವರ್ಗಗಳ ಜನರ ಜೀವನದಲ್ಲಿ ಸುಧಾರಣೆ ತರುವ ಉದ್ದೇಶ ಹೊಂದಿರಲಿಲ್ಲ. ಬದಲಿಗೆ ನುಸುಳುಕೋರರನ್ನು ರಕ್ಷಿಸುವ ಉದ್ದೇಶ ಹೊಂದಿತ್ತು ಎಂದು ದೂರಿದರು.

ಕೇಂದ್ರದಲ್ಲಿ ಮನಮೋಹನ್ ಸಿಂಗ್, ಸೋನಿಯಾ ಗಾಂಧಿ, ಲಾಲೂ ಅವರ ಆಳ್ವಿಕೆ ಇದ್ದಾಗ ಭಯೋತ್ಪಾದಕರು ನಮ್ಮ ನೆಲದಲ್ಲಿ ತಮ್ಮ ಇಚ್ಛೆಯಂತೆ ದಾಳಿ ನಡೆಸಿದ್ದರು. ಆದರೆ, ಅದಕ್ಕೆ ವ್ಯತಿರಿಕ್ತ ಎಂಬಂತೆ, ಈಗ ನಾವು ಭಯೋತ್ಪಾದಕರನ್ನು ಅವರ ಮನೆಗಳೊಳಗೇ ಹೊಡೆದುರುಳಿಸುತ್ತಿದ್ದೇವೆಂದು ಅಮಿತ್ ಶಾ ಪ್ರತಿಪಾದಿಸಿದರು.

ಭವಿಷ್ಯದಲ್ಲಿ ಪಾಕಿಸ್ತಾನದ ಭಯೋತ್ಪಾದಕರು ಮತ್ತೆ ದಾಳಿ ನಡೆಸಲು ಧೈರ್ಯ ಮಾಡಿದರೆ, ಅವರು ಹಾರಿಸುವ ಗುಂಡುಗಳಿಗೆ ಪ್ರತಿಯಾಗಿ ಮಾರ್ಟರ್ ಶೆಲ್‌ಗಳಿಂದ ಪ್ರತೀಕಾರ ತೀರಿಸಿಕೊಳ್ಳಲಾಗುವುದು. ಈ ಮಾರ್ಟರ್ ಶೆಲ್‌ಗಳನ್ನು ಎಲ್ಲಿ ತಯಾರಿಸಲಾಗುತ್ತದೆ ಎಂಬುದು ನಿಮಗೆ ಗೊತ್ತಿದೆಯಾ, ಅದು ಬಿಹಾರದ ಸಾಸಾರಾಂನಲ್ಲಿ. ಪ್ರಧಾನಿ ಮೋದಿ ಅವರು ಇಲ್ಲಿ ರಕ್ಷಣಾ ಕಾರಿಡಾರ್ ನಿರ್ಮಿಸಲು ಪ್ರಯತ್ನಿಸುತ್ತಿದ್ದಾರೆಂದು ಹೇಳಿದರು.

# ಜೈಲಿನಲ್ಲಿ ಖೈದಿಗಳಿಗೆ ರಾಜಾತಿಥ್ಯ : ಹಳೆ ವಿಡಿಯೋಗಳು ಎಂದ ಗೃಹ ಸಚಿವ ಪರಮೇಶ್ವರ್

• ಪ್ರಜೋದಯ ವರದಿ

ಬೆಂಗಳೂರು : ಜೈಲಿನಲ್ಲಿ ಆರೋಪಿಗಳು ಹಾಗೂ ಶಿಕ್ಷಾಧೀನ ಖೈದಿಗಳಿಗೆ ರಾಜಾತಿಥ್ಯ ನೀಡುವ ಪ್ರಕರಣಗಳನ್ನು ಸಹಿಸುವುದಿಲ್ಲ. ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು. ಅಗತ್ಯವಿದ್ದರೆ ವಿಶೇಷ ಸಮಿತಿ ರಚಿಸಿ, ತನಿಖೆ ನಡೆಸುವುದಾಗಿ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರು ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ವಿಡಿಯೋಗಳು 2023ಕ್ಕಿಂತಲೂ ಮೊದಲಿನವು ಎಂಬ ಚರ್ಚೆಗಳಿವೆ. ಅದೇನೇ ಇದ್ದರೂ, ವಿಡಿಯೋಗಳು ಯಾವ ಕಾಲದಲ್ಲೇ ಆಗಿದ್ದರೂ, ಇಂತಹದ್ದೆಲ್ಲ ಜೈಲಿನಲ್ಲಿ ನಡೆಯಬಾರದು. ಸರ್ಕಾರ ಇಂತಹ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಲಿದೆ ಎಂದರು.

ಹಿಂದೆ ಬೆಂಗಳೂರು, ಬೆಳಗಾವಿ ಸೇರಿ ಹಲವು ಬಂಧೀಖಾನೆಗಳಲ್ಲಿ ಈ ರೀತಿ ಪ್ರಕರಣಗಳು ವರದಿಯಾದಾಗ ಕಠಿಣ ಕ್ರಮ ಕೈಗೊಂಡಿದ್ದೇವೆ. ಬೆಂಗಳೂರಿನ ಜೈಲಿನಲ್ಲಿ ನಿಯಮಗಳನ್ನು ಉಲ್ಲಂಘನೆ ಮಾಡಿದ್ದಕ್ಕಾಗಿ ಬಹಳಷ್ಟು ಅಧಿಕಾರಿಗಳನ್ನು ಅಮಾನತು ಗೊಳಿಸಲಾಗಿತ್ತು. ಬಂಧೀ ಖಾನೆಯ ಮುಖ್ಯಸ್ಥರಾದ ಬಿ. ದಯಾನಂದ್ ಅವರು ರಜೆಯಲ್ಲಿದ್ದಾರೆ. ಅವರ ಜೊತೆಯಲ್ಲಿ ಮಾತನಾಡುವ ಪ್ರಯತ್ನ ಮಾಡಿದ್ದೆ. ಜೈಲಿನ ಅಧೀಕ್ಷಕರು ಸೇರಿ ಕೆಳಗಿನ ಹಂತದ ಅಧಿಕಾರಿಗಳು ಯಾರೇ ತಪ್ಪು ಮಾಡಿದ್ದರೂ ತಕ್ಷಣ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಿದ್ದು, ಘಟನೆಯ ಬಗ್ಗೆ ಸಮಗ್ರ ವರದಿ ನೀಡಲು ಆದೇಶಿಸಲಾಗಿದೆ ಎಂದರು.



ಜೈಲಿನಲ್ಲಿ ಸಿಬ್ಬಂದಿಗಳ ಕೊರತೆ ಇದೆ ಎಂದು ಹೇಳಲಾಗುತ್ತಿದೆ. ಇರುವ ಸಿಬ್ಬಂದಿ ಸರಿಯಾಗಿ ಕೆಲಸ ಮಾಡಬೇಕು. ಇಂತಹ ಘಟನೆಗಳಿಗೆ ಸಿಬ್ಬಂದಿ ಕೊರತೆ ಕಾರಣ ಹೇಳಲಾಗು ವುದಿಲ್ಲ. ಆರೋಪಿಗಳಿಗೆ ಟಿವಿ ಒದಗಿ ಸುವುದು, ಮೊಬೈಲ್ ಸೌಲಭ್ಯ ಕಲ್ಪಿಸು ವುದು ಮಾಡಿದರೆ ಅದು ಜೈಲು ಎನಿಸಿಕೊಳ್ಳುವುದಿಲ್ಲ. ಹಿರಿಯ ಅಧಿ ಕಾರಿಗಳನ್ನು ವರದಿ ಕೇಳಿದ್ದೇನೆ. ಜೊತೆಗೆ ತಕ್ಷಣ ನಾನೇ ಸಭೆ ನಡೆಸಿ, ಲೋಪಗಳನ್ನು ಸರಿಪಡಿಸಲು ಆದ್ಯತೆ ನೀಡುತ್ತೇನೆ. ಸಿಸಿಟಿವಿ, ಜಾಮರ್ ಸೇರಿ ಎಲ್ಲಾ ಸಲಕರಣೆಗಳ ಖರೀದಿಗೆ ಸರ್ಕಾರ ಅನುಮೋದನೆ ನೀಡಿದೆ. ಕೆಲವು ಕಡೆ ಅವುಗಳನ್ನು ಅಳವಡಿಸ ಲಾಗಿದೆ. ಇನ್ನೂ ಕೆಲವು ಕಡೆ ಬಾಕಿ ಇದೆ. ಈ ಹಿನ್ನೆಲೆಯಲ್ಲಿ ಅಧಿಕಾರಿಗಳ ಜೊತೆ ಚರ್ಚಿಸುವುದಾಗಿ ಹೇಳಿದರು.

ಜೈಲಿನ ಅಧಿಕಾರಿಗಳು ನೀಡುವ ವರದಿಯಿಂದ ಸಮಾಧಾನವಾಗದಿದ್ದರೆ, ವಿವಿಧ ಹಂತದ ಅಧಿಕಾರಿಗಳನ್ನು ನಿಯೋಜಿಸಿ ಪ್ರತ್ಯೇಕ ಸಮಿತಿಯನ್ನು ರಚಿಸಿ, ತನಿಖೆ ನಡೆಸಲಾಗುವುದು. ಜೈಲಿನಲ್ಲಿರುವ ಉಗ್ರರು ಸೇರಿ ಯಾರ ಕೈಯಲ್ಲೂ ಮೊಬೈಲ್‌ಗಳಿರಬಾರದು. ಎಲ್ಲಾ ಸೌಲಭ್ಯಗಳನ್ನು ಒದಗಿಸುವುದಾದರೆ ಅದು ಜೈಲು ಹೇಗಾಗುತ್ತದೆ. ವಿಡಿಯೋಗಳು ಹಳೆಯವಾಗಲೀ ಅಥವಾ ಹೊಸದಾಗಿರಲಿ ಖೈದಿಗಳಿಗೆ ರಾಜಾ ತಿಥ್ಯ ಸೌಲಭ್ಯ ಕಲ್ಪಿಸುವುದಂತೂ ಸರಿಯಲ್ಲ ಎಂದರು.

ಕೊಲೆ ಆರೋಪದಲ್ಲಿ ಜೈಲಿನಲ್ಲಿರುವ ದರ್ಶನ್ ಹಾಸಿಗೆ, ದಿಂಬಿಗಾಗಿ ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿರುವುದನ್ನು ನಾನು ಮಾಧ್ಯಮಗಳಲ್ಲಿ ಗಮನಿಸಿದ್ದೇನೆ. ಇಂತಹ ಎಲ್ಲಾ ವಿಚಾರಗಳನ್ನು ಅಧಿಕಾರಿಗಳ ಸಭೆಯಲ್ಲಿ ಚರ್ಚಿಸುವುದಾಗಿ ಭರವಸೆ ನೀಡಿದರು. ಬಿಜೆಪಿಯವರು ನನ್ನ ಸಾಮರ್ಥ್ಯದ ಬಗ್ಗೆ ಪ್ರಶ್ನೆ ಮಾಡುತ್ತಾರೆ. ಅವರು ಇದ್ದಾಗ ಏನೆಲ್ಲಾ ನಡೆದಿತ್ತು ಎಂದು ನಾನು ಹೇಳುತ್ತಾ ಹೋದರೆ, ಅದು ರಾಜಕೀಯವಾಗುತ್ತದೆ. ವಿಷಯದ ಗಂಭೀರತೆ ಹಾಳಾಗುತ್ತದೆ. ಅದಕ್ಕಾಗಿ ವಿರೋಧ ಪಕ್ಷಗಳ ಟೀಕೆಗೆ ಪ್ರತಿಕ್ರಿಯಿಸುವುದಿಲ್ಲ.

ಲೋಪಗಳನ್ನು ಸರಿಪಡಿಸುವ ದಿಕ್ಕಿನತ್ತ ಹೆಜ್ಜೆ ಇಡುತ್ತೇನೆ. ಕನ್ನಡಪರ ಸಂಘಟನೆಗಳ ಹೋರಾಟಗಾರರ ವಿರುದ್ಧದ ಪ್ರಕರಣಗಳನ್ನು ಹಿಂಪಡೆಯುವ ಸಂಬಂಧಪಟ್ಟಂತೆ ಸರ್ಕಾರದ ಮಟ್ಟದಲ್ಲಿ ಪರಿಶೀಲನೆ ನಡೆಸಲಾಗುವುದು. ಒಳ್ಳೆಯ ಉದ್ದೇಶಕ್ಕಾಗಿ ಕನ್ನಡಪರ, ರೈತಪರ ಸಂಘಟನೆಗಳು ಹೋರಾಟ ಮಾಡಿದ್ದರೆ, ಅಂತಹ ಪ್ರಕರಣಗಳಲ್ಲಿ ಸಾರ್ವಜನಿಕರ ಆಸ್ತಿಗಳಿಗೆ ಹಾನಿಯಾಗದಿದ್ದರೆ ಪ್ರಕರಣವನ್ನು ಹಿಂಪಡೆಯಲಾಗುವುದು. ಏಕಾಏಕಿ ಅರ್ಜಿ ಕೊಟ್ಟ ತಕ್ಷಣ ಪ್ರಕರಣಗಳನ್ನು ಹಿಂಪಡೆಯಲಾಗುವುದಿಲ್ಲ. ಸಚಿವ ಸಂಪುಟ ಉಪ ಸಮಿತಿ ಪರಿಶೀಲನೆ ಮಾಡಬೇಕು. ಕಾನೂನಿನ ವಿರುದ್ಧ ಪ್ರಕರಣಗಳಲ್ಲಿ ಹೆಚ್ಚಿನ ಹಾನಿಯಾಗಿಲ್ಲ ಎಂದಾದರೆ, ಅವುಗಳನ್ನು ಹಿಂಪಡೆಯಬಹುದೆಂದು ಅಧಿಕಾರಿಗಳು ಶಿಫಾರಸು ಮಾಡುತ್ತಾರೆ. ನಾವು ಅದನ್ನು ಪರಿಗಣಿಸುತ್ತೇವೆ ಎಂದರು.

# ಬಿಹಾರ ಚುನಾವಣೆ : ಮತ್ತೆ ಮಹಿಳಾ ಮತದಾರರು ನಿರ್ಧರಿಸಲಿದ್ದಾರೆಯೇ?

• ಪ್ರಜೋದಯ ವರದಿ

**ನವದೆಹಲಿ :** ಬಿಹಾರ ವಿಧಾನಸಭಾ ಚುನಾವಣೆಯ ಎರಡನೇ ಮತ್ತು ಅಂತಿಮ ಹಂತದ ಪ್ರಚಾರಕ್ಕೆ ಭಾನುವಾರ ಸಂಜೆ ತೆರೆ ಬೀಳುತ್ತಿದ್ದಂತೆಯೇ, ಮಹಿಳಾ ಮತದಾರರ ಮೇಲೆ ಹೆಚ್ಚಿನ ಭರವಸೆ ಇಡಲಾಗಿದೆ. ಮೊದಲ ಹಂತದ ಮತದಾನಕ್ಕಿಂತ ಹೆಚ್ಚಿನ ಮತದಾನವಾಗುವ ನಿರೀಕ್ಷೆ ಇರುವ ಮಹಿಳಾ ಮತದಾರರು, ಬದಲಾವಣೆಯ ರಾಜಕೀಯ ಗಾಳಿ ಬೀಸುತ್ತದೆಯೋ ಇಲ್ಲವೋ ಎಂಬುದನ್ನು ನಿರ್ಧರಿಸುವ ಸಾಧ್ಯತೆ ಇದೆ.

ಟಿಎನ್‌ಐಇ ಜೊತೆ ಮಾತನಾಡಿದ ಆಡಳಿತ ಮತ್ತು ವಿರೋಧ ಪಕ್ಷಗಳ ನಾಯಕರು, ಎರಡನೇ ಹಂತದ ಫಲಿತಾಂಶಗಳು ಹೆಚ್ಚಾಗಿ ಮಹಿಳಾ ಮತದಾನದ ಮೇಲೆ ಅವಲಂಬಿತವಾಗಿದೆ ಎಂದು ಹೇಳಿದರು. ಇದು ಮೊದಲ ಹಂತದ ಮತದಾನದಲ್ಲಿ ದಾಖಲಾದ ಮತದಾನಕ್ಕಿಂತ ಹೆಚ್ಚಾಗಿರುತ್ತದೆ ಎಂದು ನಿರೀಕ್ಷಿಸಲಾಗಿದೆ.

ಬಿಹಾರದ ಮತದಾರರಲ್ಲಿ ಸುಮಾರು ಶೇ. 42 ಕ್ಕಿಂತ ಹೆಚ್ಚಿನ ಮಹಿಳೆಯರು ಇದ್ದಾರೆ. 7.43 ಕೋಟಿ ನೋಂದಾಯಿತ ಮತದಾರರಲ್ಲಿ ಸುಮಾರು 3.5 ಕೋಟಿ ಮಹಿಳೆಯರಿದ್ದು, ಇತ್ತೀಚೆಗೆ ನಡೆದ ಮೊದಲ ಹಂತದ ಮತದಾನದಲ್ಲಿ ಪ್ರಭಾವಶಾಲಿ ಗುಂಪಾಗಿ ಹೊರಹೊಮ್ಮಿದ್ದಾರೆ.

2010 ರಿಂದ ಅವರ ಮತದಾನವು ನಿರಂತರವಾಗಿ ಪುರುಷರಿಗಿಂತ ಹೆಚ್ಚಾಗಿದ್ದು, ಇದು ರಾಜ್ಯದ ರಾಜಕೀಯ ಭವಿಷ್ಯವನ್ನು ನಿರ್ಧರಿಸಿದೆ. ನವೆಂಬರ್ 6 ರಂದು ನಡೆದ ಮೊದಲ ಹಂತದ ಮತದಾನದಲ್ಲಿ ಒಟ್ಟಾರೇ ಶೇ. 65.8 ರಷ್ಟು ಮತದಾನವಾಗಿದೆ. ಈ ಚುನಾವಣೆಯಲ್ಲಿ ಪುರುಷರಿಗಿಂತ ಮಹಿಳೆಯರೇ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದಾಗಿ ಚುನಾವಣಾ ಆಯೋಗ ತಿಳಿಸಿದೆ.

ಎರಡೂ ಮೈತ್ರಿಕೂಟಗಳು ನೀಡಿರುವ ಕಲ್ಯಾಣ ಭರವಸೆಗಳನ್ನು ಮಹಿಳೆಯರು ಎಷ್ಟು ಸುಲಭವಾಗಿ ಸ್ವೀಕರಿಸುತ್ತಾರೆಂಬುದರ ಮೇಲೆ ಫಲಿತಾಂಶ ಅವಲಂಬಿತವಾಗಿದೆ. ಏಕೆಂದರೆ ಮಹಿಳೆಯರು ಹೆಚ್ಚಾಗಿ ಹಣ ವರ್ಗಾವಣೆ, ಶಿಕ್ಷಣಕ್ಕೆ ಸಹಾಯ ಧನ, ಮದ್ಯ ನಿಷೇಧದಂತಹ ಪ್ರಯೋಜನಗಳ ಮೇಲೆ ಒಲವು ಹೊಂದುವ ಸಾಧ್ಯತೆ ಇದೆ ಎಂಬುದು ಸಮೀಕ್ಷೆ ವೇಳೆ ತಿಳಿದುಬಂದಿದೆ ಎಂದು ರಾಜಕೀಯ ವಿಶ್ಲೇಷಕರು ಹೇಳುತ್ತಾರೆ.



ಮಹಿಳಾ ಮತದಾರರು ಖಂಡಿತವಾಗಿಯೂ ಆಡಳಿತಾರೂಢ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಒಕ್ಕೂಟ ಮತ್ತು ವಿರೋಧ ಪಕ್ಷ ಮಹಾ ಘಟಬಂಧನ್ ಎರಡರ ಭವಿಷ್ಯವನ್ನು ನಿರ್ಧರಿಸುವ ಒಂದು ಭಾಗವಾಗಿದ್ದಾರೆ ಎಂದು ಪಾಟ್ನಾ ಮೂಲದ ರಾಜಕೀಯ ವಿಶ್ಲೇಷಕ ಡಾ.ರವಿ ಕೆ ಸಿನ್ಹಾ ಹೇಳಿದ್ದಾರೆ. ಒಂದು ತಿಂಗಳ ಕಾಲ ನಡೆದ ಪ್ರಚಾರಗಳಲ್ಲಿ, ಎರಡೂ ರಾಜಕೀಯ ಮೈತ್ರಿಕೂಟಗಳು ಈ ನಿರ್ಣಾಯಕ ಲಿಂಗ ಆಧಾರಿತ ಮತಬ್ಯಾಂಕ್‌ನ್ನು ಒಲಿಸಿಕೊಳ್ಳಲು ಇನ್ನಿಲ್ಲದಂತೆ ಪ್ರಯತ್ನ ನಡೆಸಿವೆ. ಅವರ ಬೆಂಬಲ ಗಳಿಸಲು ಎಲ್ಲಾ ರೀತಿಯ ಭರವಸೆ ನೀಡಲಾಗಿದೆ.

ಎನ್‌ಡಿಎ ನೇತೃತ್ವದ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರ ಸರ್ಕಾರ ಇತ್ತೀಚಿಗೆ ಮಹಿಳಾ ರೋಜ್‌ಗಾರ್ ಯೋಜನೆಯಡಿ ಎರಡು ಕೋ. ಗೂ ಹೆಚ್ಚು ಮಹಿಳೆಯರಿಗೆ ತಲಾ 10,000 ರೂ.ಗಳ ನೇರ ನಗದು ವರ್ಗಾವಣೆ ಯೋಜನೆಯನ್ನು ಘೋಷಿಸಿದ್ದರು. ಇದು ಆರ್ಥಿಕ ಸ್ವಾತಂತ್ರ್ಯ ಮತ್ತು ಮನೆಯ ಸ್ಥಿರತೆಯನ್ನು ಹೆಚ್ಚಿಸುವ ಗುರಿಯನ್ನು ಹೊಂದಿದ್ದು, ಹಣವನ್ನು ನೇರವಾಗಿ ಮಹಿಳೆಯರ ಖಾತೆಗಳಿಗೆ ಜಮೆ ಮಾಡಲಾಗಿದೆ. ಅವರು ಪ್ರಚಾರದ ಸಮಯದಲ್ಲಿ ಮೌನವಾಗಿದ್ದರೂ, ಮೊದಲ ಹಂತದಲ್ಲಿ ಮತಗಟ್ಟೆಯಲ್ಲಿ ಗಮನಾರ್ಹ ಛಾಪು ಮೂಡಿಸಿದ್ದಾರೆ. ಅಂತಿಮ ಫಲಿತಾಂಶವನ್ನು ರೂಪಿಸುವಲ್ಲಿ ಮತ್ತೆ ನಿರ್ಣಾಯಕ ಪಾತ್ರ ವಹಿಸುವ ನಿರೀಕ್ಷೆಯಿದೆ.

ಆರ್‌ಜೆಡಿ ನೇತೃತ್ವದ ಮಹಾಘಟ್ ಬಂಧನ್ ಅಧಿಕಾರಕ್ಕೆ ಬರದಂತೆ ತಡೆಯಲು ಜಂಗಲ್ ರಾಜ್ ಅನ್ನು ಮತದಾರರಿಗೆ ನೆನಪಿಸಲು ಎನ್‌ಡಿಎ ಪ್ರಯತ್ನಿಸಿದೆ. ಆ ಸಮಯದಲ್ಲಿ ಮಹಿಳೆಯರು ಅಸುರಕ್ಷಿತರಾಗಿದ್ದರು. ಆರ್ಥಿಕ ನೆರವು ಮತ್ತು ಭಯದ ಅಂಶ ಎರಡೂ ಈ ಬಾರಿಯ ಚುನಾವಣೆಗಳ ಮೇಲೆ ಹೆಚ್ಚು ಪ್ರಭಾವ ಬೀರಿವೆ ಎಂದು ಬಿಹಾರದ ಕೆಲವು ಮತದಾರರು ಹೇಳುತ್ತಿದ್ದಾರೆ. ಒಟ್ಟಾರೇ ನವೆಂಬರ್ 14 ರಂದು ಪ್ರಕಟವಾಗುವ ಚುನಾವಣಾ ಫಲಿತಾಂಶದಲ್ಲಿ ಎಲ್ಲವೂ ಗೊತ್ತಾಗಲಿದೆ.

## ಜನಪರ ಕೆಲಸ ಮಾಡಿದರೆ ಉನ್ನತ ಸ್ಥಾನಗಳು ಲಭ್ಯ : ಕೆ.ಎಂ.ಶಿವಲಿಂಗೇಗೌಡ

» ಮೊದಲನೇ ಪುಟದಿಂದ

ಭೇದ ಭಾವ ಬೇಡವೆಂದು ಕರೆ ನೀಡಿದರು.

ಗ್ರಾಮ ಪಂಚಾಯಿತಿಯ ನೂತನ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ನಾಗೇಶ್ ಅವರು ಮಾತನಾಡಿ, ಶಾಸಕ ಶಿವಲಿಂಗೇಗೌಡ ಅವರ ಮಾರ್ಗದರ್ಶನದಲ್ಲಿ ಗ್ರಾಮ ಪಂಚಾಯಿತಿ ಯ ಹಿರಿಯ ಕಿರಿಯ ಎಲ್ಲಾ ಸದಸ್ಯ ರನ್ನು ವಿಶ್ವಾಸಕ್ಕೆ ತೆಗೆದುಕೊಂಡು ನನಗೆ ಸಿಕ್ಕಿರುವ ಈ ಅವಕಾಶದಲ್ಲಿ ನಮ್ಮ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಹಳ್ಳಿಗಳ ಅಭಿವೃದ್ಧಿಗೆ ಶ್ರಮಿಸುವುದಾಗಿ ಭರವಸೆ ನೀಡಿ ದರು. ನೂತನ ಅಧ್ಯಕ್ಷರನ್ನು ನಿಕಟ ಪೂರ್ವ ಅಧ್ಯಕ್ಷ ಮೋಕ್ಷ ಶಂಭುಲಿಂಗೇ ಗೌಡ, ಪ್ರಕಾಶ್, ಸದಸ್ಯರಾದ ಮೋಹನ್ ನಾಯ್ಕ, ಲಕ್ಷ್ಮೀಬಾಯಿ, ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷರು, ಉಪಾಧ್ಯಕ್ಷರು, ಆಲಿ ಸದಸ್ಯರು ಶುಭ ಹಾರೈಸಿದರು.

# ಖಾಲಿ ಇರುವ ಹುದ್ದೆಗಳಿಗೆ ಅರ್ಜಿ ಆಹ್ವಾನ

**ಹಾಸನ:** ರಾಷ್ಟ್ರೀಯ ಆರೋಗ್ಯ ಅಭಿ ಯಾನದ ವಿವಿಧ ಕಾರ್ಯಕ್ರಮದಡಿ ಅನುಮೋದನೆಯಾಗಿ ಖಾಲಿ ಇರುವ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ಮಾರ್ಗಸೂಚಿ ಅನ್ವಯ ನಿಯಮಾನುಸಾರ ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ಷರತ್ತು ಮತ್ತು ನಿಬಂಧನೆಗೆ ಒಳಪಟ್ಟು ದಾಖ ಲಾತಿಗಳನ್ನು ಪರಿಶೀಲನೆಯನ್ನು ನ.13 ರಂದು ಬೆಳಿಗ್ಗೆ 10.30 ಗಂಟೆಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ ಇಲ್ಲಿ ನಡೆಸಲಾಗುವುದು.

District Coordinator (CPHC-UHC) ಹುದ್ದೆ-1, ಮಾಸಿಕ ವೇತನ ರೂ 30,000, District Epidemiologist (IDSP) ಹುದ್ದೆ -1, ಮಾಸಿಕ ವೇತನ ರೂ 30,000, Block Epidemiologist: (IDSP-BPHU) ಹುದ್ದೆ -4, ಮಾಸಿಕ ವೇತನ ರೂ 30,000.

ಕಿಯೋನಿಕ್ಸ್ ಹಾಗೂ ಸರ್ಕಾರ ದಿಂದ ಮಾನ್ಯತೆ ಪಡೆದ ಸಂಸ್ಥೆಗಳಲ್ಲಿ ಕಂಪ್ಯೂಟರ್ ಸಾಕ್ಷರತೆ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರಬೇಕು ಹಾಗೂ ಕಡ್ಡಾಯ MS Office ಬಗ್ಗೆ ಪ್ರಮಾಣ ಪತ್ರ ಹೊಂದಿರತಕ್ಕದ್ದು.

ನ.3 ರಿಂದ 11 ರವರೆಗೆ ಜಿಲ್ಲಾ ಸರ್ವೇಕ್ಷಣಾಧಿಕಾರಿಗಳ ಕಛೇರಿ ಹಾಸನ ರವರಿಂದ ಅರ್ಜಿಗಳನ್ನು ಪಡೆದು ಭರ್ತಿ ಮಾಡಿ ಸಂಬಂಧಪಟ್ಟ ದಾಖಲಾತಿಗಳೊಂದಿಗೆ ಅರ್ಜಿಗಳನ್ನು ಸಲ್ಲಿಸುವುದು. ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ಮೇಲಿನ ದಿನಾಂಕ ದಂದು ಮೂಲ ದಾಖಲಾತಿಗ ಳೊಂದಿಗೆ ಪರಿಶೀಲನೆಗೆ ಹಾಜರಾಗಲು ಸೂಚಿಸಿದೆ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ನ.11 ಆಗಿದೆ.

https://hassan.nic.in/:(NHM ನೇಮಕಾತಿ 2025) https://hfwcom. karnataka. gov. in/: (News and Events : NHM Contractual, Recruitment Notification of Hassan District)

**ಸೂಚನೆ:** ವಿದ್ಯಾರ್ಹತೆ, ಅನು ಭವ, ವಯೋಮಿತಿ ಮತ್ತು ಇನ್ನಿತರೆ ಮಾಹಿತಿಗಾಗಿ ಈ ಕಛೇರಿಯ ಸೂಚನಾ ಫಲಕದಲ್ಲಿ ಹಾಗೂ ಮೇಲ್ಕಂಡ ವೆಬ್ ಸೈಟ್‌ಗಳಿಗೆ ಸಂಪರ್ಕಿಸಿ ಪಡೆಯಬಹು ದಾಗಿದೆ ಎಂದು ತಿಳಿಸಿದ್ದಾರೆ.

# ಭಾರತದಲ್ಲಿ ನೈಜ ಘಟನೆಗಳೇ ಇತಿಹಾಸ : ಸಿಮೆಂಟ್ ಮಂಜು

• ಪ್ರಜೋದಯ ವರದಿ

**ಸಕಲೇಶಪುರ:** ಪರದೇಶಗಳಲ್ಲಿ ಇತಿಹಾಸವೆಂದರೆ ಕಟ್ಟಡಗಳು ಮಾತ್ರ, ಆದರೆ ಭಾರತದಲ್ಲಿ ನೈಜ ಘಟನೆಗಳೇ ಇತಿಹಾಸವಾಗಿ ಹೇಳಲ್ಪಡುವ ಸಂಪ್ರದಾಯವಿದೆ ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

ತಾಲ್ಲೂಕು ಪಂಚಾಯಿತಿ ಆವರಣದಲ್ಲಿ ನಡೆದ 538ನೇ ಕನಕ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ನಮ್ಮ ಹಿರಿಯರು ತ್ಯಾಗಮಯ ಜೀವನದಿಂದ ಸಮಾಜಕ್ಕೆ ಮಾರ್ಗದರ್ಶನ ನೀಡಿದರು. ಇಂತಹ ಪುರುಷೋತ್ತಮರನ್ನು ನೆನಪಿಸಿಕೊಳ್ಳುವುದು ನಮ್ಮೆಲ್ಲರ ಕರ್ತವ್ಯ. ಅಧಿಕಾರಿಗಳು, ಜನ ಪ್ರತಿನಿಧಿಗಳು ಹಾಗೂ ಸಾಮಾನ್ಯ ನಾಗರಿಕರೆಲ್ಲರೂ ಇಂತಹ ಭಕ್ತಿ ಪರಂಪರೆಯ ಆಚರಣೆಯಲ್ಲಿ ಪಾಲ್ಗೊಂಡರೆ ಅದು ಸಮಾಜದಲ್ಲಿ ಏಕತೆಯ ಭಾವನೆಯನ್ನು ಬಲಪಡಿಸುತ್ತದೆ ಎಂದು ಹೇಳಿದರು.




ಕನಕದಾಸರು ಹಾಗೂ ಇವರಿಗೆ ಸಮಾನರಾದ ಮಹನೀಯರು ಮಾನವೀಯತೆ, ಸಮಾನತೆ ಮತ್ತು ನಂಬಿಕೆಯ ನೈಜ ಉದಾಹರಣೆ. ಅವರ ಜೀವನವು ನಮ್ಮೆಲ್ಲರಿಗೂ ಪ್ರೇರಣೆ. ಬೇರೆ ದೇಶಗಳಲ್ಲಿ ಇತಿಹಾಸವೆಂದರೆ ಕಲ್ಲಿನ ಕಟ್ಟಡಗಳು, ಕೋಟೆಗಳು. ಆದರೆ ನಮ್ಮ ದೇಶದಲ್ಲಿ ಇತಿಹಾಸವೆಂದರೆ ಭಕ್ತರ ತ್ಯಾಗ, ಅವರ ಜೀವನ ಪಾಠಗಳು ಮತ್ತು ನೈಜ ಘಟನೆಗಳು. ಈ ನೈಜ ಇತಿಹಾಸವೇ ಭಾರತದ ಶಕ್ತಿ ಎಂದು ಅವರು ಅಭಿಪ್ರಾಯಪಟ್ಟರು.

ತಾಲೂಕು ಕಾರ್ಯ ನಿರ್ವಹಣಾಧಿಕಾರಿ ಗಂಗಾಧರ ಮಾತನಾಡಿ, ಕನಕದಾಸರು ಕೇವಲ ಭಕ್ತರಾಗಿಯೇ ಅಲ್ಲ, ಸಾಮಾಜಿಕ ಸುಧಾರಕರಾಗಿಯೂ ಪ್ರಸಿದ್ಧರಾಗಿದ್ದಾರೆ. ಅವರು ವರ್ಣಭೇದ, ಜಾತಿಭೇದದ ವಿರುದ್ಧ ನಿಂತು ಮಾನವ ಕುಲವೇ ಒಂದು ಎಂಬ ಸಂದೇಶ ನೀಡಿದ್ದಾರೆ. ಪ್ರಸ್ತುತ ಕಾಲಘಟ್ಟದಲ್ಲೂ ಸಹ ದಲಿತರ ಮತ್ತು ಅಲ್ಪಸಂಖ್ಯಾತರ ಮೇಲೆ ದಿನನಿತ್ಯ ಹಲವು ರೀತಿಯಲ್ಲಿ ದೌರ್ಜನ್ಯಗಳು ನಡೆಯುತ್ತಿವೆ. ನಮ್ಮ ತಾಲೂಕಿನ ಬೆಳಗೋಡು ಹೋಬಳಿಯ ಭಾಗ್ಯ ಗ್ರಾಮದಲ್ಲಿ ಅಲ್ಪಸಂಖ್ಯಾತರಿಗೆ ಸೇರಿದ ಸ್ಮಶಾನದಲ್ಲಿ ಸವ ಸಂಸ್ಕಾರಕ್ಕೆ ಮುಂದಾದಾಗ, ಸಮೀಪದ ನಿವಾಸಿಗಳು ನಮ್ಮ ಮನೆಯ ಮುಂದೆ ನೀವು ಸಂಸ್ಕಾರ ಮಾಡುವುದು ಸರಿಯಲ್ಲ ಎಂದು ಹೇಳಿ ವಿರೋಧ ವ್ಯಕ್ತಪಡಿಸಿರುವ ಘಟನೆ ಸೇರಿದಂತೆ ದೇಶದ ಯುಪಿ ಹಾಗೂ ರಾಜ್ಯದ ಇತರ ಭಾಗಗಳಲ್ಲಿಯೂ ಇಂತಹ ತಾರತಮ್ಯಗಳು ಮುಂದುವರಿದಿವೆ. ಕನಕದಾಸರ ಕಾಲದಲ್ಲಿ ಈ ಅನ್ಯಾಯಗಳು ಉತ್ತುಂಗದಲ್ಲಿದ್ದವು ಇವುಗಳನ್ನ ಇವುಗಳ ವಿರುದ್ಧ ಹೋರಾಟ ನಡೆಸಿ ಭಕ್ತ ಕನಕದಾಸರಾದರು. ಇಂದಿನ ಪೀಳಿಗೆ ಕನಕದಾಸರ ಜೀವನ ಮೌಲ್ಯಗಳನ್ನು ಅರಿತು, ಅವನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಶಿಕ್ಷಣದ ಮೂಲಕ ಭಕ್ತಿ ಮತ್ತು ಮಾನವೀಯತೆ ಬೆಳೆಸುವುದು ಕಾಲದ ಅವಶ್ಯಕತೆ ಎಂದು ಹೇಳಿದರು.

ಕುರುಬ ಸಮಾಜದ ತಾಲ್ಲೂಕು ಅಧ್ಯಕ್ಷ ಸೋಮೇಗೌಡ ಮಾತನಾಡಿ, ಕನಕದಾಸರು ದೇವರ ಭಕ್ತರಾಗಿದ್ದಷ್ಟೇ ಅಲ್ಲ, ಅಸಹಿಷ್ಣುತೆಯ ವಿರುದ್ಧ ಹೋರಾಡಿದ ಧೈರ್ಯಶಾಲಿ ತತ್ವಜ್ಞಾನಿ. ಅವರು ತೋರಿಸಿದ ಮಾರ್ಗವೇ ಸಮಾನತೆ ಮತ್ತು ಸೌಹಾರ್ದತೆಯ ದಾರಿ. ನಮ್ಮಲ್ಲಿ ಎಲ್ಲರಿಗೂ ಅವರ ಬೋಧನೆ ಅಗತ್ಯ. ಅವರು ಸಮಾಜದ ಅಡಿಪಾಯವನ್ನು ಬಲಪಡಿಸಿದ ನಿಜವಾದ ಕ್ರಾಂತಿಕಾರರು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಸಮಾಜದ ಮುಖಂಡರಾದ ರಾಮೇಗೌಡ, ಪ್ರಾಂಶುಪಾಲ ಸತೇಂದ್ರ, ಕಾಂಗ್ರೆಸ್ ಮುಖಂಡ ವೈ.ಪಿ. ರಾಜೇಗೌಡ ಮತ್ತಿತರರು ಉಪಸ್ಥಿತರಿದ್ದರು.

## ಅರ್ಜಿ ಸಲ್ಲಿಸಲು ಅವಧಿ ವಿಸ್ತರಣೆ

• ಪ್ರಜೋದಯ ವರದಿ

**ಹಾಸನ:** ಪಿಯುಸಿ ಹೊರತುಪಡಿಸಿ ಉಳಿದ ಮೆಟ್ರಿಕ್ ನಂತರದ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅರ್ಹ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಹಾಗೂ ಪ್ರವರ್ಗ-1 ರ ಅಲೆಮಾರಿ/ ಅರೆ ಅಲೆಮಾರಿ ವಿದ್ಯಾರ್ಥಿಗಳಿಂದ, 2025-26ನೇ ಸಾಲಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೂಲಕ ನೀಡಲಾಗುತ್ತಿರುವ ಮೆಟ್ರಿಕ್ - ನಂತರದ ವಿದ್ಯಾರ್ಥಿ ವೇತನ, ಅಲೆಮಾರಿ/ ಅರೆಅಲೆಮಾರಿ ಜನಾಂಗದ ಮೆಟ್ರಿಕ್ ನಂತರದ ಅರ್ಹತಾ ವಿದ್ಯಾರ್ಥಿ ವೇತನ, ಶುಲ್ಕ ಮರುಪಾವತಿ ಮತ್ತು ವಿದ್ಯಾಸಿರಿ- ಊಟ ಮತ್ತು ವಸತಿ ಸಹಾಯ ಯೋಜನೆ, ಸೌಲಭ್ಯಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದ್ದು, ದಿನಾಂಕ 15-11-2025ಕ್ಕೆ ಅವಧಿ ವಿಸ್ತರಿಸಲಾಗಿದೆ. ಅರ್ಹ ವಿದ್ಯಾರ್ಥಿಗಳು ಈ ಸೌಲಭ್ಯಗಳನ್ನು ಸದುಪಯೋಗ ಪಡೆದುಕೊಳ್ಳಬೇಕು.

ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕಾದ ವೆಬ್‌ಸೈಟ್ ವಿಳಾಸ https://ssp.postmatric.karnataka.gov.in, ಮಾಹಿತಿಗಾಗಿ ಭೇಟಿ ನೀಡಬೇಕಾದ ವೆಬ್‌ಸೈಟ್ ವಿಳಾಸ https://bcwd.karnataka.gov.in/, ಇಲಾಖಾ ಸಹಾಯವಾಣಿ ದೂ.ಸಂಖ್ಯೆ ಮತ್ತು ಇಮೇಲ್ 8050770005 bcwdhelpline@gmail.com , ರಾಜ್ಯವಿದ್ಯಾರ್ಥಿವೇತನ ತಂತ್ರಾಂಶದ ಸಹಾಯವಾಣಿ ಮತ್ತು ಇಮೇಲ್ postmetrichelp@karnataka.gov.in 1902 ಸಂಪರ್ಕಿಬಹುದಾಗಿದೆ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ತಿಳಿಸಿದ್ದಾರೆ.

## ವಿಕಲಚೇತನ ವಿದ್ಯಾರ್ಥಿಗಳು ಇ-ಸ್ಕಾಲರ್‌ಶಿಪ್‌ಗೆ ಅರ್ಜಿ ಸಲ್ಲಿಸಲು ಅವಧಿ ವಿಸ್ತರಣೆ

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ವಿಕಲಚೇತನ ವಿದ್ಯಾರ್ಥಿಗಳು ಕೇಂದ್ರ ಸರ್ಕಾರದ ನ್ಯಾಯ ಮತ್ತು ಸಬಲೀಕರಣ ಇಲಾಖೆಯಿಂದ 2025-26 ಸಾಲಿನಲ್ಲಿ ನ್ಯಾಷನಲ್ ಇ-ಸ್ಕಾಲರ್‌ಶಿಪ್ ಪಡೆಯಲು ವಿಕಲಚೇತನ ವಿದ್ಯಾರ್ಥಿಗಳಿಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಅವಧಿ ವಿಸ್ತರಿಸಲಾಗಿದೆ.

ಪ್ರಿ-ಮೆಟ್ರಿಕ್ ಮತ್ತು ಪೋಸ್ಟ್ ಮೆಟ್ರಿಕ್ ನವೆಂಬರ್-15ರೊಳಗಾಗಿ ಆನ್‌ಲೈನ್ ಅರ್ಜಿ ಸಲ್ಲಿಸಬಹುದು. ಮೆಟ್ರಿಕ್ ನಂತರದಲ್ಲಿ ವ್ಯಾಸಂಗದಲ್ಲಿನ ವಿದ್ಯಾರ್ಥಿಗಳಿಗೆ ನವೆಂಬರ್-15 ರವರೆಗೆ ಅವಧಿ ವಿಸ್ತರಣೆ ಮಾಡಲಾಗಿದೆ. 2025-26ನೇ ಸಾಲಿನಲ್ಲಿ ನ್ಯಾಷನಲ್ ಇ-ಸ್ಕಾಲರ್‌ಶಿಪ್ ಪೋರ್ಟಲ್‌ನಲ್ಲಿ ವಿಕಲಚೇತನರ ವಿದ್ಯಾರ್ಥಿ ವೇತನ ಯೋಜನೆಯಡಿ ವಿಕಲಚೇತನ ವಿದ್ಯಾರ್ಥಿಗಳಿಗೆ ತರಗತಿಗನುಗುಣವಾಗಿ ವಿದ್ಯಾರ್ಥಿ ವೇತನ ಮಂಜೂರು ಮಾಡುವ ಸಂಬಂಧ, ಶೇ.40ಕ್ಕಿಂತ ಹೆಚ್ಚು ಅಂಕಗಳಿಸಿ ಉತ್ತೀರ್ಣರಾಗಿರುವ ವಿಕಲಚೇತನ ವಿದ್ಯಾರ್ಥಿ/ನಿಯರುಗಳಿಂದ ಅರ್ಜಿಗಳನ್ನು ಆನ್‌ಲೈನ್‌ನಲ್ಲಿ ಆಹ್ವಾನಿಸಲಾಗಿದೆ.

ವಿಕಲಚೇತನ ವಿದ್ಯಾರ್ಥಿಗಳು ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸುವ ವಿಕಲಚೇತನರು ವ್ಯಾಸಂಗ ಮಾಡುತ್ತಿರುವ ಶಾಲಾ ಕಾಲೇಜುಗಳ ಮೂಲಕ ಆನ್‌ಲೈನ್ ಸಲ್ಲಿಸಬೇಕಾಗಿರುತ್ತದೆ. ಇತರೆ ಮಾಹಿತಿಗಾಗಿ ದೂರವಾಣಿ ಸಂಖ್ಯೆ:08172-264546/295546 ನ್ನು ಸಂಪರ್ಕಿಸಲು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ತಿಳಿಸಿದ್ದಾರೆ.

## ಜಪಾನ್ ಕರಾವಳಿಯಲ್ಲಿ 6.7 ತೀವ್ರತೆಯ ಪ್ರಬಲ ಭೂಕಂಪ; ಸುನಾಮಿ ಎಚ್ಚರಿಕೆ



• ಪ್ರಜೋದಯ ವರದಿ

**ಟೋಕಿಯೋ:** ಜಪಾನ್ ಕರಾವಳಿಯಲ್ಲಿ ಭಾನುವಾರ 6.7 ತೀವ್ರತೆಯ ಪ್ರಬಲ ಭೂಕಂಪ ಸಂಭವಿಸಿದ್ದು, ಜಪಾನ್‌ನ ಹವಾಮಾನ ಸಂಸ್ಥೆ ಇವಾಟೆ ಪ್ರಾಂತ್ಯಕ್ಕೆ ಸುನಾಮಿ ಎಚ್ಚರಿಕೆ ನೀಡಿದೆ ಎಂದು ಜಪಾನ್ ಟೈಮ್ಸ್ ವರದಿ ಮಾಡಿದೆ.

ಭಾನುವಾರ ಸಂಜೆ 5:03(ಸ್ಥಳೀಯ ಸಮಯ) ಇವಾಟೆಯಲ್ಲಿ ಭೂಕಂಪ ಸಂಭವಿಸಿದ್ದು, ಒಂದು ಮೀಟರ್ (ಮೂರು ಅಡಿ) ಎತ್ತರದವರೆಗೆ ಸುನಾಮಿಯ ಸಾಧ್ಯತೆ ಇದೆ. ಇದಕ್ಕೂ ಮೊದಲು, ಭೂಕಂಪಶಾಸ್ತ್ರದ ರಾಷ್ಟ್ರೀಯ ಕೇಂದ್ರವು ಜಪಾನ್‌ನ ಇವಾಟೆ ಪ್ರಾಂತ್ಯದ ಕರಾವಳಿಯ ಉತ್ತರ ಪೆಸಿಫಿಕ್ ಮಹಾಸಾಗರದ ಬಳಿ ಮಧ್ಯಾಹ್ನ 13:33 ಕ್ಕೆ 6.6 ತೀವ್ರತೆಯ ಭೂಕಂಪ ಸಂಭವಿಸಿದೆ ಎಂದು ಹೇಳಿದೆ.

ಎನ್‌ಸಿಎಸ್ ಪ್ರಕಾರ, ಭೂಕಂಪವು ಭೂಮಿಯ ಹೊರಪದರದ ಕೆಳಗೆ 30 ಕಿಮೀ ಆಳದಲ್ಲಿ ಸಂಭವಿಸಿದೆ. ಭಾರತದ ರಾಷ್ಟ್ರೀಯ ಭೂಕಂಪಶಾಸ್ತ್ರ ಕೇಂದ್ರ ವರದಿ ಮಾಡಿರುವ ಪ್ರಕಾರ, ಉತ್ತರ ಪೆಸಿಫಿಕ್ ಮಹಾಸಾಗರದಲ್ಲಿ 39.51 ಅಕ್ಷಾಂಶ ಮತ್ತು 143.38 ರೇಖಾಂಶದಲ್ಲಿ 30 ಕಿ.ಮೀ ಆಳದಲ್ಲಿ 6.6 ತೀವ್ರತೆಯ ಭೂಕಂಪ ಸಂಭವಿಸಿದೆ.

### ವಿಶ್ವದ ಆಧ್ಯಾತ್ಮಿಕ ರಾಜಧಾನಿ ಮಾಡುವ ಗುರಿ : ಪ್ರಧಾನಿ ನರೇಂದ್ರ ಮೋದಿ

# ಉತ್ತರಾಖಂಡದಲ್ಲಿ 8,000 ಕೋ.ರೂ. ಯೋಜನೆಗಳಿಗೆ ಚಾಲನೆ

• ಪ್ರಜೋದಯ ವರದಿ

**ಡೆಹ್ರಾಡೂನ್:** ಉತ್ತರಾಖಂಡದ ಬೆಳ್ಳಿ ಮಹೋತ್ಸವ ಆಚರಣೆಯ ಅಂಗವಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ಅರಣ್ಯ ಸಂಶೋಧನಾ ಸಂಸ್ಥೆ(ಎಫ್‌ಆರ್‌ಐ) ಮೈದಾನದಲ್ಲಿ 8,260 ಕೋ.ರೂ.ಗಳಿಗೂ ಹೆಚ್ಚು ಮೌಲ್ಯದ ಅಭಿವೃದ್ಧಿ ಯೋಜನೆಗಳ ಉದ್ಘಾಟನೆ ಮತ್ತು ಶಂಕುಸ್ಥಾಪನೆ ಮಾಡಿದರು.

ಬಳಿಕ ಬೃಹತ್ ಜನ ಸಮೂಹವನ್ನು ಉದ್ದೇಶಿಸಿ ಮಾತನಾಡಿದ ಪ್ರಧಾನಿ ಮೋದಿ, ದೇವಭೂಮಿ ಉತ್ತರಾಖಂಡ್ ಕಾ ಮೇರಾ ಭಾಯಿ ಬಂಧು, ದೀದಿ ಭೂಲಿ, ದಾನ ಸ್ಯಾನಾ, ಆಪ್ ಸಭ್ಯತೇನ್ ಮ್ಯಾರ್ ನಮಸ್ಕಾರ್ (ದೇವಭೂಮಿ ಉತ್ತರಾಖಂಡದ ನನ್ನ ಸಹೋದರ ಸಹೋದರಿಯರೇ, ಹಿರಿಯರೇ ಮತ್ತು ಯುವಕರೇ, ನಾನು ನಿಮ್ಮೆಲ್ಲರಿಗೂ ನನ್ನ ಗೌರವಯುತ ಸಮಸ್ಕಾರಗಳು). ಎಂದರು.

ಉತ್ತರಾಖಂಡವು ಭಾರತದ ಆಧ್ಯಾತ್ಮಿಕ ಹೃದಯ ಬಡಿತವಾಗಿ ಕಾರ್ಯನಿರ್ವಹಿಸುತ್ತಿದೆ.



ಪ್ರತಿ ವರ್ಷ ಲಕ್ಷಾಂತರ ಯಾತ್ರಿಕರನ್ನು ಸೆಳೆಯುತ್ತದೆ. ಈ ಭಕ್ತರ ಪ್ರಯಾಣವು ಭಕ್ತಿಯ ಮಾರ್ಗವನ್ನು ತೆರೆಯುತ್ತದೆ ಮತ್ತು ಅದೇ ಸಮಯದಲ್ಲಿ ಉತ್ತರಾಖಂಡದ ಆರ್ಥಿಕತೆಗೆ ಹೊಸ ಶಕ್ತಿಯನ್ನು ತುಂಬುತ್ತದೆ ಎಂದು ತಿಳಿಸಿದರು.

ರಾಜ್ಯ ರಚನೆಯಾದಾಗಿನಿಂದ ಆರ್ಥಿಕ ಮತ್ತು ಮೂಲಸೌಕರ್ಯ ಕ್ಷೇತ್ರದಲ್ಲಿ ಆಗಿರುವ ನಾಟಕೀಯ ಬದಲಾವಣೆಯನ್ನು ಪ್ರಧಾನಿ ಮೋದಿ ಎತ್ತಿ ತೋರಿಸಿದರು. ಇಪ್ಪತ್ತೈದು ವರ್ಷಗಳ ಹಿಂದೆ, ಉತ್ತರಾಖಂಡದ ವಾರ್ಷಿಕ ಬಜೆಟ್ ಸುಮಾರು 4,000 ಕೋಟಿ ರೂ.ಗಳಾಗಿತ್ತು; ಇಂದು ಅದು 1 ಲಕ್ಷ ಕೋಟಿ ರೂ.ಗಳನ್ನು ದಾಟಿದೆ. ಪ್ರಮುಖ ವಲಯಗಳಲ್ಲಿನ ಪ್ರಗತಿಯನ್ನು ಮತ್ತಷ್ಟು ಪಟ್ಟಿ ಮಾಡಿದ ಪ್ರಧಾನಿ ಮೋದಿ, ವಿದ್ಯುತ್ ಉತ್ಪಾದನೆ ನಾಲ್ಕು ಪಟ್ಟು ಹೆಚ್ಚಾಗಿದೆ, ರಸ್ತೆಗಳ ಉದ್ದ ದ್ವಿಗುಣಗೊಂಡಿದೆ ಮತ್ತು ವೈದ್ಯಕೀಯ ಕಾಲೇಜುಗಳ ಸಂಖ್ಯೆ ಒಂದರಿಂದ ಹತ್ತಕ್ಕೆ ಏರಿದೆ ಎಂದರು.

ಇಂದು ಉದ್ಘಾಟಿಸಲಾದ ಬೃಹತ್ ಅಭಿವೃದ್ಧಿ ಪ್ಯಾಕೇಜ್ ಕುಡಿಯುವ ನೀರು, ನೀರಾವರಿ, ತಾಂತ್ರಿಕ ಶಿಕ್ಷಣ, ಇಂಧನ, ನಗರಾಭಿವೃದ್ಧಿ, ಕ್ರೀಡೆ ಮತ್ತು ಕೌಶಲ್ಯ ಅಭಿವೃದ್ಧಿ ಸೇರಿ ನಿರ್ಣಾಯಕ ಕ್ಷೇತ್ರಗಳನ್ನು ಒಳಗೊಂಡಿದೆ. ಹೆಚ್ಚುವರಿಯಾಗಿ, ಅವರು 28,000 ರೈತರಿಗೆ ಬೆಳೆ ವಿಮಾ ಪ್ರಯೋಜನಗಳಿಗಾಗಿ 62 ಕೋ.ರೂ.ಗಳನ್ನು ಡಿಜಿಟಲ್ ರೂಪದಲ್ಲಿ ವರ್ಗಾಯಿಸಿದರು.

ಬದ್ರಿ ಹಸುವಿನ ತುಪ್ಪಕ್ಕೆ ಇತ್ತೀಚೆಗೆ ಟ್ಯಾಗ್ ಸಿಕ್ಕಿರುವುದನ್ನು ಪ್ರಧಾನಿ ಮೋದಿ ಶ್ಲಾಘಿಸಿದರು ಮತ್ತು ಅದನ್ನು ಒಂದು ಪ್ರಮುಖ ಸಾಧನೆ ಎಂದು ಕರೆದರು. ಬದ್ರಿ ಹಸು ಉತ್ತರಾಖಂಡದ ಹಳ್ಳಿಗಳ ಪ್ರತಿಯೊಂದು ಮನೆಯ ಹೆಮ್ಮೆ ಎಂದು ಹೇಳಿದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK